Mr SPEAKER.—I would appeal to the Government to try to make it as early as possible and then we shall take it over later.

Sri S. NIJALINGAPPA.—Yes, Sir.

NON-OFFICIAL RESOLUTION.

Re: Appointment of a Committee to investigate into malpractices, etc. in Government and Semi-Government Administrative and Corporate Bodies.

(Debate continued.)

†ಶ್ರೀ ಎಸ್. ಎಂ. ಕೃಷ್ಣ.—ಅಧ್ಯಕ್ಷರೇ, ಈಗ ಸಭೆಯ ಮುಂದಿರತಕ್ಕ ವಿಚಾರ, ಅಂದ್ರೆ ಈ ನಿರ್ಣಯ ಬಹಳ ಜರೂರಾದದ್ದು. ಈ ಒಂದು ವ್ಯಾಧಿಯೇನಿವೆ ಇದು ರಾಷ್ಟ್ರೀಯವಾಗಿ ವ್ಯಾಪಿಸಿ ಕೊಂಡಿರುವಂಥ ಒಂದು ದೊಡ್ಡ ವ್ಯಾಧಿಯಾಗಿದೆ. ಆದುದರಿಂದ ನಾವು ಇದಕ್ಕೆ ಒಂದು ರಾಷ್ಟ್ರೀಯ ರೂಪವಾದ ಪರಿಹಾರೋಪಾಯವನ್ನೇ ಕಂಡುಹಿಡಿಯಬೇಕಾಗಿದೆ. ಈ ಭ್ರಷ್ಟಾಚಾರ, ಲಂಚಾವತಾರ ಎಂಬುದು ದಿನದಿನಕ್ಕೂ ಬೃಹದಾಕಾರ ತಾಳುತ್ತಿದೆ.

[MR. DEPUTY SPEAKER in the Chair.]

ಇಂತಹ ಸಮಯದಲ್ಲಿ ನರ್ವೇ ಸಾಮಾನ್ಯವಾಗಿ ಹಿಂದುಳಿದಿರತಕ್ಕ ಈ ಸ್ಥಿತಿ ಇದ್ದರೂ ಕೂಡ ಇದರತ್ತ ಗಮನ ಕೊಡಬೇಕಾದರೆ ಮತ್ತು ಅವಶ್ಯಕವಾದ ಇದರ ಅಭಿವೃದ್ಧಿಗೆ ಒಂದು ಕಟ್ಟು ನಿಟ್ಟಾದ ಕಾರ್ಯಕ್ರಮವನ್ನು ಕೂಡ ಹಾಕಿಕೊಳ್ಳಬೇಕಾಗಿದೆ. ಸ್ವಾತಂತ್ರ್ಯ ಬಂದು ಹದಿನೈದು ವರ್ಷಗಳಾದ ಮೇಲೆ ನಾವು ಈ ಭ್ರಷ್ಟಾಚಾರ, ಲಂಚಗುಳಿತನದ ಪ್ರಮಾಣವನ್ನು ವಿಕಪ್ರಕಾರವಾಗಿ ಗಮನಿಸಿದರೆ ಬಹುಶಃ ಈ ವ್ಯಾಧಿ ನೂರಕ್ಕೆ ನೂರರಷ್ಟು ಹೆಚ್ಚಿಕೊಂಡು ಬರುತ್ತಿದೆ ಎನ್ನುವುದರಲ್ಲಿ ಎರಡು ಅಭಿಪ್ರಾಯಕ್ಕೆ ನಮ್ಮ ದೇಶದಲ್ಲಿ ಅವಕಾಶ ಕಂಡುಬರುವಂತಿಲ್ಲ. ಯಾವ ಸರಕಾರದ ಮೇಲೆ ಯಾವುದೇ ಅಧಿಕಾರ ನಡೆಸತಕ್ಕ ಆಡಳಿತದ ಬಗ್ಗೆ ಮತ್ತು ಇನ್ನು ಹಲವಾರು ಸ್ಯಾಟ್ಯುಟರಿ ಬಾಡೀಸ್ ಗಳ ಬಗ್ಗೆ ಮೇಲಿಂದ ಮೇಲೆ ಟೀಕೆಗಳು, ಆರೋಪಣೆಗಳು ಇವುಗಳೆಲ್ಲ ಮೇಲಿಂದ ಬರುತ್ತಲೇ ಬಂದಿದೆ. ನಿನ್ನೆ ತಾನೇ ಈ ಸಭೆಯಲ್ಲಿ ಎರಡು ಪರಸ್ಪರ ಸಹಕಾರ ಸಂಘಗಳ ಬಗ್ಗೆ ಬೇಕಾದಷ್ಟು ಹಣದ ದುರುಪಯೋಗವಾಗಿದೆಯೇ ಎನ್ನುವ ವಿಚಾರದಲ್ಲಿ ಸರಕಾರ ದುರುಪಯೋಗ ನಡೆದಿದೆ ಎಂದು ಒಪ್ಪಿಕೊಳ್ಳಲೇ ಬೇಕಾಯಿತು; ಎಂದ ಮೇಲೆ, ಸರಕಾರದ ಜವಾಬುದಾರಿ ಈ ವಿಚಾರದ ಮೇಲೆ ಎಷ್ಟರಮಟ್ಟಿಗೆ ಇದೆ ಎನ್ನುವುದನ್ನು ನಾವೂ ನೀವೂ ಕುಳಿತು ಆಲೋಚನೆ ಮಾಡಬೇಕಾಗಿದೆ. ಒಂದು ಕಾರಣ ಕೊಡುತ್ತೇನೆ. ಸ್ವಾತಂತ್ರ್ಯ ಬಂದಿದೆ. ಈ ಒಂದು ಸಂಘಟಿತ ಸಮಯದಲ್ಲಿ ಇಂತಹ ಅವ್ಯವಹಾರಗಳು ನಡೆಯುತ್ತಿರುವುದು ಸಾಧಾರಣವಾಗಿದೆ. ಇದನ್ನು ಪರೀಕ್ಷೆ ಮಾಡುವುದು ತರವಲ್ಲ ಎನ್ನತಕ್ಕವಾದವೂ ಕೂಡ ನಮ್ಮ ಮುಂದೆ ಬಂದಿದೆ. ಮತ್ತೊಂದು ವಾದ, ನಮ್ಮ ದೇಶದಲ್ಲಿ ಲಂಚಗುಳಿತನ ವ್ಯಾಪಕವಾಗಿರಬೇಕಾದರೆ, ಮತ್ತು ಹೆಚ್ಚಾಗಿರಬೇಕಾದರೆ ಜವಾಬ್ದಾರಿ ಸರಕಾರವನ್ನು ಸ್ಥಾಪನೆ ಮಾಡುವಾಗ ಜನತೆಯ ಮೇಲೆ ಎಷ್ಟುಮಟ್ಟಿನ ಜವಾಬುದಾರಿ ಇತ್ತೋ ಅಷ್ಟೇ ನಮಗಾದ ಜವಾಬುದಾರಿ ಹಾಗೂ ಪಾಲುಗಾರಿಕೆ ಇತರರೆಲ್ಲರಲ್ಲಿಯೂ ಇರಬೇಕೆಂದು ಕಾಂಗ್ರೆಸು ಪಕ್ಷದ ನಮ್ಮ ಸ್ನೇಹಿತರಾದ ಶ್ರೀಮಾನ್ ಅಪ್ಪಣ್ಣನವರು ಈ ಸಭೆಯ ಮುಂದೆ ಮಂಡಿಸಿದ್ದಾರೆ. ಆದರೆ ಇದು ಅಷ್ಟು ಸುಲಭವಲ್ಲ. ಅಷ್ಟು ಲಘುವಾಗಿ ಸರಕಾರ ಜನತೆಯ ಮೇಲೆ ತರೆಹಾಕುವ ಯೋಚನೆ ಮಾಡಿ ತಪ್ಪಿಸಿಕೊಳ್ಳುವಂತೆ ನಾವು ಮಾಡುವುದು ತರವಲ್ಲ ಎಂದು ನಾನಾದರೂ ಅಭಿಪ್ರಾಯಪಡುತ್ತೇನೆ. ಜವಾಬುದಾರಿ ಸರಕಾರಗಳು ಬಂದ ಮೇಲೆ ಭ್ರಷ್ಟಾಚಾರದ ಕೂಸುಗಳು ಹಲವಾರು ನಮ್ಮ ದೇಶದಲ್ಲಿ ಜನನಂಖ್ಯೆ ಬೆಳೆಯುವಂತೆ ಅಷ್ಟು ಶೀಘ್ರಗತಿಯಲ್ಲಿ ಬೆಳೆಯುತ್ತಿವೆ. ಈ ಭ್ರಷ್ಟಾಚಾರದ ಕೂಸುಗಳಿಗಾಗಿ ಕಾಂಗ್ರೆಸಿನ ಸರಕಾರ ಜನ್ಮ ತಾಳಿದಂದಿನಿಂದ ಜನ್ಮ ಕೊಡುತ್ತಾ ಬಂದಿದೆ ಎಂದು ಹೇಳಿದರೆ ಆ ಮಾತು ತಪ್ಪಾಗಲಾರದು.

(ಶ್ರೀ ಎಸ್. ಎಂ. ಕೃಷ್ಣ)

ನಾನು ಈ ಸಭೆಗೆ ಈ ಮೊದಲೇ ಅರಿಕೆ ಮಾಡಿಕೊಂಡಂತೆ ಈಗತಾನೇ ಮಾನ್ಯ ಮುಖ್ಯ ಮಂತ್ರಿಗಳು ಕೂಡ ಶರಾವತಿಯ ರಾಜಕೀಯ ಮಾಡುತ್ತಾರೆ ಎಂದರು. ಇದರಲ್ಲಿ ಅಕ್ರಮಗಳು ಅಷ್ಟು ನಡೆದಿಲ್ಲ. ಅದರೂ ಇದರ ಬಗ್ಗೆ ಒಂದು ಶ್ವೇತಪತ್ರವನ್ನು ಹೊರಡಿಸುತ್ತೇನೆ ಎಂದು ಅವರು ಹೇಳಿದ್ದು ಬಹಳ ಆಶ್ಚರ್ಯವನ್ನುಂಟುಮಾಡತಕ್ಕ ಸಮಾಚಾರ. ಮುಖ್ಯ ಮಂತ್ರಿಗಳು ಕಾನ್ಸಿಲ್ಲನಲ್ಲಿ ಶರಾವತಿಯ ವ್ಯವಹಾರದಲ್ಲಿ ನೇರವಾದ ತೊಂದರೆಗಳು ಕಂಡು ಬಂದಿಲ್ಲ ಎಂದು ಮೇಲಿಂದ ಮೇಲೆ ಶರಾವತಿ ಪ್ರಶ್ನೆ ಬಂದಾಗ ಒಂದು ಬಗೆಯ ವಿವರಗಳನ್ನು ಕೊಟ್ಟರತಕ್ಕ ನಂದರ್ಭವುಂಟು. ಅದೇ ಪ್ರಶ್ನೆಗೆ ಅದೇ ವ್ಯವಹಾರಕ್ಕೆ ಸಂಬಂಧಪಟ್ಟ ಹಾಗೆ ಕೆಳಮನೆಯಲ್ಲಿ ಬಂದಾಗ ಅದಕ್ಕೆ ತದ್ವಿರುದ್ಧವಾಗಿ ವಿವರಗಳನ್ನು ಕೂಡ ಕೊಟ್ಟ ನಂದರ್ಭಗಳನ್ನೂ ನಾವು ಕಂಡಿದ್ದೇವೆ. ಎಂದ ಮೇಲೆ ಮುಖ್ಯ ಮಂತ್ರಿಗಳ ಮನಸ್ಸಿನ ಮೇಲೆ ಶರಾವತಿಯ ವ್ಯವಹಾರಗಳು ಹೇಗೆ ನಡೆದಿದೆ ಎನ್ನುವ ವಿಚಾರಗಳಲ್ಲಿ ನಿರ್ಧಾರವಾಗತಕ್ಕಂತಹ ವಿಷಯಗಳನ್ನೇನೂ ಅದದೆ ಶರಾವತಿಯಲ್ಲಿ ಎಲ್ಲರೂ ರಾಜಕೀಯ ಮಾಡುತ್ತಾರೆ ಎನ್ನುವ ಮಾತನ್ನು ಆಡತಕ್ಕದ್ದು ಒಳ್ಳೆಯದಲ್ಲ ಎಂದು ನಾನು ಇಲ್ಲಿ ಕಳಕಳಿಯಿಂದ ಹೇಳುತ್ತೇನೆ. ನಾವು ಶರಾವತಿಯ ಹಗರಣದಲ್ಲಿ ರಾಜಕೀಯವನ್ನು ಮಾಡಬೇಕು ಮತ್ತು ಇದರೊಳಗೇ ನೇನಾಗಿದೆ ಎನ್ನುವ ಶ್ವೇತಪತ್ರವನ್ನು ಹೊರಡಿಸುತ್ತೇವೆಂದು ಹೊರಟವರು ನಾವಲ್ಲ. ಈ ಸರಕಾರದವರು ಒಂದು ವರ್ಷದ ಕೆಳಗೆ ಈ ಶರಾವತಿಯ ಹಗರಣದ ಬಗ್ಗೆ ಮುಖ್ಯ ಮುಂತ್ರಿಗಳು ಒಂದು ಶ್ವೇತ ಪತ್ರವನ್ನು ಹೊರಡಿಸಿದ್ದಿದ್ದರೆ ಇದರ ದೆಸೆಯಿಂದ ಈಚೆಗೆ ಉಂಟಾಗಿರುವ ಹಗರಣಕ್ಕೆಲ್ಲಾ ಬಹುಶಃ ವಿರಾಮ ಕೊಡಬಹುದಾಗಿತ್ತು. ಆದರೆ, ಇದರ ಬಗ್ಗೆ ಮುಖ್ಯ ಮಂತ್ರಿಗಳು ತಮ್ಮದೇ ಆದ ಒಂದು ಅನಿರ್ದಿಷ್ಟತೆಯ ಪರಿಣಾಮವಾಗಿ ಅಂತಹ ಒಂದು ಶ್ವೇತ ಪತ್ರವನ್ನು ಹೊರಡಿಸುವುದನ್ನು ತಡಮಾಡುತ್ತಾ ಬರುತ್ತಿರುವುದರಿಂದ ಈ ಶರಾವತಿಯ ಹಗರಣ ಮತ್ತೆ ಮತ್ತೆ ಬೆಳೆಯುತ್ತ ಬಂದು ಇನ್ನೂ ಜಾಸ್ತಿಯಾಗಿ ಬೆಳೆಯುತ್ತ ಬಂದಿದೆ. ಹೀಗೆ ಬೆಳೆಯುತ್ತ ಬಂದಿರುವ ವಿವಾದಗಳಲ್ಲಿ ನಾವು ಶರಾವತಿಯ ಬಗ್ಗೆ ಯಾವ ನಂಸ್ಥೆಗಳಿಗೆ ನಹಾಯ ಮಾಡಬೇಕೆಂದು ನಾವೇನೂ ನಲಹೆ ಮಾಡಿಲ್ಲ. ಕೇಂದ್ರ ನರಕಾರದವರು ಶರಾವತಿಯ ಬಗ್ಗೆ ಏನೋ ನಹಾಯ ಮಾಡುತ್ತಿದ್ದಾರೆ. ನಾವು ಕೇಂದ್ರ ನರಕಾರದ ದೃಷ್ಟಿಯಿಂದ ಇಲ್ಲಿನ ಮಾನ್ಯ ನದಸ್ಯರ ದೃಷ್ಟಿಯಿಂದ ಶರಾವತಿಯಲ್ಲಿ ನಡೆದಿರುವ ಅವ್ಯವಹಾರಗಳ ದೃಷ್ಟಿಯಿಂದ ಅಲ್ಲಿ ಆಗಿರುವ ಪರಿಸ್ಥಿತಿಗೆ ಇಪ್ಪೊತ್ತು ನಮ್ಮ ಮುಖ್ಯ ಮಂತ್ರಿಗಳು ತಾಟನ್ಥ್ಯದಿಂದಿರುವುದೇ ಕಾರಣವಾಗಿದೆ, ಎಂದು ನಾನು ಈ ಸಭೆಯಲ್ಲಿ ಅರಿಕೆ ಮಾಡಿಕೊಳ್ಳಬೇಕಾಗಿದೆ. ಇದು ಹೆದರಿಕೆ, ಬೆದರಿಕೆಗಳಿಂದ ಹೋಗತಕ್ಕ ಪ್ರನಂಗಗಳಲ್ಲ ಹೆದರಿಕೆ ಬೆದರಿಕೆಗಳನ್ನು ಮಾಡಿಕೊಂಡು ವಿರೋಧ ಪಕ್ಷದ ನ್ಥಾನಗಳನ್ನು ಪಡೆದು ಇಲ್ಲಿ ಕುಳಿತುಕೊಳ್ಳುವಷ್ಟು ಧೈರ್ಯವನ್ನೂ ನಾಹನವನ್ನೂ ಮಾಡುತ್ತಿರಲಿಲ್ಲ. ನಾವು ವಿರೋಧ ಪಕ್ಷದಲ್ಲಿರತಕ್ಕದ್ದು ತ್ಯಾಗ ಕ್ಕಾಗಿ. ತ್ಯಾಗ ಮನೋಭಾವನೆ ಇಲ್ಲದೆ ನಾವು ಒಂದು ಬಿಳೀ ಚೋಪಿಯನ್ನು ಹಾಕಿಕೊಂಡಿದ್ದರೆ ನಾವು ನಮ್ಮ ಎದುರು ಪಕ್ಷದಲ್ಲಿರಬಹುದಾಗಿತ್ತು. ನಾವು ತ್ಯಾಗ ಮಾಡುತ್ತಿರುವುದು ಜನತೆಗೆ ನ್ಯಾಯ ದೊರಕಿಸಿಕೊಡುವುದಕ್ಕಾಗಿ. ಅವರಿಂದ ನಾವು ಈ ವಿರೋಧ ಪಕ್ಷದಲ್ಲಿ ಕುಳಿತಿದ್ದೇವೆ.

Sri GANJI VEERAPPA (Harihar).—I rise to a point of order, Sir. The speech made by the Hon'ble Member amounts to insinuation. What he said in Kannada was:

"ನಾವು ತ್ಯಾಗಕ್ಕಾಗಿ ಬಿಳೀ ಚೋಪಿ ಹಾಕಿಕೊಂಡಿದ್ದರೆ" ಎಂದು ಹೇಳುವುದು ನರಿಯೇ?

ಶ್ರೀ ಎಸ್. ಎಂ. ಕೃಷ್ಣ.—ನ್ಯಾಮಿ, ಮಾನ್ಯ ನದನ್ಯರಾದ ಶ್ರೀಮಾನ್ ಗಾಂಜೀ ವೀರಪ್ಪನವರಲ್ಲಿ ನನಗೆ ಅಪಾರ ಗೌರವವಿದೆ. ಅದೇ ಗೌರವವನ್ನು ನನ್ನ ಬಗ್ಗೆ ಅವರು ರೆನಿಪ್ರೊಕೇಟು ಮಾಡುತ್ತಿದ್ದಾರೆ. ಒಟ್ಟಿನಲ್ಲಿ ಇದು ನತ್ಯವಾದ ಮಾತು. ನನಗೆ ಅಧಿಕಾರದ ಆನೆ ಇದ್ದಿದ್ದರೆ ಬಹುಶಃ ನಾನೂ ಕೂಡ ನಿಮ್ಮ ಪಕ್ಷಕ್ಕೆ ಬಂದು ನೇರಿಕೊಳ್ಳುತ್ತೇನೆಂದು ಹೇಳಿಬಿಟ್ಟರೆ ಅದಕ್ಕೆ ಅಡ್ಡಿ ಮಾಡಿ, ಬೇಡ ಎಂದು ಹೇಳತಕ್ಕ ಜನ ಕೂಡ ನಿಮ್ಮಲ್ಲಿಲ್ಲ. ಆದುದರಿಂದ ಈ ರಾಜ್ಯದಲ್ಲಿ ನಾವು ಮಾಡುತ್ತ ಇರತಕ್ಕ ಕೆಲನವಾದರೂ ಪ್ರಜಾ ಪ್ರಭುತ್ವದ ರಥ ನರಿಯಾಗಿ ನಡೆಯಬೇಕು ಎಂದು. ನುಸೂತ್ರವಾಗಿ ಅದು ಮುಂದೆ ಹೋಗಬೇಕಾದರೆ ಆ ರಥದ ಒಂದು ಚಕ್ರ ನಾವು. ನಮ್ಮದು ಒಂದು ಚಕ್ರ ಹಾಗೂ ಆಡಳಿತ ಪಕ್ಷದ ಒಂದು ಚಕ್ರ, ಇವೆರಡೂ ಚಕ್ರಗಳೂ ನೇರಿ ನಮಗ್ರವಾಗಿ ನಡೆದರೆ, ಆಗ ರಾಜ್ಯದ ರಥ ಎನ್ನುವ ನರಕಾರ ಮುಂದೆ ಹೋಗಬಹುದು ಎನ್ನುವ ಗುರಿ ಪ್ರಜಾ ಪ್ರಭುತ್ವದಲ್ಲಿದೆ. ಯಾವುದಾದರೂ ಒಂದು ಚಕ್ರ ಊನವಾಗಿ ಬರುವುದಾದರೆ ಆಗ ರಾಜ್ಯದ ರಥ ನಡೆಯುವುದಕೆ ನಾಧ್ಯವಿಲ್ಲ ಎನ್ನುವುದನ್ನು ನಾನು ಇಲ್ಲಿ ಮುಖ್ಯ ಮಂತ್ರಿಗಳ ಗಮನಕ್ಕೆ ತರಬಯನುತ್ತೇನೆ

ಇವೊತ್ತು ಹೆದರಿಕೆ ಬೆದರಿಕೆಯಾಗಲೀ, ಭಯವಾಗಲೀ ಮಾಡಲು ಅಧಿಕಾರದಲ್ಲಿಲ್ಲ. ನಿಮ್ಮ ಸರಕಾರದಲ್ಲಿ ನೀವು ಮಾಡುವ ಕೆಲಸ ಸರಿಯಾಗಿ ಮಾಡುತ್ತಿಲ್ಲ ಎಂದು ಪಂಜಾಬಿನಲ್ಲಿನ ಜನ ಪ್ರಧಾನ ಮಂತ್ರಿಗಳಿಗೂ, ರಾಷ್ಟ್ರಾಧ್ಯಕ್ಷರಿಗೂ ಪಂಜಾಬು ಸರಕಾರದ ವಿಷಯವಾಗಿ ಹಲವಾರು ಸ್ಪಷ್ಟವಾದ ಅರ್ಜಿ ದನೆಗಳನ್ನು ಮಾಡಿ ಇವೊತ್ತಿನ ದಿನ ಪಂಜಾಬಿನ ಮುಖ್ಯ ಮಂತ್ರಿಗಳು ಕೂಲಂಕಷವಾದ ನ್ಯಾಯ ವಿಚಾರಣೆಯನ್ನು ಎದುರಿಸಬೇಕಾಗಿದೆ. ಅದು ಇಲ್ಲೂ ಕೂಡ ಸಾಧ್ಯವಾಗಬಹುದು. ಅದನ್ನು ನಾನು ರೂಲ್ ಬಿಟು ಮಾಡುವುದಕ್ಕೆ ಶಕ್ಯವಿಲ್ಲ.

10-00 A.M.

ಏಕೆ ಹೇಳುತ್ತೇನೆಂದರೆ ನಾವು ಸರಕಾರಕ್ಕೆ ಸ್ಪಷ್ಟವಾಗಿ ಒಂದು ರಾಜಕೀಯ ಪಕ್ಷವಾಗಿ ಈ ಶರಾವತಿಯ ಬಗ್ಗೆ ಒಂದು ಅರ್ಜಿಯನ್ನು ಕಳೆದ ಸೆಷನ್ನಿನಲ್ಲಿ ಕೊಟ್ಟಿದ್ದೆವು. ಲಕ್ಷಾಂತರ ಮೈಸೂರು ಸಂಸ್ಥಾನದ ಪ್ರಜೆಗಳು ಈ ಒಂದು ಘಣಾಳಿಕೆಗೆ ಸಹಿಗಳನ್ನು ಹಾಕಿ ತಮ್ಮ ಬೆಂಬಲವನ್ನು ಅದಕ್ಕೆ ಸೂಚಿಸಿದ್ದಾರೆ. ನಾವು ಶರಾವತಿ ಬಗ್ಗೆ ಶೀಘ್ರದಲ್ಲಿಯೇ ನ್ಯಾಯಾಂಗ ವಿಚಾರಣೆಯನ್ನು ಮಾಡಬೇಕೆಂದು ಹೇಳಿದ್ದೆವು. ನಮ್ಮ ಮುಂದೆ ಇರುವ ನಿರ್ಣಯ ಅದಕ್ಕೆ ಸಂಬಂಧಪಟ್ಟ ನಿರ್ಣಯವೇ ಆಗಿದೆ ಸ್ವಾಮಿ. ಪ್ರಜಾಪ್ರಭುತ್ವವನ್ನು, ಈ ಪ್ರತಿನಿಧಿ ಪ್ರಭುತ್ವವನ್ನು ನಾವು ಬೇರೆ ದೇಶಗಳಿಂದ ನೋಡಿ ಅವುಗಳನ್ನು ಅಂಗೀಕರಿಸಿ ಒಳ್ಳೆಯದನ್ನು ಮಾತ್ರ ಅವುಗಳಿಂದ ತೆಗೆದುಕೊಳ್ಳೋಣ ಅನ್ನತಕ್ಕಂಥ ಮನೋಭಾವನೆಯನ್ನು ನಾವು ಇಟ್ಟುಕೊಂಡು ಹೊರಟಿರತಕ್ಕ ಜನ. ಇವತ್ತು ಈ ಜನ ಈ ಸಭೆಗೆ ಸಂಬಂಧಪಟ್ಟಂತೆ ಒಂದು ಸಮಿತಿಯನ್ನು ನೇಮಿಸಿ, ಆ ಸಮಿತಿಗೆ ಅತಿ ಹೆಚ್ಚು ಅಧಿಕಾರಗಳನ್ನು ಕೊಟ್ಟು—ಆ ಅಧಿಕಾರಯುತವಾದಂಥ ಸಮಿತಿ ಸರ್ಕಾರದ ಮಟ್ಟದಲ್ಲಿ ಇಟ್ಟುಕೊಂಡು ಮಂತ್ರಿಗಳ ಮೇರೆ, ಶಾಸನ ಸಭಾಸದಸ್ಯರ ಮೇರೆ, ಸರ್ಕಾರಿ ಅಧಿಕಾರಿಗಳಮೇರೆ ಮತ್ತು ಇನ್ನೂ ಕೆಲವು ಸರ್ಕಾರಕ್ಕೆ ಸಂಬಂಧವನ್ನು ಇಟ್ಟುಕೊಂಡಿರತಕ್ಕಂಥ ಅಡಳಿತ ಸಂಸ್ಥೆಗಳ ಮೇರೆ ಏನು ಭ್ರಷ್ಟಾಚಾರದಿಂದ ನಡೆದಿದೆ, ಏನು ಭ್ರಷ್ಟಾಚಾರದಿಂದ ನಡೆಯಬಲ್ಲದು ಅನ್ನುವುದರ ಬಗ್ಗೆ ವಿಚಾರಣೆಮಾಡಿ ಅಂಥ ಹೇಳತಕ್ಕಂಥ ಮಾತು ಬಹಳ ಒಳ್ಳೆಯಮಾತು. ಇದರಲ್ಲಿ ಯಾವ ವಿಧವಾದಂಥ ರಾಜಕೀಯವೂ ಇಲ್ಲ. ಈ ಸಭೆಯ ಉದ್ದೇಶವಾದರೂ ಕೂಡ ನಮ್ಮ ಎಲ್ಲ ವ್ಯವಹಾರಗಳೂ ಚೆನ್ನಾಗಿ ನಡೆಯಬೇಕು, ಉತ್ಕೃಷ್ಟವಾಗಿ ನಡೆಯಬೇಕು ಅನ್ನತಕ್ಕಂಥಾದ್ದೇ. ಈ ಒಂದು ಸಮಿತಿಯ ನೇಮದಿಂದ ಈ ಭ್ರಷ್ಟಾಚಾರ ಬೆಳೆಯುತ್ತಾ ಇರತಕ್ಕಂಥ ವೇಗವನ್ನು ಕಡಿಮೆ ಮಾಡುವುದರಲ್ಲಿ ಕೊಂಚಮಟ್ಟಿಗೆ ಯಶಸ್ಸು ಸಂಪಾದನೆ ಮಾಡಿದರೂ, ಆ ಸಮಿತಿ ಸಾಕಾದಷ್ಟು ಕಾರ್ಯವಾಡದೆ ಹೋದರೂ ಅದನ್ನು ಬಹುಶಃ ಶ್ರೀಮಾನ್ ಗಾಂಜಿ ವೀರಪ್ಪನವರು ಒಪ್ಪುತ್ತಾರೆ ಅಂತ ನಾನು ಭಾವನೆ ಮಾಡುತ್ತೇನೆ.

ನಾವು ಬ್ರಿಟನ್ ದೇಶದ ಚರಿತ್ರೆಯನ್ನು ತಿರುವಿಹಾಕಿ ನೋಡಿದರೆ, ಮುಖ್ಯವಾಗಿ ಅಲ್ಲಿ ಹೌಸ್ ಆಫ್ ಕಾಮನ್ಸ್‌ನಲ್ಲಿ ಕೆಲವು ಅಪಾದನೆಗಳು ಬಂದಾಗ, ಶೀಘ್ರದಲ್ಲಿ ಅಥವಾ ನೇರವಾಗಿ ಅವರು ನ್ಯಾಯಾಂಗ ವಿಚಾರಣೆಯನ್ನು ಒಪ್ಪದೆ ಇದ್ದರೂ ಕೂಡ, ಯಾವುದೇ ಒಂದು ವ್ಯವಹಾರ ನೇರವಾಗಿ ನಡೆದಿಲ್ಲ ಎಂದು ಅದಕ್ಕೆ ಸಾಧಾರಣ ಅನುಮಾನ ಕಂಡುಬಂದರೂ, ಈ ಅನುಮಾನಗಳನ್ನು ನಿವಾರಣೆ ಮಾಡುವುದಕ್ಕೆ ಇರತಕ್ಕಂಥ ಒಂದೇ ಒಂದು ಔಷಧವೇನೆಂದರೆ, ಈ ಸಭೆ, ಸಮಿತಿಯನ್ನು ನೇಮಕ ಮಾಡಿ, ಆ ಸಮಿತಿಯಲ್ಲಿ ವಿರೋಧ ಪಕ್ಷದ ಜನರೂ ಸದಸ್ಯರಾಗಿದ್ದು, ಸಂಬಂಧಪಟ್ಟ ಮಂತ್ರಿಗಳಾಗಲಿ, ಸಂಬಂಧಪಟ್ಟ ಅಧಿಕಾರಿಯಾಗಲೀ, ಸಂಬಂಧಪಟ್ಟ ಶಾಸನ ಸಭಾ ಸದಸ್ಯರಾಗಲಿ, ಸಮಿತಿಯ ಮುಂದೆ ಹೋಗಿ ತನ್ನ ಪ್ರಾಮಾಣಿಕತೆಯನ್ನು ಚರ್ಚಿಸಬೇಕಾಗಿದೆ ಮತ್ತು ಸ್ಪಷ್ಟಪಡಿಸಬೇಕಾಗಿದೆ. ಯಾವ ದೇಶದ ವ್ಯವಹಾರಗಳನ್ನು ಯಾವ ದೇಶದ ಸಂಘ ಸಂಸ್ಥೆಗಳನ್ನು ಅನುಕರಣ ಮಾಡುವುದಕ್ಕೆ ಹೊರಟಿದ್ದೇವೊ ಆ ಬ್ರಿಟನ್ ದೇಶದಲ್ಲಿ ನೇಮಕವಾದ ಹಲವಾರು ಸಮಿತಿಗಳ ಉದಾಹರಣೆಗಳನ್ನು ಕೊಡಬಲ್ಲೆ. ಒಂದು ಪ್ರಾಮುಖ್ಯವಾದ ಉದಾಹರಣೆಯೆಂದರೆ, ಲಾಯಿಡ್ ಜಾರ್ಜ್‌ರವರು ಇಂಗ್ಲೆಂಡಿನ ಪ್ರಧಾನ ಮಂತ್ರಿಗಳಾಗಿದ್ದಾಗ, ರಾಡ್ಜ್ ರೀಡಿಂಗ್‌ರವರು ಇಂಡಿಯಾದ ಗವರ್ನರ್-ಜನರಲ್ ಆಗಿದ್ದರು; ಇವರಿಬ್ಬರೂ ಯಾವುದೇ ಅಮೆರಿಕನ್ ಕಂಪೆನಿಯ ಶೇರುಗಳ ವ್ಯವಹಾರ ಮಾಡುವಾಗ, ಅವುಗಳನ್ನು ಕೊಳ್ಳುವಾಗ, ಸರ್ಕಾರದ ಮಟ್ಟದಲ್ಲಿ, ಆ ಸಂಸ್ಥೆಯ ಶೇರುಗಳ ಮೌಲ್ಯದ ಮೇಲೆ ಸಾಕಾದಷ್ಟು ಪರಿಣಾಮ ಬರತಕ್ಕಂಥ ಸಂದರ್ಭವಿತ್ತು ಎಂದು ಕೆಲವು ಸದಸ್ಯರಿಗೆ ಅನುಮಾನ ಬಂದಿತು. ಇವರುಗಳು ಶೇರುಗಳನ್ನು ಕೊಂಡ ನೀತಿ, ಅವರಿಗೆ ಆ ಸಮಯದಲ್ಲಿ ಇದ್ದ ಅಧಿಕಾರಘಟ್ಟ, ಇವುಗಳೆರಡಕ್ಕೂ ಸಂಬಂಧ ಕಲ್ಪನೆ ಮಾಡಿಕೊಂಡು, ಹೌಸ್ ಆಫ್ ಕಾಮನ್ಸ್ ತನ್ನದೇ ಆದಂಥ ಒಂದು ಸಮಿತಿಯನ್ನು ಏರ್ಪಾಡು ಮಾಡಿ, ಆ ಸಮಿತಿಯ ಮುಂದೆ ಇವರಿಬ್ಬರನ್ನು ಕರೆದು, ಆ ಸಮಿತಿ ನಿರ್ಣಯ ಮಾಡಿತ್ತು. ಒಂದು ಸಣ್ಣ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಅಮೆರಿಕ ದೇಶದಲ್ಲಿಯೂ ಒಂದು ಉದಾಹರಣೆ ಕೊಡಬಲ್ಲೆ.

Mr. DEPUTY SPEAKER.—The time allotted to this Resolution expires now. Is it the intention of the House that this should be discussed the whole day?

Sri S. SIVAPPA.—This resolution may continue for the rest of the day.

Sri B. D. JATTI (Minister for Finance).—Sir, I have no objection if the House is of that opinion. But let them also hear my reply on the subject and pass on to the next resolution.

Sevrale HON'BLE MEMBERS.—The discussion should be continued, sir.

Sri B. D. JATTI.—I have no objection. I cannot come in their way.

Sri S. SIVAPPA.—If you take the number of people who have tabled the resolution, this debate can go on not only today, even it can be extended to the next day also. The debate need not close today. There are about 10—15 resolutions on this subject and considering the fact that about 3 hours are allotted for each resolution, this subject can be given a time of nearly 30 hours. But I am not suggesting that we should take 30 hours on this resolution. We want at least six hours more.

Sri B. D. JATTI.—I have no objection, let it be carried on next Saturday also.

Mr. DEPUTY SPEAKER.—Shall we extend the time by four hours more? Is it the pleasure of the House that the time be extended by four hours?

HON. MEMBERS.—Yes.

ಶ್ರೀ ಎಸ್. ಎಂ. ಕೃಷ್ಣ.—ಅಮೇರಿಕ ದೇಶದಲ್ಲಿ ಅಲ್ಲಿಯ ಸಮಾಜದ ಒಳಗಿನಿಂದ ಬರತಕ್ಕಂಥ ವ್ಯಕ್ತಿಗಳು, ಅವರು ಬರುವಾಗ, ಕೈಗಾರಿಕೆ ಅಥವಾ ಯಾವುದೇ ಸಂಸ್ಥೆಯಲ್ಲಿ ಅವರಿಗೆ ಏನು ಶೇರುಗಳು ಇದ್ದರೂ ಕೂಡ, ಅವುಗಳೆಲ್ಲವನ್ನೂ ಕೂಡ, ಅವರು ಅಧಿಕಾರವನ್ನು ಸ್ವೀಕಾರ ಮಾಡುವಾಗ, ಅಲ್ಲಿಯ ರಾಷ್ಟ್ರಾಧ್ಯಕ್ಷರಿಗೆ ತಿಳಿಯುವಂತೆ ಒಂದು ಟ್ರಸ್ಟ್ ಮಾಡಿ, ಧರ್ಮದರ್ಶತ್ವ ಸ್ವರೂಪದಲ್ಲಿಟ್ಟು ಅವರು ಅಧಿಕಾರವನ್ನು ತೆಗೆದುಕೊಳ್ಳುತ್ತಾರೆ. ನಮ್ಮ ದೇಶದಲ್ಲಿಯಾದರೋ ಈ ವಿಚಾರಗಳ ಬಗ್ಗೆ ಯಾವುದೇ ಸ್ಪಷ್ಟವಾದಂಥ ಪರಂಪರೆಯನ್ನು ನಾವು ನಿರ್ಮಿಸಲು ಸಾಧ್ಯವಾಗಿಲ್ಲ. ಇದಕ್ಕೆ ನಾವು ಅಡಳಿತ ಪಕ್ಷದವರನ್ನು ಟೀಕೆ ಮಾಡಬೇಕೋ, ಅಥವಾ ಅಡಳಿತ ಪಕ್ಷದವರನ್ನು ಕೇಳಿಕೊಳ್ಳಬೇಕೋ ತಿಳಿಯದು. ಕಳೆದ ಸಾಲಿನ ಆಯವ್ಯಯದ ಅಂದಾಜಿನ ಮೇಲೆ ಭಾಷಣ ಮಾಡಿದ ಕಾಲದಲ್ಲಿ ನಾನು ಒಂದು ಸಲಹೆಯನ್ನು ಮಾಡಿದೆ. ಆ ಸಲಹೆ ಏನೆಂದರೆ ಈ ಮಂತ್ರಿ ಸ್ಥಾನಕ್ಕೆ ಬರತಕ್ಕಂಥ ಜನ ಅವರು ಮಂತ್ರಿ ಸ್ಥಾನಕ್ಕೆ ಕೂರುವ ಮೊದಲು ಬಹಿರಂಗವಾಗಿ ಜನಗಳಿಗೆ ತಿಳಿಯುವ ರೀತಿಯಲ್ಲಿ ತಮ್ಮ ಆಸ್ತಿಪಾಸ್ತಿಗಳ ವಿವರಣೆಯನ್ನು ಕೊಟ್ಟು ಮಂತ್ರಿ ಸ್ಥಾನ ಅಲಂಕರಿಸಬೇಕು. ಆಗ ಒಂದು ಮಾತನ್ನು ಮಾನ್ಯ ಸದಸ್ಯರೊಬ್ಬರು ಹೇಳಿದರು. ಮಂತ್ರಿಗಳು All-India Congress Committeeಗೆ ಸ್ಟೇಟ್‌ಮೆಂಟ್ ಕೊಡುತ್ತಾರೆ ಅಂತ. ನಾನಾದರೂ ಪ್ರಶ್ನೆ ಮಾಡುತ್ತೇನೆ ಒಂದು ಕಡೆ ನಾವು ನೇರವಾಗಿ ಜನತೆಗೆ ಜವಾಬ್ದಾರರು ಅನ್ನತಕ್ಕಂಥ ಮಾತು ಇನ್ನೊಂದು ಕಡೆ ನಮ್ಮ ಆಸ್ತಿಪಾಸ್ತಿ ವಿವರಣೆಯನ್ನು ನಾವು ನಮ್ಮ ಕಾಂಗ್ರೆಸ್ ಕಮಿಟಿಗೆ ಕೊಟ್ಟಿದ್ದೇವೆ ಅಂತ. ಮಂಡಲ ಕಾಂಗ್ರೆಸ್ ಕಮಿಟಿಗಳಿಗೆ ತಾಲ್ಲೂಕು ಮಟ್ಟದ ಕಾಂಗ್ರೆಸ್ ಕಮಿಟಿಗಳಿಗೆ ಆಸ್ತಿ ರಿಟರ್ನ್ ಕೊಟ್ಟಿರುವುದನ್ನು ನೀವು ಯಾರೂ ಯಾವ ರೀತಿಯಲ್ಲಿಯೂ ಬಹಿರಂಗ ಮಾಡಿಲ್ಲ. All-India Congress Committeeಗೆ ಕೊಟ್ಟಿರುವ ಆಸ್ತಿ ವಿವರಣೆಯನ್ನು ಯಾವ ರೀತಿಯಲ್ಲಿಯೂ ಜನತೆಗೆ ಗೊತ್ತಾಗತಕ್ಕಂಥ ರೀತಿಯಲ್ಲಿ, ಅದೂ ಸಾರಿಲ್ಲ. ಆದ್ದರಿಂದ ಉದ್ದೇಶ ಸಾರ್ಥಕತೆಗೆ ಬರುತ್ತದಯೇ ಅನ್ನುವುದನ್ನು ನಾವು ಈ ದಿವಸ ಆಲೋಚನೆ ಮಾಡಬೇಕಾಗಿದೆ.

ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿಗಳೂ, ಒಂದು ಕಾಲದಲ್ಲಿ ಸಮಾಜತತ್ವವಾದಿಗಳೂ ಆದಂಥ ಡಾ|| ಸಂಪೂರ್ಣಾನಂದರವರು ವಿಚಾರದತ್ತವಾದ ಹಲವಾರು ಲೇಖನಗಳನ್ನು ಬರೆದಿದ್ದಾರೆ. ಒಂದು ಲೇಖನದಲ್ಲಿ ಅವರು ಹೇಳುತ್ತಾರೆ. ನಮ್ಮ ಸಮಾಜದಲ್ಲಿ ಸ್ವಾತಂತ್ರ್ಯ ಬಂದ ಮೇಲೆ ಒದಗಿ ಬಂದಿರತಕ್ಕಂಥ ನೈತಿಕ ಅಧಃ ಪತನ, ನೈತಿಕಪತನ, ಇವತ್ತು ರಾಷ್ಟ್ರದ ಎಲ್ಲ ಕಡೆಯ

ಲ್ಲಿಯೂ ಅದರ ಪರಿಣಾಮವನ್ನು ಹೊರ ನೂಸುತ್ತಿದೆ ಎಂದು ಬಹುಶಃ ನಾವೆಲ್ಲರೂ ಕೂಡ ಈ ಮಾತು ನರ್ವೆ ಸಾಮಾನ್ಯವಾಗಿ ಒಪ್ಪತಕ್ಕಂಥ ಮಾತು. ನಾನಾದರೂ ತಿಳಿಯುವುದೇನೆಂದರೆ ನಮ್ಮ ದೇಶದ ನೈತಿಕ ಮಟ್ಟ ಇವತ್ತು ಅತಿ ತ್ವರಿತವಾಗಿ ಇನ್ನೂ ಕೆಳ ದಾರಿಯನ್ನು ಹಿಡಿಯುವುದಾದರೆ ಜನ ಪ್ರತಿನಿಧಿಗಳಾದಂಥ ನಾವು ಈ ಬಗ್ಗೆ ಕೊಂಚಮಟ್ಟಿಗೆ ಆಲೋಚನೆ ಮಾಡಬೇಕಾಗಿದೆ.

ಇದೇ ರೀತಿ, ಇದೇ ವೇಗದಲ್ಲಿ, ಇದೇ ಗತಿಯಲ್ಲಿ ನಮ್ಮ ನೈತಿಕ ಅಧಃಪತನ ವ್ಯಾಪ್ತಿಯಾಗುತ್ತ ಹೋದರೆ ನಮ್ಮ ಸಮಾಜ ಎತ್ತ ಹೊರಟಿದೆ ಎಂದು ಜಯಪುರದಲ್ಲಿ ಸ್ವೀಕಾರ ಮಾಡಿದಂಥ ಸಮಾಜ ವಾದದ ಸಿದ್ಧಾಂತವನ್ನು ಎಷ್ಟರಮಟ್ಟಿಗೆ ನಾವು ಕಾರ್ಯ ರೂಪಕ್ಕೆ ತರುವುದಕ್ಕೆ ಸಾಧ್ಯವಾದೀತು ಎನ್ನುವುದನ್ನು ಕೂಡ ನಮಗಿಂತಲೂ ಹೆಚ್ಚಾಗಿ ಇವತ್ತು ಆಡಳಿತದ ಹೊರಯನ್ನು ಹೊತ್ತಿರತಕ್ಕ ನೀವು ಆಲೋಚನೆ ಮಾಡಬೇಕಾಗಿರತಕ್ಕ ಸಂದರ್ಭ. ಈ ಭ್ರಷ್ಟಾಚಾರದ ಬಗ್ಗೆ ನಾವು ಮಾತನಾಡಿದಾಗಲೆಲ್ಲ ನಮಗೆ, ನಮ್ಮ ಮಾತುಗಳಿಗೆ ರಾಜಕೀಯ ಬಣ್ಣವನ್ನು ಕೂಡುತ್ತ ಹೋದರೆ ಅದುಂದ ಈ ಸಮಸ್ಯೆಗೆ ಔಷಧಿಯನ್ನು ಕಂಡು ಹಿಡಿದಂತಾಗಲಲ್ಲ. ಪರಿಹಾರವನ್ನು ಕಂಡು ಹಿಡಿದಂತಾಗಲಲ್ಲ. ಇವತ್ತು ನಮ್ಮ ನಥೆಯ ಪಬ್ಲಿಕ್ ಅಕೌಂಟ್ಸ್ ಸಮಿತಿ, ಎಸ್ಟಿಮೇಟ್ಸ್ ಸಮಿತಿ ಇವುಗಳೆಲ್ಲವೂ ಕೂಡ ಸರ್ಕಾರದ ಎಲ್ಲ ಆಡಳಿತ ಸರ್ಕಾರವ ಎಲ್ಲ ಖರ್ಚಿನ ವಹಿವಾಟಿನ ಬಗ್ಗೆ ಒಂದು ಹಿಡಿತವನ್ನು ಇಟ್ಟುಕೊಳ್ಳುವುದಕ್ಕೆ ಇರತಕ್ಕ ಎರಡು ಸಾಧನಗಳು. ಈ ಪಬ್ಲಿಕ್ ಅಕೌಂಟ್ಸ್ ಕಮಿಟಿಯು ಮುಂದೆ ಎಷ್ಟು ಜನ ಮಂತ್ರಿಗಳು ಬಂದು ಸಾಕ್ಷ್ಯ ಕೊಡುತ್ತಾರೆ ಎನುವ ವಿಚಾರದಲ್ಲಿ ನಮಗೆ ಸಾಕಾದಷ್ಟು ವಿವರಣೆ ಬೇಕಾಗಿದೆ.

ಸರ್ಕಾರಕ್ಕೆ ಸೇರಿದಂಥ ಲಂಚ ನಿರೋಧ ಶಾಖೆ, ಇವತ್ತು ಒಬ್ಬರ ಮಾತಿನಲ್ಲಿ ಹೇಳಬಹುದಾದರೆ ಭ್ರಷ್ಟಾಚಾರ ಆಪಾದನೆಗಳು ಹಲವಾರು ನೇರವಾಗಿ ಮಂತ್ರಿಗಳಿಗೆ ಸಂಬಂಧಪಟ್ಟ ಹಾಗೆ ಬಂದಿವೆ. ಮಂತ್ರಿಗಳಿಗೆ ಸಂಬಂಧಪಟ್ಟ ಹಾಗೆ ಭ್ರಷ್ಟಾಚಾರದ ಆರೋಪಣೆಗಳು ಬಂದಾಗ ಮಂತ್ರಿಗಳನ್ನು ವಿಚಾರಣೆಗೆ ಗುರಿ ಮಾಡತಕ್ಕ ಶಕ್ತಿಯಾಗಲೀ, ಅಧಿಕಾರವಾಗಲೀ ಲಂಚನಿರೋಧ ಶಾಖೆಗೆ ಇದೆಯೇ ಎನ್ನುವುದನ್ನು ಕೂಡ ನಾವು ಇವತ್ತು ಆಲೋಚನೆ ಮಾಡಬೇಕಾಗಿದೆ. ನನಗೆ ತಿಳಿದ ಮಟ್ಟಿಗೆ ಮಂತ್ರಿಗಳ ಮೇಲೆ ಬಂದಂಥ ಆರೋಪಗಳನ್ನು ವಿಚಾರಣೆ ಮಾಡುವುದಕ್ಕೆ ಅವರಿಗೆ ಅಧಿಕಾರವಿಲ್ಲ. ಅಂದ ಮೇಲೆ ಮಂತ್ರಿಗಳು ಮಾಡಿದ ಭ್ರಷ್ಟಾಚಾರದ ಆರೋಪಣೆಗಳನ್ನು ವಿಚಾರಣೆ ಮಾಡತಕ್ಕ ಯಾವ ಒಂದು ಸಾಧನವೂ ಕೂಡ ನಮ್ಮಲ್ಲಿಲ್ಲ ಎನ್ನುವುದನ್ನು ನಾವು ಒಪ್ಪಿಕೊಳ್ಳಬೇಕಾಗಿದೆ. ಸರ್ಕಾರ ಅಪಚಾರ ಮಾಡಿದರೆ ಸರ್ಕಾರವನ್ನು ನಾವು ಉರುಳಿಸುವುದಕ್ಕೆ ಇರತಕ್ಕ ಒಂದೇ ಒಂದು ಸಾಧನವೆಂದರೆ ಅವಿಶ್ವಾಸ ನಿರ್ಣಯವನ್ನು ತರತಕ್ಕದು. ಒಬ್ಬ ಮಂತ್ರಿ ಒಂದು ತಪ್ಪು ಮಾಡಿದರೆ, ಇಂಥ ತಪ್ಪು ಮಾಡಿದ್ದಾನೆ, ಅದುದರಿಂದ ಅತ ಅಧಿಕಾರಚ್ಯುತನಾಗಬೇಕು ಎಂದು ಕೇಳತಕ್ಕದ್ದು ಮಾತ್ರ.

†Sri B. D. JATTI.—I want to give one information. According to my experience of some years, there was only one occasion when the Anti Corruption Department had to look into a case where a Minister was concerned. They have recorded a statement and the question was discussed in the court and ultimately decided.

ಶ್ರೀ ಎಸ್. ಎಂ. ಕೃಷ್ಣ.—ಲಂಚನಿರೋಧ ಶಾಖೆಯವರು ಮಂತ್ರಿಗಳ ಬಗ್ಗೆ ಏನಾದರೂ ಆರೋಪಣೆಗಳು ಬಂದಾಗ ವಿಚಾರಣೆ ಮಾಡತಕ್ಕ ಒಂದೇ ಒಂದು ನಿದರ್ಶನವನ್ನು ಮಾನ್ಯ ಮಂತ್ರಿಗಳು ಇವತ್ತು ನಮಗೆ ಹೇಳಿದ್ದಾರೆ. ನಾವು ಕೇಳತಕ್ಕದ್ದು ಏನೆಂದರೆ ಈ ಲಂಚನಿರೋಧ ಶಾಖೆಗೆ ಯಾರನ್ನು ನೀವು ನಾಮಕರಣ ಮಾಡುತ್ತೀರಿ, ಯಾರನ್ನು ನೀವು ನೇಮಿಸುತ್ತೀರಿ ಅವರು ನಿಮ್ಮಿಂದ ನೇರವಾಗಿ ನೇಮಿಸಲ್ಪಟ್ಟಿರತಕ್ಕ ಅಧಿಕಾರಿ. ಮುಂದೆ ಈತನ ಮೇಲೆ ಕಾನ್‌ಫಿಡೆನ್ಶಿಯಲ್ ರಿಪೋರ್ಟ್ ಪಡೆಯತಕ್ಕ ಅಧಿಕಾರ ನಿಮ್ಮಲ್ಲಿ ಕೇಂದ್ರೀಕೃತವಾಗಿದೆ. ಅಂಥ ಅಧಿಕಾರಿಯಿಂದ ನಡೆಸತಕ್ಕ ವಿಚಾರಣೆ ಎಷ್ಟರಮಟ್ಟಿಗೆ ನ್ಯಾಯವಾಗಿರುತ್ತದೆ ಎನ್ನುವುದನ್ನು ನಾವು ಆಲೋಚನೆ ಮಾಡಬೇಕಾಗಿದೆ. ಆದುದರಿಂದ ನಾವು ಸಲಹೆ ಮಾಡತಕ್ಕದ್ದು ಏನೆಂದರೆ ಮಂತ್ರಿಗಳ ಬಗ್ಗೆ ಬರತಕ್ಕ ಆರೋಪಣೆಗಳು ಮತ್ತು ಇನ್ನು ಕೆಲವು ಸಂಸ್ಥೆಗಳ ಬಗ್ಗೆ ಬರತಕ್ಕ ಆರೋಪಣೆಗಳು—ಕಳೆದ ಅಧಿವೇಶನದಲ್ಲಿ ಖಾದಿ ಬೋರ್ಡ್ ವ್ಯವಹಾರದ ಬಗ್ಗೆ ಹಲವಾರು ಆರೋಪಣೆಗಳನ್ನು ಮಾಡಿದೆವು.

Mr. DEPUTY SPEAKER.—The resolution refers to the appointment of a suitable Committee.

Sri S. M. KRISHNA.—It should be a statutory Committee appointed by this House.

Mr. DEPUTY SPEAKER.—But the resolution does not read like that.

ಶ್ರೀ ಎಸ್. ಎಂ. ಕೃಷ್ಣ.—ಎಲ್ಲದಕ್ಕೂ ಅನ್ವಯವಾಗುತ್ತದೆ ಸ್ವಾಮಿ. The distinction is very thin. ಇದಕ್ಕೆ ನಾವು ಪರಿಹಾರ ಏನು ಸೂಚನೆ ಮಾಡುತ್ತಿದ್ದೇವೆಂದರೆ ಈ ಭ್ರಷ್ಟಾಚಾರವನ್ನು ನಾವು ತಡೆಹಿಡಿಯಬೇಕು, ಅದನ್ನು ನಾವು ನಿರ್ಮೂಲ ಮಾಡಬೇಕು ಎಂದು ಹೊರಟರೆ ಅದು ಮಹತ್ವ ಕಾಂಕ್ಷೆಯಾಗುತ್ತದೆ. ಭ್ರಷ್ಟಾಚಾರ ಸಾಕಾದಷ್ಟು ನಮ್ಮ ಎಲ್ಲ ವ್ಯವಹಾರಗಳಲ್ಲಿಯೂ ಕೂಡ ಬೇರೂರಿದೆ. ಇವತ್ತು ಅದರಿಂದ ಹೊರಬರಬೇಕಾಗಿದೆ. ಇದುವರೆಗೂ ಇದು ಏನು ಅನರ್ಥ ಮಾಡಿದೆಯೋ ಆ ಅನರ್ಥವನ್ನು ನಿರಿಮಾಡುವುದಕ್ಕೆ ನಾವು ಎದ್ದು ಕಾರ್ಯೋನ್ಮುಖರಾಗಬೇಕಾಗಿದೆ. ಅದಕ್ಕೋಸ್ಕರ ಜವಾಬ್ದಾರಿ ಹೊತ್ತಿರತಕ್ಕ ಜನಗಳಿಗೆ ಒಂದು ಅಂಕುಶ ಬೇಕು, ಹೆದರಿಕೆ ಬೇಕು ನಾನು ನನ್ನ ಹೆಳ್ಳುಗಳನ್ನು ಹೇಗೇ ವಿಲೇವಾರಿ ಮಾಡಲಿ ಅಥವಾ ನನ್ನ ಭಾಗಕ್ಕೆ ಸೇರಿರತಕ್ಕ ಇಲಾಖೆಯಲ್ಲಿ ಏನೇ ವ್ಯವಹಾರಗಳನ್ನು ಮಾಡಲಿ, ಆ ವ್ಯವಹಾರಗಳನ್ನು ಪರಿಣಾಮಕಾರಿಯಾದ ರೀತಿಯಲ್ಲಿ ಪ್ರಶ್ನೆ ಮಾಡತಕ್ಕ ಒಂದು ಸಾಧನವಿಲ್ಲ. ಆದುದರಿಂದ ನನಗೆ ಯಾವ ಹೆದರಿಕೆಯೂ ಇಲ್ಲ ಎನ್ನುವ ಭಾವನೆಯನ್ನು ನಾವು ನಿರ್ಮೂಲ ಮಾಡಬೇಕಾದರೆ ಇಂಥದ್ದು ಯಾವುದಾದರೂ ಒಂದು ಸಾಕಾದಷ್ಟು ಅಧಿಕಾರವನ್ನು ಹೊತ್ತಿರತಕ್ಕ ಒಂದು ಸಮಿತಿ ಇದ್ದರೆ ಬಹುಶಃ ಎಷ್ಟು ಭ್ರಷ್ಟಾಚಾರ ನಡೆದಿದೆ ಎಂದು ನಾವು ಹೇಳಿದ್ದೇವೆ ಅಷ್ಟು ನಡೆಯುವುದಕ್ಕೆ ಸಾಧ್ಯವಿಲ್ಲ ಎನ್ನುವುದು ನಮ್ಮ ಅಭಿಪ್ರಾಯವಾಗಿದೆ.

ನಾವು ಕೇಂದ್ರ ಸರ್ಕಾರದ ಮಟ್ಟದಲ್ಲಿ ಮತ್ತು ರಾಜ್ಯ ಸರ್ಕಾರದ ಮಟ್ಟದಲ್ಲಿ ಎಲ್ಲ ಸಾರ್ವಜನಿಕ ಮುಖಂಡರುಗಳು, ಶಾಸನಸಭಾ ಸದಸ್ಯರು, ಮಂತ್ರಿಗಳು ಎಲ್ಲರಿಗೂಕೂಡ ಅನ್ವಯವಾಗುವಂತೆ, ಎಲ್ಲರೂಕೂಡ ಆ ಒಂದು ಸಮಿತಿಯ ಅಚ್ಚುಕಟ್ಟಿನಲ್ಲಿ ಬರುವ ರೀತಿಯಲ್ಲಿ ಒಂದು ಸಮಿತಿಯನ್ನು ನೇಮಕ ಮಾಡುವುದರಿಂದ ನಾವು ಏನನ್ನೂಕೂಡ ಕಳೆದುಕೊಳ್ಳುವುದಿಲ್ಲ. ಯಾರು ಭ್ರಷ್ಟಾಚಾರವನ್ನು ಎಸಗಿದ್ದಾರೆ ಅವರುಮಾತ್ರ ಇಂಥ ಒಂದು ಸಮಿತಿಗೆ ಹೆದರಬೇಕಾಗಿದೆ, ಇಂಥ ಒಂದು ಸಮಿತಿಯ ನೇಮಕಕ್ಕೆ ಹಿಂಜರಿಯಬೇಕಾಗಿದೆ. ಆದರೆ ಯಾರು ತಮ್ಮ ಪ್ರಾಮಾಣಿಕತೆಯಲ್ಲಿ ನಂಬಿಕೆಯನ್ನು ಇಟ್ಟುಕೊಂಡಿರುತ್ತಾರೆ ಅಂಥವರು ಇಂಥ ಒಂದು ನಿರ್ಣಯವನ್ನು ಸ್ವಾಗತ ಮಾಡುತ್ತಾರೆ.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ವಕೀಲ ವೃತ್ತಿಯನ್ನು ಅವಲಂಬಿಸಿಕೊಂಡಿರತಕ್ಕವರು ಶಾಸನ ಸಭಾ ಸದಸ್ಯರಾದಮೇಲೆ ವಕೀಲ ವೃತ್ತಿಯ ನೆಪದಲ್ಲಿ ಜನತೆಯಿಂದ ಹಣವನ್ನು ಸಂಪಾದನೆ ಮಾಡಿಕೊಂಡು ಕೆಲಸಮಾಡತಕ್ಕವರ ಬಗ್ಗೆ ತಮ್ಮ ಅಭಿಪ್ರಾಯದಲ್ಲಿ ಏನು ಹೇಳುತ್ತೀರಿ ? ಅದು ಯಾವ ಭ್ರಷ್ಟಾಚಾರವಾಗುತ್ತದೆ ?

ಶ್ರೀ ಎಸ್. ಎಂ. ಕೃಷ್ಣ.—ಶಾಸನ ಸಭಾ ಸದಸ್ಯರಾಗಿರತಕ್ಕ ವಕೀಲರುಗಳು ಭ್ರಷ್ಟಾಚಾರದ ಇತಿಮಿತಿಗಳಿಗೆ ದೂರವಾಗಿರಬೇಕಾದರೆ ಅವರು ಮಂತ್ರಿಗಳ ಮುಂದೆ ಹೋಗಿ ವಕಾಲತ್ತನ್ನು ಹಾಕಬಾರದು.....

†Sri B. D. JATTI.—If the Hon'ble Member yields, I may say that the convention that is followed all over the country is that those pleaders who become legislators will only practise in judicial courts and they will not practice in any executive courts or offices. I have followed it.

Sri S. SIVAPPA.—What about those who were not lawyers and having chamber practice ?

Sri B. D. JATTI.—Since the Hon'ble Member does not know about lawyers, why should he talk about it ?

ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಮಾನ್ಯ ಮಂತ್ರಿಗಳು ಆ ತರಹ ಜವಾಬು ಹೇಳಬಹುದೇ ಸ್ವಾಮಿ ?

ಶ್ರೀ ಎಸ್. ಎಂ. ಕೃಷ್ಣ.—ಇದು ಲಾಯರುಗಳು ಮಾಡಬೇಕಾದ ಒಂದು ಉಪಕಾರ. ಮಂತ್ರಿಗಳ ಮುಂದೆ ಹೋಗಿ ನಾನು ಈಗ ಶಾಸನ ಸಭಾ ಸದಸ್ಯನಾಗಿ ಬಂದಿಲ್ಲ, ವಕೀಲನಾಗಿ ಬಂದಿದ್ದೇನೆ, ನನ್ನ ಕಕ್ಷಿಗಾರನ ಹಿತರಕ್ಷಣೆ ಮಾಡಬೇಕು. ಒಳ್ಳೆಯ ರೀತಿಯಲ್ಲಿಯೋ, ಕೆಟ್ಟ ರೀತಿಯಲ್ಲಿಯೋ ನನ್ನ ಕಸಿದಾರನನ್ನು ಉದ್ಧಾರಮಾಡಬೇಕು ಎಂದು ಹೋಗಿ ಹೇಳುವಂಥ ಅವಕಾಶಗಳಿಗೆ ಎಡೆ ಕೊಡಬಾರದು. ಇದು ಬಹುಶಃ ಶಾಸನಸಭಾ ಸದಸ್ಯರಾಗಿರತಕ್ಕ ವಕೀಲರು ಅವರೇ ತಮಗಾಗಿ ಇರಿಸಿಕೊಳ್ಳಬಹುದಾದ ಒಂದು ಶಿಷ್ಟಾಚಾರ. ಅದನ್ನು ಎಲ್ಲರೂಕೂಡ ಪಾಲಿಸಬೇಕೆಂದು ಶ್ರೀಮಾನ್ ದೇವೇಂದ್ರಪ್ಪನವರಿಗೆ ಅರಿಕೆ ಮಾಡಿಕೊಳ್ಳುತ್ತೇನೆ.

†ಶ್ರೀ ಟಿ. ಡಿ. ದೇವೇಂದ್ರಪ್ಪ.—ಮಂತ್ರಿಗಳ ಮುಂದೆ ಹೋಗಿ ವಕಾಲತ್ತು ಹಾಕಬಾರದು ಎಂದು ಹೇಳಿದಿರಿ. ಮಂತ್ರಿಗಳಲ್ಲದೆ ಅವರಿಗೆ ಕೆಳಪಟ್ಟ ರವೆನ್ನೂ ಕೋರ್ಟ್ ಜಿಲ್ಲಾಧಿಕಾರಿಗಳ ಮತ್ತು ತಹಸೀಲ್ದಾರರ ಮುಂದೆ ರವೆನ್ನೂ ಇಲಾಖೆಗೆ ಸಂಬಂಧಪಟ್ಟ ವಿಚಾರಗಳಲ್ಲಿ ವಕಾಲತ್ತು ಹಾಕುವಬಗ್ಗೆ ಮಾನ್ಯ ಸದಸ್ಯರು ಏನೂ ತಿಳಿಸಲಿಲ್ಲ. ಇಂಥ ಸಂದರ್ಭಗಳಲ್ಲಿ ಏನು ಮಾಡಬೇಕು ಎಂದು ಹೇಳುತ್ತಾರೆಯೇ ?

ಶ್ರೀ ಎಸ್. ಎಂ. ಕೃಷ್ಣ.—ನಾನು ವಕೀಲನಾಗಿದ್ದೇನೆ, ಶಾಸನ ಸಭಾ ಸದಸ್ಯನಾಗಿದ್ದೇನೆ, ನನ್ನಮಟ್ಟಿಗೆ ಹೇಳುವುದಾದರೆ—ಯಾವ ಮಟ್ಟದಲ್ಲೂ ಶಾಸನ ಸಭಾ ಸದಸ್ಯ ತನ್ನ ವಕಾಲತ್ತನ್ನು ಹಾಕಬಾರದು ನನ್ನ ಬಗ್ಗೆ ವ್ಯೆಯಕ್ತಿಕ ವಿವರಣೆ ಕೊಡುವುದಾದರೆ ನಾನು ಕೇವಲ ರಾಜ್ಯದ ಶ್ರೇಷ್ಠ ನ್ಯಾಯಾ ಸ್ಥಾನದಲ್ಲಿ ಮಾತ್ರ ವಕೀಲ ವೃತ್ತಿ ಮಾಡುತ್ತಾ ಇದ್ದೇನೆ ಎಂದು ಹೇಳಿದರೆ ಬಹುಶಃ ಅವರಿಗೆ ಸಮಾಧಾನವಾಗಬಹುದು ಎಂದು ನಾನು ನೀರೀಕ್ಷೆ ಮಾಡುತ್ತೇನೆ.

ನಿನ್ನೆತಾನೆ ರಾಜ್ಯದ ಮೇಲ್ಮನೆಯಲ್ಲಿ ಚರ್ಚೆಯಾಗಿದೆ, ಇವತ್ತು ಸರ್ಕಾರ ಹೆಚ್ಚು ಹೆಚ್ಚು ಕೈಗಾರಿಕಾ ಕ್ಷೇತ್ರದಲ್ಲಿ ಅಡಿಯನ್ನು ಇಡುತ್ತಾ ಇದೆ, ಹೊಸ ಹೊಸ ಕೈಗಾರಿಕೋದ್ಯಮಗಳನ್ನು ರಾಜ್ಯ ಸರ್ಕಾರಗಳು ಪ್ರಾರಂಭವಾಡುತ್ತಾ ಇವೆ, ಅವುಗಳ ಮೇಲ್ವಿಚಾರಣೆ ನೇರವಾಗಿ ರಾಜ್ಯ ಸರ್ಕಾರವೇ ರಚಿಸಿರತಕ್ಕ ಕಾರ್ಪೊರೇಷನ್‌ಗಳ ಮೇಲೆ ಬಿದ್ದಿದೆ. ಆ ಕಾರ್ಪೊರೇಷನ್‌ಗಳಲ್ಲಿ ಶೇಕಡ 50ಕ್ಕಿಂತ ಜಾಸ್ತಿಯಾಗಿ ರಾಜ್ಯ ಸರ್ಕಾರ ತನ್ನ ಬಂಡವಾಳವನ್ನು ಹಾಕಿರುವುದು ಮತ್ತು ಷೇರನ್ನು ಪಡೆದಿರುವುದು ಆ ಕೈಗಾರಿಕೆಗಳಮೇಲೆ ಎಷ್ಟುಮಟ್ಟಿಗೆ ಹತೋಟಿಯನ್ನು ರಾಜ್ಯ ಸರ್ಕಾರ ಇಟ್ಟುಕೊಳ್ಳಬಹುದು ಎಂಬುದಕ್ಕೆ ಅದು ದ್ಯೋತಕವಾಗಿದೆ. ಈಗ ಅಂತಹ ಕೈಗಾರಿಕಾ ಸಂಸ್ಥೆಗಳಲ್ಲಿ ಈ ಸಮಸ್ಯೆ ಎಷ್ಟುಮಟ್ಟಿನ ಅಡ್ಜಿಯನ್ನು ಉಂಟುಮಾಡಿದೆ, ಎಷ್ಟು ಮಟ್ಟಿಗೆ ಈ ಸಮಸ್ಯೆ ಆ ಕೈಗಾರಿಕಾ ಸಂಸ್ಥೆಗಳಲ್ಲೂಕೂಡ ಬೇರೂರಿದೆ ಎಂಬುದನ್ನು ಆಲೋಚನೆ ಮಾಡಬೇಕಾಗಿದೆ. ನಿನ್ನೆತಾನೆ ಕೈಗಾರಿಕಾ ಮಂತ್ರಿಗಳು ಮೇಲ್ಮನೆಯಲ್ಲಿ ಈ ಕೈಗಾರಿಕಾ ಸಂಸ್ಥೆಗಳಿಗೆ ಸಂಬಂಧಪಟ್ಟ ವ್ಯವಹಾರಗಳನ್ನು ಅದರ ಮೇಲ್ವಿಚಾರಣೆಯನ್ನು ನಡೆಸುವುದಕ್ಕೆ ಮತ್ತು ಅವುಗಳನ್ನು ಪರಿಶೀಲನೆ ಮಾಡುವುದಕ್ಕೆ ಶಾಸನಸಭೆಗಳ ಒಂದು ಜಂಟಿ ಸಮಿತಿಯನ್ನು ನೇಮಕ ಮಾಡುವ ತತ್ವವನ್ನು ಸರ್ಕಾರ ಒಪ್ಪಿಕೊಂಡಿದೆ ಎಂದು ಹೇಳಿದರು. ಇದು ಬಹಳ ಸಂತೋಷದ ಸಮಾಚಾರ, ಹಿಂದೆ ಎಂದೋ ಆಗಬೇಕಾಗಿದ್ದಂಥ ಈ ಒಂದು ಸಮಿತಿಯ ರಚನೆ ಅತಿ ಶ್ರೀಘ್ರದಲ್ಲೇ ಆಗಬೇಕು. ಎಂದಮೇಲೆ ಈ ಸಭೆಯ ಮುಂದೆ ಇರತಕ್ಕ ನಿರ್ಣಯ ಎಷ್ಟು ಮಹತ್ವದಿಂದ ಕೂಡಿದೆ ಎಂಬ ವಿಚಾರವನ್ನೂ ಕೂಡ ಈ ಒಂದು ಸರ್ಕಾರದ ನಿರ್ಧಾರ ನಮಗೆ ತೋರಿಸಿಕೊಡಬೇಕಾಗಿದೆ. ಕೈಗಾರಿಕಾ ಸಂಸ್ಥೆಗಳಲ್ಲಿ ಅದರ ವ್ಯವಹಾರಗಳನ್ನು ನೋಡುವುದಕ್ಕೆ ಈ ಸಮಿತಿಯ ನೇಮಕ ಅಗತ್ಯವಾಗಿದ್ದರೂ ಈ ಒಂದು ಸಮಿತಿಯ ನೇಮಕದ ತತ್ವವನ್ನು ಸರ್ಕಾರ ಒಪ್ಪಿರಬೇಕಾದರೆ ಇನ್ನು ಬಾಕಿ ವ್ಯವಹಾರಗಳನ್ನು ಕೂಡ ಯೋಚನೆ ಮಾಡತಕ್ಕ ಬಗ್ಗೆ ಎಂದರೆ ಗವರ್ನಮೆಂಟ್, ಸೆಮಿ ಗವರ್ನಮೆಂಟ್ ಮತ್ತು ಕಾರ್ಪೊರೇಟ್ ಬಾಡಿಗಳಲ್ಲಿ ನಡೆಯತಕ್ಕ ಮಾಲ್‌ಪ್ರಾಕ್ಟೀಸ್, ನೆಪಾಟಿಸಂ, ಮತ್ತು ಕರಪ್ಷನ್ ವ್ಯವಹಾರಗಳನ್ನೂ ಯೋಚನೆ ಮಾಡುವುದಕ್ಕೂ ಮತ್ತು ಪರಿಶೀಲನೆಯುವುದಕ್ಕೂ ಇಂಥಾ ಒಂದು ಸಮಿತಿಯ ಅವಶ್ಯಕತೆ ಎಂದಿಗಿಂತಲೂ ಈಗ ಜಾಸ್ತಿಯಾಗಿದೆ ಎಂಬುದಾಗಿ ನಾನು ಅರಿಕೆ ಮಾಡಿಕೊಳ್ಳುತ್ತೇನೆ. ಈಗಿನ ಕಾಂಗ್ರೆಸ್ ಸರ್ಕಾರದ 15 ವರ್ಷಗಳ ಚರಿತ್ರೆ ಏನು ಎಂದರೆ, ಆಡಳಿತದಲ್ಲಿ ಆಲಸ್ಯ, ಮಾಂದ್ಯತೆ, ಜಡತ್ವ ಮತ್ತು ಸ್ವಾರ್ಥ ಸಾಧನೆ ಇವುಗಳೆಲ್ಲ ಕಂಡು ಬರುತ್ತಿವೆ; ಇವತ್ತು ಇವುಗಳೆಲ್ಲವನ್ನೂ ನಿವಾರಣೆ ಮಾಡಬೇಕಾದರೆ ಆ ಒಂದು ದಿಕ್ಕಿನಲ್ಲಿ ಕಾರ್ಯವನ್ನು ಮಾಡತಕ್ಕ ಕೆಲಸ ಸರ್ಕಾರದವರಿಗೆ ಸೇರಿದ್ದು, ನಾವು ಲಘುವಾಗಿ ಟೀಕೆಗಳನ್ನು ಹಿಂಪೆ ಮಾಡಿರಬಹುದು ಆದರೆ ಲಘುವಾಗಿ ಮಾಡಿದಂತಹ ಟೀಕೆಗಳೇ ಮುಂದೆ ಬಹಳ ಜವಾಬ್ದಾರಿಯುತವಾದ ಟೀಕೆಗಳಾಗಿ ಪರಿಣಮಿಸುತ್ತವೆ ಎಂಬುದನ್ನು ನಾವು ಯಾರೂ ಮರೆಯಬಾರದು. ಎಷ್ಟು ಮಾತುಗಳನ್ನು ಸರ್ಕಾರದ ಬಗ್ಗೆ ನಿರ್ದಾಕ್ಷಿಣ್ಯವಾಗಿ ನಾವು ಇಲ್ಲಿ ಹೇಳುತ್ತೇವೆಯೋ ಅಷ್ಟೇ ಮಾತುಗಳನ್ನು ಅಷ್ಟೇ ತೀಕ್ಷ್ಣವಾಗಿ ಅದಕ್ಕಿಂತಲೂ ಮಾರ್ಮಿಕವಾಗಿ ಹೇಳುವ ಜನ, ಕಾಂಗ್ರೆಸ್ ಸ್ನೇಹಿತರು ರಾಜಕೀಯದಲ್ಲಿ ಮಾತನಾಡುತ್ತಾ ಇರುವುದನ್ನು ಕಿವಿಯಾರ ಕೇಳಿದ್ದೇನೆ. ಮಂತ್ರಿಗಳೂ ಕೂಡ ಅದರ ಬಗ್ಗೆ ಗಮನ ಕೊಡಬೇಕೆಂಬ ಮಾತಿನ ನಿವೇದನೆಯಾಗಿದೆ. ಎಂದ ಮೇಲೆ ಇವತ್ತು ನಮ್ಮ ಪಕ್ಷದ ಶಿಸ್ತಿಗೆ ಒಳಪಟ್ಟಿರತಕ್ಕ ಹಲವಾರು ಜನ ಮಿತ್ರರು ಈ ನಿರ್ಣಯದ ಬಗ್ಗೆ ಸಾಕಾದಷ್ಟು ಮನಬಿಚ್ಚಿ ಮಾತನಾಡುವುದಕ್ಕೆ ನಮ್ಮ ಪಕ್ಷದಿಂದ ಸಾಧ್ಯವಾಗಿಲ್ಲ ಎಂದು ಹೇಳುವ ಮಾತನ್ನು ಶ್ರೀಮಾನ್ ಜತ್ತಿಯವರೂ ಕೂಡ ಒಪ್ಪುತ್ತಾರೆ ಎಂದು ಭಾವನೆ ಮಾಡುತ್ತೇನೆ. ಸಾಧಾರಣವಾಗಿ ಇಂತಹ ನಿರ್ಣಯಗಳು ಬಂದಾಗ ಸರ್ಕಾರ ಜನರ ಪ್ರತಿನಿಧಿಗಳು ಹೇಳಿದಂತಹ ಮಾತುಗಳಿಗೆ ಬೆಲೆ ಕೊಡಬೇಕು, ಗೌರವ ಕೊಡಬೇಕು. ಅವರು ಹೇಳಿದಂತಹ ಮಾತುಗಳಲ್ಲಿ ಸತ್ಯ ಯಾವುದು ಎಂಬುದನ್ನು ಕಂಡು ಹಿಡಿಯತಕ್ಕ ಪ್ರಯತ್ನವನ್ನೂ ಕೂಡ ಮಾಡಬೇಕು, ನನ್ನ ಈ ಎರಡು ವರ್ಷದ ಅನುಭವದಲ್ಲಿ ನಮಗೆ ಇದುವರೆಗೂ ಏನು ಅನಿಸಿದೆ ಎಂದರೆ ನಾವು ಮಾಡತಕ್ಕ ಟೀಕೆಗಳ

(ಶ್ರೀ ಎಸ್. ಎಂ. ಕೃಷ್ಣ)

ಮೇಲೆ ಮಂತ್ರಿಗಳು ಎರಡನೆಯ ಗಮನವನ್ನೂ ಕೂಡ ಕೊಡುವುದಿಲ್ಲ, ಬೀನುವ ದೊಣ್ಣೆ ತಪ್ಪಿದರೆ ಸಾವಿರ ವರ್ಷ ಆಯಸ್ಸು ಎಂಬ ಗಾದೆಗೆ ಅನುಸಾರವಾಗಿ ನಮ್ಮ ಸರ್ಕಾರದವರು ಅವರ ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಾ ಇದ್ದಾರೆ. ಮೊನ್ನೆತಾನೆ ಲೋಕ ಸಭೆಯಲ್ಲಿ ಶ್ರೀ ಕೆ. ಡಿ. ಮಾಳವೀಯ ಅವರು ರಾಜೀನಾಮೆಯನ್ನು ಕೊಡಬೇಕಾದ ಪ್ರಸಂಗ ಒದಗಿ ಬಂತು. ನೀವು ಅದನ್ನೇ ಒಂದು ಗುರಿಯನ್ನಾಗಿಟ್ಟುಕೊಂಡು ಜವಾಬ್ದಾರಿಯುತವಾದ ಸ್ಥಾನದಲ್ಲಿರತಕ್ಕ ವ್ಯಕ್ತಿಯ ಮೇಲೆ ನೇರವಾಗಿ, ಪಕ್ಷದ ಹೊರಗೆ ಪಕ್ಷದ ಒಳಗೆ ಅವರ ಮೇಲೆ ಆರೋಪಣೆಗಳು ಬಂದಾಗ ಆತ್ಮ ಗೌರವ ದೃಷ್ಟಿಯಿಂದಾದರೂ ಕೂಡ ಆ ಆರೋಪಣೆಗಳು ಮಿಥ್ಯ, ಆ ಆರೋಪಣೆಗಳಲ್ಲಿ ಸತ್ಯ ಇಲ್ಲ ಎನ್ನುವುದನ್ನು ಹೊರಪಡಿಸಬೇಕಾದ ಜವಾಬ್ದಾರಿ ಆತ್ಮ ಮರ್ಯಾದೆ ಇರತಕ್ಕ ಜನಕ್ಕೆ ಸೇರಿದ್ದು. ಹಿಂದೆ ನಾನು ಇದೇ ಮಾತನ್ನು ಇದೇ ರೀತಿಯಲ್ಲಿ ಅರಿಕೆ ಮಾಡಿಕೊಂಡೆ. ನಾವು ಮಾಡತಕ್ಕ ಕೆಲವು ಟೀಕೆಗಳು ನೇರವಾಗಿ, ಸಂಬಂಧಪಟ್ಟಂತಹ ಜನರ ಆತ್ಮ ಮರ್ಯಾದೆಯನ್ನು ಪ್ರಶ್ನೆ ಮಾಡತಕ್ಕ ಟೀಕೆಗಳು, ಅವುಗಳ ಬಗ್ಗೆ ಆದರೂ ಕೂಡ ನೀವು ಕೊಂಚ ಗಂಭೀರವಾಗಿ ಆಲೋಚನೆ ಮಾಡಿ, ಗಂಭೀರವಾಗಿ ಅವಕ್ಕೆ ತಕ್ಕಂತಹ ಪರಿಹಾರಗಳನ್ನು ಮಾಡಬೇಕಾದ್ದು ಅವಶ್ಯಕವಾಗಿತ್ತು ಎಂಬುದಾಗಿ ನಾನು ಭಾವನೆ ಮಾಡುತ್ತೇನೆ. ಈ ದಿವಸ ನಮ್ಮ ಈ ಶಾಸನ ಸಭೆಯ ಮುಂದೆ ಮಂಡಿತವಾಗಿರತಕ್ಕ ಈ ನಿರ್ಣಯದ ಬೆಲೆಯನ್ನು ಕಟ್ಟುವುದಕ್ಕೆ ಸಾಧ್ಯವಿಲ್ಲ. ನೀವು ಶುದ್ಧವಾದಂತಹ, ಶುಭ್ರವಾದ ಆಡಳಿತವನ್ನು ಜನತೆಗೆ ಒದಗಿಸುವ ವಿಚಾರದಲ್ಲಿ ನಿಮಗೆ ಏಕಾಗ್ರತೆ ಇದ್ದರೆ ಒಳ್ಳೆಯ ಆಡಳಿತವನ್ನು ಜನತೆಗೆ ಕರುಣಿಸಬೇಕೆಂಬ ಮನೋಭಾವ ನಿಮಗೆ ಇದ್ದರೆ ಇಂತಹ ಒಂದು ನಮಿತಿಯನ್ನು ನೇಮಕ ಮಾಡುವ ಈ ನಿರ್ಣಯಕ್ಕೆ ನೀವು ಒಪ್ಪುತ್ತೀರಿ ಎಂಬತಕ್ಕ ಒಂದು ಆಶಾ ಭಾವನೆಯನ್ನು ಮಾತ್ರ ನಾನು ಈ ದಿವಸ ಇಟ್ಟುಕೊಂಡಿದ್ದೇನೆ. ನಾನು ಮೊದಲೇ ಹೇಳಿದೆ, ಇದು ರಾಷ್ಟ್ರವ್ಯಾಪ್ತ ವ್ಯಾಪಕವಾಗಿರತಕ್ಕ ವ್ಯಾಧಿ, ಇದಕ್ಕೆ ಇವತ್ತು ರಾಷ್ಟ್ರೀಯವಾಗಿ ಪರಿಹಾರವನ್ನೂ ಕೂಡ ಕಂಡು ಹಿಡಿಯಬೇಕಾಗಿದೆ. ಈ ಪರಿಹಾರವನ್ನು ಕಂಡುಹಿಡಿಯಬೇಕಾದರೆ ಆಡಳಿತ ಪಕ್ಷ ವಿರೋಧ ಪಕ್ಷದವರನ್ನು ಎಷ್ಟು ಮಟ್ಟಿಗೆ ತಮ್ಮ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಾರೆ ಎನ್ನುವ ಘಟ್ಟದಲ್ಲಿ ಮತ್ತೆ ಆದರ ನಿರ್ಣಯವಾಗಬೇಕಾಗಿದೆ. ಆದ್ದರಿಂದ ಈ ನಿರ್ಣಯವನ್ನು ನಾವುಗಳೆಲ್ಲರೂ ಒಪ್ಪಬೇಕು ಎಂದು ಹೇಳಿ ನಾನು ನನ್ನ ಮಾತನ್ನ ಮುಗಿಸುತ್ತೇನೆ.

† ಶ್ರೀ ಕಡಿದಾಳ್ ಮಂಜಪ್ಪ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ಈ ನಿರ್ಣಯದ ಮೇಲೆ ಇದುವರೆಗೂ ಆದ ಚರ್ಚೆಯನ್ನು ನಾನು ಅವಲೋಕಿಸಿದ್ದೇನೆ. ಯಾವುದಾದರೂ ರೋಗಕ್ಕೆ ಒಂದು ಪರಿಹಾರವನ್ನು ಸೂಚಿಸಬೇಕಾದರೆ ಆ ರೋಗದ ಸಮಗ್ರ ಸ್ವರೂಪವನ್ನು ತಿಳಿದುಕೊಳ್ಳುವುದು ಅವಶ್ಯಕ. ನಾನಾದರೂ ರೋಗ ಇಲ್ಲ ಎಂದು ಹೇಳುವುದಿಲ್ಲ, ಈ ಕಡೆಯವರು ರೋಗ ಇದೆ ಸ್ವಲ್ಪ ಇದೆ ಎಂದೂ ಆ ಕಡೆಯವರು ರೋಗ ಉಲ್ಬಣವಾಗಿದೆ, ಹೆಚ್ಚಿದೆ ಎಂದೂ ಹೇಳಬಹುದು.

10-30 A.M.

ಅಂತೂ ಈ ರೋಗವಿದೆ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳಲೇ ಬೇಕು. ಹಾಗೆ ಒಪ್ಪಿಕೊಂಡ ನಂತರ ಇದಕ್ಕೊಂದು ಮದ್ದನ್ನು ಕಂಡುಹಿಡಿಯಲೇಬೇಕು. ಆದರೆ ವಿರೋಧ ಪಕ್ಷದ ಕೆಲವು ಮಾನ್ಯ ಸದಸ್ಯರು ಮಾತನಾಡಿದ್ದನ್ನು ನೋಡಿದರೆ: ಅವರು ಈ ರೋಗವನ್ನು ಸರಿಯಾಗಿ ತಿಳಿದುಕೊಳ್ಳದೆ, ಮತ್ತು ಇದಕ್ಕೆ ಮುಖ್ಯ ಕಾರಣ ಎಲ್ಲದೆ ಎಂಬುದನ್ನು ತಿಳಿದುಕೊಳ್ಳದೆ ಇದಕ್ಕೆ ಮದ್ದನ್ನು ಸೂಚಿಸಿದಂತೆ ಕಂಡುಬರುತ್ತಿದೆ. ಇದು ಸ್ವರಾಜ್ಯ ಬಂದಮೇಲೆ ಇಲ್ಲಿ ಪ್ರಜಾಪ್ರಭುತ್ವಾಡಳಿತ ಸ್ಥಾಪನೆಯಾದ ಮೇಲೆ, ಅಧಿಕಾರಿಗಳ ವರ್ಗದಲ್ಲಿಯೂ ರಾಜಕೀಯ ರಂಗದಲ್ಲಿಯೂ, ಇನ್ನೂ ಕೆಲವು ಬಾಬುಗಳಲ್ಲಿ ಈ ಬೆಳವಣಿಗೆ ತಕ್ಕಮಟ್ಟಿಗೆ ಆಗಿದೆ. ಈಗ ಇದಕ್ಕೆ ಯಾರು ಯಾರು ಕಾರಣಕರ್ತರು ಎಂಬುದನ್ನು ಕಂಡುಹಿಡಿಯಬೇಕಾಗಿದೆ. ಇದರ ಹೊಣೆ ಈ ದಿವಸ ಸಮಾಜದ ಮೇಲೆಯೂ ಇದೆ, ರಾಜಕಾರಿಣಿಗಳ ಮೇಲೆಯೂ ಇದೆ, ಸರ್ಕಾರದವರ ಮೇಲೂ ಇದೆ, ಹೀಗೆ ಇದು ಎಲ್ಲರ ಮೇಲೂ ಇದೆ. ಇದನ್ನು ಸ್ವಲ್ಪಮಟ್ಟಿಗೆ ನಿಜವೆಂತಲೂ ಹೇಳಬಹುದು. ಆದರೆ ಇದನ್ನು ಪೂರ್ಣವಾಗಿ ನಿಜ ಎಂದು ಹೇಳುವುದಕ್ಕಾಗುವುದಿಲ್ಲ. ಈ ಅಕ್ಷಮ್ಯ ಬಾಬುಗಳು ಎಲ್ಲರಲ್ಲಿಯೂ ಆವರಿಸಿಕೊಂಡಿವೆ. ಆದರೆ ಇದರಲ್ಲಿ ಮುಖ್ಯವಾಗಿ ಬರತಕ್ಕವರು ಯಾರೆಂದರೆ: ಮೇಲ್ಪದರದಲ್ಲಿರತಕ್ಕವರೂ, ಎಂದರೆ ಮೇಲ್ಪದರದಲ್ಲಿರತಕ್ಕ ರಾಜಕಾರಿಣಿಗಳೂ, ಅಂದರೆ ಇವರ ಪೈಕಿ ಎಲ್ಲರೂ ಅಲ್ಲ, ಕೆಲವರು ಮಾತ್ರ, ಸರ್ಕಾರದ ನೌಕರಿಯಲ್ಲಿರತಕ್ಕವರಲ್ಲಿ ಕೆಲವರೂ, ಇನ್ನೂ ಬಿಜಿನೆಸ್ ಲೈನಿನಲ್ಲಿರತಕ್ಕವರು ಕೆಲವರು, ಹೀಗೆ ಈ ಮೂರು ವರ್ಗದವರು ಈ ಭ್ರಷ್ಟಾಚಾರ, ಲಂಚಕೋರತನ, ಈ ಎಲ್ಲ ಅನಾಚಾರಗಳಿಗೂ ಕಾರಣರು ಎಂದರೆ ತಪ್ಪಾಗಲಾರದು. ಆದರೆ ಇದಕ್ಕೆ ಸಮಾಜದಲ್ಲಿರತಕ್ಕವರೆಲ್ಲರೂ ಕಾರಣವೆಂದರೆ ಅದು ತಪ್ಪಾಗುತ್ತದೆ

ನಮಗೆ ಸ್ವರಾಜ್ಯ ಬಂದಮೇಲೆ ಅನೇಕರು ಈ ರಾಜಕೀಯ ರಂಗದಲ್ಲಿ ಬಂದು ಸೇರಿದ್ದಾರೆ. ಇದಕ್ಕೆ ನಾನಾ ಕಾರಣಗಳಿವೆ. ಆದರೆ ಹಿಂದೆ ಸ್ವರಾಜ್ಯ ಬರುವುದಕ್ಕೆ ಮುನ್ನ ಯಾರು ಈ ರಾಜಕೀಯಕ್ಕೆ ಸೇರಿದ್ದರು ಅವರಲ್ಲಿ ಇಂಥ ನಾನಾ ಭಾವನೆಗಳಿರಲಿಲ್ಲ. ಈ ದಿವಸ ಅದು ಯಾವ ಒಂದು ರಾಜಕೀಯ ಪಕ್ಷವೇ ಆಗಿರಲೀ ಅದರಲ್ಲಿ ಸೇರಿರತಕ್ಕ ಜನಗಳಲ್ಲಿ ಕೆಲವರು ಹಣದಾಸೆಯಿಂದಲೂ, ಇನ್ನು ಕೆಲವರು ಉದ್ಯೋಗದಾಸೆಯಿಂದಲೂ, ಮತ್ತೆ ಕೆಲವರು ಅವರಲ್ಲಿರತಕ್ಕ ಹಣವನ್ನು ಮತ್ತಿಷ್ಟು ಅಭಿವೃದ್ಧಿಗೊಳಿಸಬೇಕೆಂಬ ಉದ್ದೇಶದಿಂದಲೂ, ಹೀಗೆ ನಾನಾ ಮುಖನಾದ ಕಾರಣಗಳಿಂದ ನಾನಾತರದ ಜನರು ಈ ರಾಜಕೀಯರಂಗದಲ್ಲಿ ಧುಮುಕಿದ್ದಾರೆ.

ಇನ್ನು ಇದರ ಜೊತೆಗೆ ಸೇರತಕ್ಕ ಬಾಬು ಎಂದರೆ ಪ್ರಜಾಪ್ರಭುತ್ವದಲ್ಲಿ ಈ ಚುನಾವಣೆಗಳು. ಇವು ನಮಗೆ ಅವಶ್ಯಕವಾಗಿ ಬೇಕೇ ಬೇಕು. ಆದರೆ ಈ ಕಾಲದಲ್ಲಿ ಎಲ್ಲಾ ಜನರ ಬೆಂಬಲವನ್ನೂ ಗಳಿಸಿ ಹಣವನ್ನು ಖರ್ಚು ಮಾಡದಂತೆ ಗೆದ್ದು ಬರುವುದು ಕಷ್ಟ; ಸಾಧ್ಯವೂ ಆಗುವುದಿಲ್ಲ. ಈ ಕಾರಣದಿಂದ ಹಣವಿರತಕ್ಕ ಜನಗಳು ಸ್ಪರ್ದೆಗೆ ನಿಲ್ಲತಕ್ಕ ಜನ ಭಾಗವನ್ನು ಪಹಿಸುತ್ತಾರೆ. ಹೀಗೆ ಸ್ಪರ್ದೆಗೆ ನಿಲ್ಲತಕ್ಕ ಜನಗಳ ಗುಂಪಿಗೆ ತಕ್ಕಂತೆ ಹಣವಂತರ ಗುಂಪೂ ಕೂಡ ಬೆಳೆಯುತ್ತದೆ. ಆದರೆ ಇದರಲ್ಲಿರತಕ್ಕ ಒಂದಂಶವೇನೆಂದರೆ ಚುನಾವಣೆಗೆ ನಿಲ್ಲತಕ್ಕ ಜನ ಹಣವಂತ ನೀತಿಯನ್ನನುಸರಿಸಿ ನಡೆಯಬೇಕಾಗುತ್ತದೆ. ಇಂಥವರ ಸಂಖ್ಯೆಯೇ ಜಾಸ್ತಿ. ಆದರೆ ಚುನಾವಣೆಗೆ ನಿಂತಿರುವ ವ್ಯಕ್ತಿಯ ಹಾಗೆ ಬರುವಂಥ ಹಣವಂತರು ಯಾರೂ ಇಲ್ಲ. ಆದರೆ ನಾನೀಗ ಯಾವ ಒಂದು ರಾಜಕೀಯ ಪಕ್ಷವನ್ನೂ ಗಮನದಲ್ಲಿಟ್ಟುಕೊಂಡು ಮಾತನಾಡುತ್ತಿಲ್ಲ. ಆದರೆ ವ್ಯಕ್ತಿ ಚುನಾವಣೆಗಾಗಿ ಹಣವನ್ನು ಶೇಖರಿಸುವುದು ತಪ್ಪು. ಆದರೆ ಅದೇ ಹಣವನ್ನು ಒಂದು ಸಂಸ್ಥೆ ಶೇಖರಣೆ ಮಾಡಿದರೆ ಅದು ತಪ್ಪಾಗುವುದಿಲ್ಲ. ಇದು ಎಲ್ಲರಿಗೂ ಅನ್ವಯಿಸತಕ್ಕಂಥ ಮಾತಾಗಿದೆ. ಆದರೆ ನನಗೆ ಗೊತ್ತಿರುವಂತೆ ಕೆಲವು ವರ್ಷಗಳಿಂದ ಕೆಲವು ರಾಜಕಾರಣಿಗಳು ಕೈಗಾರಿಕಾ ಮಾಲೀಕರುಗಳಿಂದಲೂ, ಕಂಟ್ರಾಕ್ಟರುಗಳಿಂದಲೂ ಮತ್ತು ಇತರ ದಲ್ಲಾಳಿಗಳಿಂದಲೂ ಹಣವನ್ನು ಶೇಖರಣೆ ಮಾಡುತ್ತಿದ್ದಾರೆ. ಹಾಗೆ ಹೀಗೂ ಲಾದ ಹಣದಲ್ಲಿ ಕೊಂಚ ಭಾಗವನ್ನು ಚುನಾವಣೆಗೆ ಖರ್ಚು ಮಾಡಿ, ಇನ್ನು ಕೆಲವು ಭಾಗದ ಹಣವನ್ನು ತಮ್ಮ ಆಪದ್ಧನವನ್ನಾಗಿ ಹಾಗೇ ಜೋಪಾನ ಮಾಡಿಕೊಳ್ಳುತ್ತಾರೆ. ಇದು ಲಂಚ ಕೋರತನದ ಮೊದಲನೆಯ ಹಂತ. ಇನ್ನು ಈ ಚುನಾವಣೆಗಳಿಗೆ ನಿಂತ ಜನಗಳಿಗೆ ಹಿಂಬಾಲಕರಾಗಿ ನಿಂತು ಹಣವನ್ನು ಖರ್ಚು ಮಾಡತಕ್ಕವರು ನಿಷ್ಕಾರಣವಾಗಿ ಯಾರೂ ಹಾಗೆ ಹಣವನ್ನು ಖರ್ಚು ಮಾಡುವುದಿಲ್ಲ. ಅವರೂ ಕೂಡ ಏನಾದರೊಂದು ಉದ್ದೇಶವನ್ನು ಇಟ್ಟುಕೊಂಡೇ ಹಾಗೆ ಹಣವನ್ನು ಖರ್ಚುಮಾಡುತ್ತಾರೆ. ಏಕೆಂದರೆ ಆ ಹಣ ಖರ್ಚು ಮಾಡತಕ್ಕ ವ್ಯಕ್ತಿ ಸೋದರಮಾವನೂ ಅಲ್ಲ, ಹೆಣ್ಣು ಕೊಟ್ಟ ಮಾವನೂ ಅಲ್ಲ. ಯಾರೇ ಆಗಲೀ ಒಂದು ರಾಭದ ದೃಷ್ಟಿಯಿಲ್ಲದೆ ಸುಮ್ಮನೆ ಏಕೆ ಸಹಾಯ ಮಾಡುತ್ತಾರೆ? ಇದನ್ನು ಯಾರು ಯಾವ ಕಾನೂನಿನ ಮೂಲಕ ನಿಲ್ಲಿಸಲು ಸಾಧ್ಯ? ಯಾವ ಕಮಿಟಿ ಇದನ್ನು ನಿಲ್ಲಿಸಲು ಸಾಧ್ಯ? ಇದನ್ನೆಲ್ಲಾ ತಪ್ಪಿಸುವುದಕ್ಕೆ ಯಾರಿಂದಲೂ ಅಷ್ಟು ಸುಲಭ ಸಾಧ್ಯವಾದ ಕೆಲಸವಲ್ಲ. ಎಲ್ಲ ರಾಜಕೀಯ ಪಕ್ಷಗಳವರೂ ಮೊದಲು ತಮ್ಮನ್ನು ತಾವು ಶುದ್ಧಿಮಾಡಿಕೊಳ್ಳಬೇಕು. ಅನಂತರ ಅವರ ಬೆಂಬಲಗಳನ್ನು ಶುದ್ಧಿಗೊಳಿಸಬೇಕು.....

ಶ್ರೀ ಕೆ.ಪಿ. ರೇವಣ್ಣಸಿದ್ದಪ್ಪ.—ಇಷ್ಟೆಲ್ಲಾ ತಾವು ಹೇಳುತ್ತಿದ್ದೀರಿ. ಆದರೆ ಈಗ ಆ ಟಿ.ವಿ.ಎಸ್. ಕಂಪೆನಿಯವರ 4 ಜೀಪುಗಳನ್ನು ತುರುವೆಕೆರೆಯ ಚುನಾವಣೆಗೆ ಕಳುಹಿಸಿದ್ದೀರಿ. ಇದು ಸರಿಯೇ?

ಶ್ರೀ ಕಡಿದಾಳ್ ಮಂಜಪ್ಪ.—ಈ ಪ್ರಶ್ನೆಯನ್ನು ನಾನು ಈ ಪಕ್ಷ ಆ ಪಕ್ಷ ಎಂದು ಹೇಳುತ್ತಿಲ್ಲ. ನಾನು ಹೇಳುತ್ತಿರುವುದು ಇದು ಅಪ್ಪ ಬಡ ಪಟ್ಟಿಗೆ ಬಿಟ್ಟು ಹೋಗತಕ್ಕದೆಲ್ಲ ಎಂದೇ ನಾನೂ ಹೇಳುತ್ತಿರುವುದು. ಆದುದರಿಂದ ಮಧ್ಯೆ ಬಾಯಿಹಾಕಿ ಇನ್ನೊಬ್ಬರ ಮನನೋಯುವಂತೆ ಮಾತನಾಡುವುದು ಸರಿಯಲ್ಲ. ಯಾರೇ ಮಾತನಾಡಲೀ ಯಾವ ಪಕ್ಷವನ್ನೂ ಗಮನದಲ್ಲಿಟ್ಟುಕೊಂಡು ಮಾತನಾಡಬಾರದು. ಹಾಗೆ ಮಾತನಾಡುವುದು ತಪ್ಪು. ಅದು ಸೂಕ್ತವೂ ಅಲ್ಲ.

ಇನ್ನು ಪ್ರಸ್ತಾಪಿಸಬೇಕಾಗಿರುವ ಎರಡನೆಯ ವಿಚಾರವೆಂದರೆ.—ರಾಜಕೀಯ ಕಾರಣಲ್ಲಿರತಕ್ಕ ಜನ ಅದಮಟ್ಟಿಗೂ ಸ್ಥಳೀಯ ಮುಖಂಡರುಗಳಾಗಿರಬೇಕು. ಈ ಮುಖಂಡರುಗಳ ಹಾಗೂ ಇತರ ಹಿಂಬಾಲಕರ ನೈತಿಕ ಮಟ್ಟ ಉತ್ತಮವಾಗಿರಬೇಕು. ಇದರಲ್ಲಿ ಯಾರೊಬ್ಬರ ಮಟ್ಟ ಅನೈತಿಕವಾಗಿದ್ದರೂ ಅಲ್ಲಿ ತೊಂದರೆ ತಪ್ಪಿದ್ದಲ್ಲ. ಆದರೆ ಈ ಹಿಂದೆ ನಾವು ರಾಜಕೀಯ ಕಾರಣಕ್ಕಿಳಿದಾಗ ನಮಗಿದ್ದ ಒಂದೇ ಒಂದು ಧ್ಯೇಯವೆಂದರೆ ಆದು ಜನಸೇವೆ ಮಾಡಬೇಕು ಎಂಬ ಉದ್ದೇಶದಿಂದ ನಾವು ಈ ರಾಜಕೀಯಕ್ಕೆ ಧುಮಿಕಿದೆವು. ಆಗ ನಮ್ಮ ಜನಸಂಪರ್ಕವೂ ಚೆನ್ನಾಗಿತ್ತು..... ಆದರೂ ಏನಾಗಿದೆ ಎಂದರೆ, ಮೊದಲು ವಿಧಾನಸೌಧದ ಸಂಪರ್ಕವನ್ನು ಮಾಡಿಕೊಂಡು ಮಾಡುವುದು ಇನ್ನೊಂದು ಅಧಿಕಾರಿಗಳ ಮೇಲೆ ಅಧಿಪತ್ಯವನ್ನು ಸ್ಥಾಪಿಸಲಿಕ್ಕೆ ಜನ ಸಂಪರ್ಕವನ್ನು ಮಾಡತಕ್ಕ ಪ್ರಯತ್ನವನ್ನು ಕೆಲವರು ಮಾಡುತ್ತಿದ್ದಾರೆ, ಎನ್ನುವುದನ್ನು ಎಲ್ಲರೂ ಮಾಡುತ್ತಿದ್ದಾರೆ ಮತ್ತು ರಾಜಕಾರಣಿಗಳಾಗಿರುವವರು ಯಾರೇ ಆಗಲೀ ಒಪ್ಪಿಕೊಳ್ಳುತ್ತಾರೆ. ಸ್ವಲ್ಪ ಅಂತರಗಳು ಇದರಲ್ಲರ

(ಶ್ರೀ ಕಡಿದಾಳ್ ಮಂಜಪ್ಪ)

ಬಹುದು, ವ್ಯತ್ಯಾಸಗಳೂ ಇಗಬಹುದು, ಅದು ತಪ್ಪುಗಳನ್ನು ಮಾಡಿದವರನ್ನು ಕಂಡಿದ್ದವರು ಪ್ರತ್ಯಕ್ಷವಾಗಿ ಅಲ್ಲದಿದ್ದರೂ ಹತ್ತು ತಪ್ಪುಗಳನ್ನು ಮಾಡಿದರೆ ಅದೇನೂ ಬಹಳ ದೊಡ್ಡದಾದುದೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಜಿ. ಎ. ಗೌಡ (ಪಾಳ್ಯ).—ಈ ವಿಷಯದ ಬಗೆಗೂ ತಾವು ಇನ್ನೊಂದು ಪುಸ್ತಕವನ್ನು ಬರೆಯಬಹುದು.

ಶ್ರೀ ಕಡಿದಾಳ್ ಮಂಜಪ್ಪ.—ಆದುದರಿಂದ ಈ ಸಮಸ್ಯೆ ಸರ್ಕಾರದ ಜವಾಬ್ದಾರಿಗೆ ಮಾತ್ರ ಸಂಬಂಧಪಟ್ಟ ಸಮಸ್ಯೆ ಅಲ್ಲ. ರಾಜಕಾರಣದಲ್ಲಿರತಕ್ಕ ಸರ್ವರಿಗೂ ಸಂಬಂಧಪಟ್ಟ ವಿಚಾರ ಎಂದು ಹೇಳಿದರೆ ಅದು ತಪ್ಪಾಗಲಾರದು.

ಇನ್ನು ಬಿಸಿನೆಸ್ಸಿಗೆ ಸಂಬಂಧಪಟ್ಟ ವಿಚಾರ. ಅವರ ದೆಸೆಯಿಂದ ಬಹುಮಟ್ಟಿಗೆ ಸ್ವಲ್ಪ ಜಾಸ್ತಿಯಾಗುತ್ತ ಬಂದಿದೆ. ಅವರಿಗೆ ಜಗತ್ತಿನಲ್ಲಿ ಎಲ್ಲರಿಗಿಂತಲೂ, ತಾವೇ ಶ್ರೀಮಂತರಾಗಿರಬೇಕು, ತಾವೇ ಬದುಕಬೇಕು, ಎನ್ನುವ ಭಾವನೆ ಕೂಡ ಇವೆ. ಅವರಲ್ಲಿ ಅನೇಕರು, ಕೆಲವು ಲಾಭಕೋರರು (profiteers) ಎಂದು ಏನಿದ್ದರೆ ಅವರು ಸ್ವೇಚ್ಛೆಯಾವ ರಾಜಕಾರಣದಲ್ಲಿ ಬೆಳೆಯಲು ಸಾಧ್ಯವಿಲ್ಲ. ಇಂತಹ ಜನರೇ ರಾಜಕಾರಣಿಗಳಾಗಬೇಕು ಎನ್ನುವ ಆಸೆಯೂ ಇದೆ. ಮತ್ತು ಅವರ ಆಡಳಿತ ಕೆಟ್ಟುಹೋಗಬೇಕು ಎನ್ನುವ ಆಸೆಯೂ ಅವರಿಗಿರುತ್ತದೆ. ಇಂತಹ ಜನ ಸಾಧಾರಣವಾಗಿ ಪರದೇಶದಲ್ಲಿ ಬೆಳೆಯುವುದಕ್ಕೆ ಅವಕಾಶ ಇರುತ್ತದೆ. ರಾಜಕಾರಣಿಗಳು ಕೆಟ್ಟುಹೋದಾಗ ಅವರಿಗೆ ಲಾಭ ಜಾಸ್ತಿ. ಅವರಿಂದ ಈ ರೋಗಕ್ಕೆ ಸಾಕಾದಷ್ಟು ಶಕ್ತಿ ಬಂದಿದೆ.

ಇನ್ನು ಅಧಿಕಾರ ಸ್ಥಾನದಲ್ಲಿರತಕ್ಕವರು ಎಂದರೆ ಸರ್ಕಾರಿ ನೌಕರರುಗಳ ಹೈಕಿ ಹೇಳುವುದಾದರೆ, ಕೈಗೆ ಬರತಕ್ಕ ಸಂಬಳ ಸಾಲದೆ ಕೊಟ್ಟಿದನ್ನು ಪಡೆಯತಕ್ಕವರು ಎಂದು ಕೆಲವು ಜನ ಇದ್ದಾರೆ. ಇನ್ನೂ ಹಣವನ್ನು ಸಂಪಾದನೆ ಮಾಡಬೇಕೆಂಬ ದಾಹವಿರತಕ್ಕವರು ಎಂದು ಹೀಗೆ ಈ ಎರಡು ವರ್ಗದ ಜನರಿದ್ದಾರೆ. ಇವರಲ್ಲಿ ಕೆಲವರು ಅಧಿಕಾರಿಗಳು ಲಂಚಕೋರರಾಗಿರುವಾಗ ನಾವೇಕೆ ಆಗಬಾರದು? ರಾಜಕಾರಣಿಗಳು ಲಂಚಕೋರರು, ಅಧಿಕಾರಿಗಳು ಸಣ್ಣವರು ಲಂಚಕೋರರಾಗಿರುತ್ತಾರೆ. ಅವರಲ್ಲಿ ದೊಡ್ಡ ಅಧಿಕಾರಿಗಳು ಲಂಚಕೋರರಾಗಿರುವವರು ಆಗಿದ್ದರೆ ಸಣ್ಣ ಅಧಿಕಾರಿಗಳೂ ಲಂಚಕೋರರಾಗುತ್ತಾರೆ. ಹೀಗೆ ಇದು ಒಂದು ಸಾಂಕ್ರಾಮಿಕ ರೋಗವಿದ್ದ ಹಾಗೆ ಇದೆ. ಇದಕ್ಕೆ ಬೇರೆ ಒಂದು ಕಮಿಟಿಯನ್ನು ಸ್ಥಾಪನೆ ಮಾಡಿ, ಇದನ್ನು ಎನ್‌ಕ್ವೈರಿ ಮಾಡುವುದರಿಂದ ಈ ಸಮಸ್ಯೆ ಬಗೆಹರಿದಂತಾಗುವುದಿಲ್ಲ. ಇದಕ್ಕೆ ಪರಿಹಾರವೇನು ಎಂದು ತಾವು ಕೇಳಬಹುದು. ಇದು ಒಂದು ದೊಡ್ಡ ಸಮಸ್ಯೆ. ಯಾರನ್ನಾದರೂ ಕೆಲವರನ್ನು ಹಿಡಿದು ಶಿಕ್ಷಿಸುವುದರಿಂದ ಈ ಸಮಸ್ಯೆ ಪರಿಹಾರ ಮಾಡುವುದಕ್ಕಾಗುವುದಿಲ್ಲ. ಮಂತ್ರಿಗಳಾಗಿರತಕ್ಕವರು ಎಷ್ಟೇ ನಿಸ್ಪೃಹರಾಗಿರುವವರಾಗಿದ್ದರೂ ಅಧಿಕಾರಿಗಳ ಮೂಲಕ ಈ ಒಂದು ವಾತಾವರಣದಲ್ಲಿ ಇದನ್ನು ತಡೆಗಟ್ಟಲಾರರು. ಸ್ವಲ್ಪಮಟ್ಟಿಗೆ ಕಡಿಮೆ ಮಾಡಬಹುದು. ಲಂಚಕೋರತನ ಪ್ರಪಂಚದಲ್ಲೆಲ್ಲಾ ಬಹಳವಾಗಿ ಬೆಳೆದಿದ್ದು. ಹಿಂದಿನ ಕಾಲದಲ್ಲಿ ದೇವರು, ಧರ್ಮ, ಮತ್ತು ಸತ್ಯ ಎಂದಿರುತ್ತಿತ್ತು. ಈಗ ದೇವರಿಗೂ ಹೆದರದೆ ಬರುವಂತಹ ಜಗಭಾಡರೂ ಬೇಕಾದಷ್ಟು ಜನ ಇದ್ದಾರೆ. ದೇವರ ಭಯ, ಸ್ವಲ್ಪಮಟ್ಟಿಗೆ ಹೋಗುತ್ತಿದೆ. ಕಾನೂನು ಭಯ ಸ್ವಲ್ಪಮಟ್ಟಿಗೂ ಇಲ್ಲ. ಮಂತ್ರಿಗಳು ಹಾಗೂ ಸರ್ಕಾರದವರು ತಿಳಿದಮಟ್ಟಿಗೆ ತಡೆಗಟ್ಟಬಹುದು. ರಾಜಕಾರಣಿಗಳಿರುವಂತಹ ಎಲ್ಲ ರಾಜಕೀಯ ಪಕ್ಷಗಳೂ ಅವರ ಪಾಲಿನ ಪೂರ್ಣ ಕರ್ತವ್ಯವನ್ನು ಮಾಡದಿದ್ದರೆ ಇದನ್ನು ತಡೆಗಟ್ಟುವುದು ಬಹಳ ಕಷ್ಟ. ಮೊಟ್ಟಮೊದಲು ಶುದ್ಧೀಕರಣವನ್ನು ರಾಜಕೀಯ ಪಕ್ಷಗಳವರು ಮಾಡಲು ಪ್ರಯತ್ನ ಮಾಡಬೇಕು. ರಾಜಕಾರಣಿಗಳು ಅದರಲ್ಲೂ ಮಂತ್ರಿಗಳು ಮತ್ತು ನಮ್ಮಂತಹ ಶಾಸನ ಸಭಾ ಸದಸ್ಯರುಗಳು ಇದಕ್ಕೆ ಸರಿಯಾದ ಮೇಲ್ಪಂಕ್ತಿಯನ್ನು ಹಾಕಿದಾಗ ಮಾತ್ರ ಇದರೊಳಗೆ ಬಾಳಬಹುದು. ಏರಡನೇದು, ಉನ್ನತ ಮಟ್ಟದಲ್ಲರತಕ್ಕ ಅಧಿಕಾರಿಗಳು ಸಣ್ಣಪುಟ್ಟ ಅಧಿಕಾರಿಗಳಿಗೆ ಆದರ್ಶರಾಗಿರಬೇಕು. ನಾನು ಪಿ. ಡಬ್ಯು. ಡಿ. ಹಾಗೂ ರೆವೆನ್ಯೂ ಶಾಖೆಯಲ್ಲಿ ಮೊಟ್ಟಮೊದಲು ಮಂತ್ರಿಯಾಗಿದ್ದಾಗ, ರೆವಿನ್ಯೂ ಇನ್ಸ್‌ಪೆಕ್ಟರುಗಳ ಮೇಲೆ ಮತ್ತು ಸಬ್ ಓವರ್‌ಸಿಯರುಗಳ ಮೇಲೆ ಲಂಚದ ಆಪಾದನೆ ಬಂದರೆ ನಾನು ರೇಗಿ ಬೀಳುತ್ತಿದ್ದೆ. ನನ್ನ ಒಂಬತ್ತು, ಹತ್ತು, ಹದಿನೈದು ವರ್ಷಗಳ ಅನುಭವ ನೋಡಿದರೆ ಲಂಚಕೋರತನಕ್ಕೆ ದಾರ್ಢವಂತರಾಗಿರುವಂತಹ ಎಲ್ಲ ಉನ್ನತ ಮಟ್ಟದ ಅಧಿಕಾರಿಗಳು ಹಾಗೂ ಉನ್ನತ ಮಟ್ಟದ ರಾಜಕಾರಣಿಗಳು ಸಣ್ಣ ಸಣ್ಣ ನೌಕರರುಗಳಿಗೆ ಸನ್ಮಾನ ಮಾರ್ಗವನ್ನು ಸರಿಸುವಂತೆ ಪ್ರಯತ್ನ ಮಾಡಬೇಕೆಂದು ನನಗನ್ನಿಸುತ್ತದೆ. ಹೀಗೆ ಮಾಡಿದರೆ ಪ್ರಜಾ ಪ್ರಭುತ್ವ ಮಟ್ಟದಲ್ಲಿರುವ ರಾಷ್ಟ್ರದಲ್ಲೆಲ್ಲಾ ಈ ಸಮಸ್ಯೆಯನ್ನು ಬಹಳ ಸುಲಭವಾಗಿ ಪರಿಹಾರ ಮಾಡಬಹುದು. ಕೆಲವರನ್ನು ಗಲ್ಲಿಗೆ ಹಾಕಿಬಿಟ್ಟರೆ ಲಂಚಕೋರರಾಗುವುದು ಕಡಿಮೆಯಾಗುವುದಿಲ್ಲ.

ಕೆಲವರನ್ನು ಕೆಳಕ್ಕೆ ಹಾಕಿಬಿಟ್ಟರೆ ಬಹುಬೇಗ ಈ ಸಮಸ್ಯೆ ಕಠಿಣವಾಗಿ ಕಾಣುತ್ತದೆ. ಇಲ್ಲ ಹಾಗೆ ನಾವು ಮಾಡುವುದಕ್ಕೆ ಆಗುವುದಿಲ್ಲ. ನಾವು ಪ್ರಜಾ ಪ್ರಭುತ್ವ ದೇಶದಲ್ಲಿರತಕ್ಕ ರಾಷ್ಟ್ರದಲ್ಲಿದ್ದೇವೆ. ಮತ್ತು ಗಾಂಧಿ ವಾದದಲ್ಲಿ ನಂಬಿಕೆಯಿರುವವರು. ಆದುದರಿಂದ ನಾವು ಸನ್ಮಾರ್ಗವನ್ನನುಸರಿಸ ಬೇಕಾಗುತ್ತದೆ.

ಶ್ರೀ ಬಿ. ಚನ್ನಬೈರೇಗೌಡ (ಹೊಸಕೋಟೆ).—ಮೊನ್ನೆ ತಾನೇ ರಷ್ಯದಲ್ಲಿ ಲಂಚದ ಆಪಾದನೆ ಮೇರೆ ಆರು ಜನರನ್ನು ಗುಂಡಿನಿಂದ ಕೊಂದಿದ್ದಾರೆನ್ನುವುದು ತಮಗೂ ತಿಳಿದಿರಬಹುದು.

ಶ್ರೀ ಕಡಿದಾಳ್ ಮಂಜಪ್ಪ.—ಅದರೆ ಆ ಮಾರ್ಗವನ್ನು ಈ ದೇಶದಲ್ಲಿ ನಾವು ಅನುಸರಿಸುವದ ಕ್ಕಾಗುವುದಿಲ್ಲ. ಬೇರೆ ಮಾರ್ಗದಿಂದ ಹೋಗಬೇಕಾಗುತ್ತದೆ. ನ್ಯಾಯ ಮತ್ತು ಅಹಿಂಸೆಯ ಮಾರ್ಗವನ್ನು ಅನುಸರಿಸಬೇಕಾಗುತ್ತದೆ. ಅದಕ್ಕೆ ಈ ದೇಶದಲ್ಲಿರತಕ್ಕ ಕೆಲವು ಸನ್ನಿವೇಶಗಳು ಕೂಡ ಸ್ವಲ್ಪಮಟ್ಟಿಗೆ ಕಾರಣ ಎಂದು ಹೇಳಬಹುದು. ನಾನು ಈ ಮೊದಲೇ ಹೇಳಿದ ಹಾಗೆ ಸತ್ಯ ಮತ್ತು ಅಹಿಂಸೆ ವಿಚಾರಗಳಲ್ಲಿ ನಂಬಿಕೆಬರಬೇಕಾಗಿತ್ತು. ಆ ನಂಬಿಕೆ ಈಗ ಹೊರಟುಹೋಗಿದೆ. ಎರಡನೇದು ಸ್ವರಾಜ್ಯ ಬರುವುದಕ್ಕೆ ಮುಂಚೆ ಕಡು ಬಡವನಾಗಿದ್ದರೂ ಅವನು ಯೋಗ್ಯನಾಗಿದ್ದರೆ, ಸಂಪನ್ನನಾಗಿದ್ದರೆ, ಸತ್ಯಸಂಧನಾಗಿದ್ದರೆ, ಅವನಿಗೆ ಸಮಾಜದಲ್ಲಿ ಮನ್ನಣೆ ಇರುತ್ತಿತ್ತು. ಈಗ ಅದಿಲ್ಲ. ಧುರ್ದೈವಶಾತ್ ಕೆಲವು ಕಡೆಗಳಲ್ಲಿ ಯಾರು ಲಂಚಕೋರರು ಇರುತ್ತಾರೆ, ಯಾರು ಅಕ್ರಮ, ಅನ್ಯಾಯಗಳಿಂದ ಸಂಪಾದನೆ ಮಾಡುತ್ತಾರೆ ಅವರಿಗೆ ಸಮಾಜ ಹೆಚ್ಚಾಗಿ ಗೌರವ ಸಲ್ಲಿಸುತ್ತಾ ಇದೆ. ಆದ್ದರಿಂದ ಒಂದೊಂದು ವೇಳೆ ಪತ್ರಿಕೆಗಳಲ್ಲಿ ಕೂಡ ಅಂಥ ವ್ಯಕ್ತಿಗಳನ್ನು ಹೊಗಳುತ್ತಾರೆ. ಹೀಗಾದರೆ, ಯಾವ ಕಲ್ಯಾಣ ಗುಣಗಳು ಜನತೆಯ ಮೆಚ್ಚುಗೆಗೆ ಪಾತ್ರವಾಗಬಾರದೊ ಆ ಕಲ್ಯಾಣಗುಣಗಳನ್ನು ಕೆಲವರು ಸಮಾಜದಲ್ಲಿ ಒಮ್ಮೊಮ್ಮೆ ಪುರಸ್ಕರಿಸುತ್ತಾರೆ. ಆದ್ದರಿಂದ ಸಮಾಜದಲ್ಲಿ ಸಾರ್ವಜನಿಕ ಅಭಿಪ್ರಾಯ, ಲಂಚಕೋರತನದ ವಿಷಯದಲ್ಲಿ ಸಾಕಾದಷ್ಟು ಹರಿತವಾಗಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಜನಗಳು ದಿಗಭ್ರಾಂತರಾಗಿದ್ದಾರೆ ಈ ಲಂಚಕೋರತನದಿಂದ ಎನ್ನುವುದು ಜನಜನಿತವಾಗಿದೆ. ನಮ್ಮ ಊರಿನಲ್ಲಿ ಈ ಮನುಷ್ಯನ ವಿಷಯ ಗೊತ್ತಿದೆ, ನಮ್ಮ ಸ್ನೇಹಿತನಲ್ಲಿ ಗೊತ್ತಿದೆ, ಈ ಪತ್ರಿಕೆಗಳು ಹೊಗಳುತ್ತವೆ, ಜನಗಳು ಆತನನ್ನು ಹೊಗಳುತ್ತಾರೆ, ಇದು ಏನು ಅರ್ಥ ಎಂದು ; ಅನುಮಾನವಾಗುತ್ತದೆ. ನಾನು ಯಾವ ವ್ಯಕ್ತಿಗಳನ್ನೂ ಮನಸ್ಸಿನಲಿಟ್ಟು ಕೊಂಡು ಮಾತನಾಡುತ್ತಿಲ್ಲ ಎಂದಿದೆ. ಈಗ ಜೀವನದ ಕೆಲವು ಕ್ಷೇತ್ರಗಳಲ್ಲಿ ಇನ್‌ಫ್ಲೂಯನ್ಸ್ ಮಾಡಿ ಕೆಲಸಮಾಡಬೇಕು ಇದು ರಾಜಕಾರಣದ ಮಾತು. ಕೆಲವರ ದೃಷ್ಟಿಯಲ್ಲಿ ಸರಕಾರಿ ನೌಕರರನ್ನು ಟ್ರಾನ್ಸ್‌ಫರ್ ಮಾಡಿಸುವುದು, ಪ್ರಮೋಶನ್ ಮಾಡಿಸುವದು ಅಥವಾ ಪರ್ಮಿಟ್ ಅಥವಾ ಲೈಸೆನ್ಸ್ ಕೊಡಿಸುವುದು ಇದೇ ರಾಜಕಾರಣ ಇದೆ. ಆದ್ದರಿಂದ ಸಾಮಾನ್ಯ ಜನಗಳ ಮೇರೆ ತಪ್ಪು ಹೋರಿಸುವುದೂ ತಪ್ಪಾಗುತ್ತದೆ. ಜನ ಸಾಮಾನ್ಯರು ಇಂದಿನ ಸಾಮಾಜಿಕ ಅಥವಾ ರಾಜಕೀಯ ರೋಗಕ್ಕೆ ಕಾರಣರಲ್ಲ. ಬುದ್ಧಿವಂತರಾದ ನಮ್ಮಂಥವರು ಕಾರಣ ಎಂಬುದನ್ನು ನಾವು ಒಪ್ಪಿಕೊಳ್ಳಬೇಕು. ಇದರ ಜೊತೆಗೆ ಏನಾಗಿದೆಯೆಂದರೆ ಜಾತಿಯತೆಯಿಂದ ಸ್ವಲ್ಪಮಟ್ಟಿಗೆ ಲಂಚಕೋರತನಕ್ಕೆ ಮತ್ತು ಅಕ್ರಮ ನಡವಳಿಕೆಗಳಿಗೆ ಪ್ರೋತ್ಸಾಹ ದೊರೆಯುತ್ತಿದೆ. ಆದರೂ ನಮ್ಮವರು ತಪ್ಪು ಮಾಡಿ ಬಿಟ್ಟರೆ ಅದನ್ನು ಸ್ಕ್ರೀನ್ ಮಾಡುವುದು. ಉದಾಹರಣೆಗೆ ಯಾವುದೊ ಒಂದು ತಾಲ್ಲೂಕನ್ನು ಇಟ್ಟುಕೊಳ್ಳಿ, ಯಾವುದೋ ಒಬ್ಬ ತಹಸೀಲ್‌ದಾರನನ್ನು ಇಟ್ಟುಕೊಳ್ಳಿ. ಅವನು ತಪ್ಪು ಮಾಡುತ್ತಾ ಇದ್ದರೂ ಅವನ ಜಾತಿಗೆ ಸಂಬಂಧಪಟ್ಟ ವರ್ಗದವರು ಅವನು ಬಹಳ ಒಳ್ಳೆಯವನು ಎಂದು ಹೇಳುವುದು, ಇನ್ನೊಂದು ವರ್ಗದವರು ಅವರ ಜಾತಿಗೆ ಸೇರಿಲ್ಲ ಎಂದು ಅವನು ಒಳ್ಳೆಯವನಿದ್ದರೂ ಕೆಟ್ಟವನು ಎಂದು ಹೇಳುವುದು. ಈ ಒಂದು ವಾತಾವರಣ ದೇಶದ ನಾನಾ ಕಡೆಗಳಲ್ಲಿ ಕಂಡು ಬರುತ್ತಾ ಇದೆ. ಇದರಿಂದಲೇ ಸಾಕಾದಷ್ಟು ಪ್ರೋತ್ಸಾಹ ಲಂಚಕೋರತನಕ್ಕೆ ಮತ್ತು ಪಕ್ಷಪಾತ ನಡವಳಿಕೆಗಳಿಗೆ ದೊರತಿದೆ ಎಂದು ಹೇಳಿದರೆ ತಪ್ಪಾಗಲಾರದು. ಕೆಲವು ಸಂದರ್ಭಗಳಲ್ಲಿ ಯಾರು ಒಳ್ಳೆಯವರು ಇರುತ್ತಾರೋ ಅವರ ಮೇರೆ ಟೀಕೆಗಳನ್ನು ಮಾಡುವುದು ನನ್ನ ಗಮನಕ್ಕೆ ಬಂದಿದೆ. ನಮ್ಮ ಜನಾನೂ ಕೆಲವು ಸಂದರ್ಭಗಳಲ್ಲಿ ತಪ್ಪು ಮಾಡುತ್ತಾರೆ. ಒಳ್ಳೆಯವರ ಮೇಲೂ ಹೇಳುವುದು, ಕೆಟ್ಟವರ ಮೇಲೂ ಹೇಳುವುದು, ದುಡ್ಡು ತೆಗೆದುಕೊಂಡವರ ಮೇಲೂ ಹೇಳುವುದು, ತೆಗೆದುಕೊಳ್ಳದೆ ಇರುವವರ ಮೇಲೂ ಹೇಳುವುದು ವ್ಯಾಪಕವಾಗಿದೆ. ಮತ್ತು ಬೆಳೆಯುತ್ತಾ ಇದೆ. ಈ ರೀತಿ ವಿವೇಚನೆ ಇಲ್ಲದೆ ಮಾಡುವುದರಿಂದ ಜನಗಳ ಮನಸ್ಸಿನ ಮೇಲೆ ತಪ್ಪು ಕಲ್ಪನೆ ಬರುವುದಕ್ಕೆ ಅನ್ಪದವಾಗುತ್ತದೆ. ಒಳ್ಳೆಯ ವ್ಯಕ್ತಿಯ ಮೇಲೆ—ರಾಜಕಾರಣಿಯಾಗಿರಲಿ ಅಥವಾ ಸರಕಾರಿ ಅಧಿಕಾರಿ ಆಗಿರಲಿ, ಸುಳ್ಳು ಅಪಾದನೆ ಮಾಡಿದರೆ ಅದು ಒಂದು ಪಾಪ. ಸರಕಾರಿ ನೌಕರರಲ್ಲಯೇ ಆಗಲಿ, ರಾಜಕಾರಣ ವರ್ಗದವರಲ್ಲಯೆ ಆಗಲಿ, ಅವರಲ್ಲಿಯೂ ಒಳ್ಳೆಯ ವ್ಯಕ್ತಿಗಳಿದ್ದಾರೆ. ಪ್ರಾಮಾಣಿಕ ವ್ಯಕ್ತಿಗಳಾಗಿದ್ದರೆ, ಸಮಾಜ ಅವರಿಗೆ ಮನ್ನಣೆ ಕೋಡಬೇಕು. That is all the reward they expect. ಹೋದ ಅಸೆಂಬ್ಲಿಯಲ್ಲಿ ಸರಕಾರ ಕೆಲವು ಕಂಟ್ರಾಕ್ಟರುಗಳ ಕಿಸೆಯಲ್ಲಿದ್ದಾರೆ ಎಂದು ನಾನು ಹೇಳಿ

(ಶ್ರೀ ಕಡಿದಾಳ್ ಮಂಜಪ್ಪ)

ದ್ದಕ್ಕೆ, ತಕ್ಷಣವೆ ಬೆಂಗಳೂರಿನಲ್ಲಿ ಕಡಿದಾಳ್ ಮಂಜಪ್ಪನವರಿಗೆ 4 ಸ್ಥೈಟುಗಳಿವೆ ಎಂದು ಕೂಗಿದರು. ಪತಿವ್ರತೆ ದೇವದಾಸಿಗೆ ಉಪದೇಶ ಮಾಡುವ ಬದಲು, ದೇವದಾಸಿ ಪತಿವ್ರತೆಗೆ ಉಪದೇಶ ಮಾಡುವುದನ್ನು ನಮ್ಮ ಕಣ್ಣಿದುರಿಗೆ ನೋಡುತ್ತಾ ಇದ್ದೇವೆ.

ಕಳೆದ 14-15 ವರ್ಷಗಳ ಅವಧಿಯಲ್ಲಿ ದೇಶದಲ್ಲಿ ಬಹಳ ಬದಲಾವಣೆಗಳಾಗಿವೆ. ಸ್ವರಾಜ್ಯ ಬರುವುದಕ್ಕೆ ಮುಂಚಿತವಾಗಿ ರೈತಾಪಿ ಜನರು, ವಕೀಲರು, ಡಾಕ್ಟರುಗಳು, ಸಾಮಾನ್ಯವಾಗಿ ಸಾರ್ವಜನಿಕ ಜೀವನದಲ್ಲಿ ಪರಿಣಾಮಕಾರಿಯಾದ ಪಾತ್ರವನ್ನು ವಹಿಸುತ್ತಾ ಇದ್ದರು. ಅವರ ಮಾತಿಗೆ ಬೆಲೆ ಇತ್ತು. ಇತ್ತೀಚೆಗೆ ಬಿಸಿನೆಸ್ ಮಂದಿ ಸಾರ್ವಜನಿಕ ಜೀವನದಲ್ಲಿ ಹೆಚ್ಚು ಪ್ರಭಾವವನ್ನು ಬೀರುತ್ತಾ ಇದ್ದಾರೆ. ಅವರೆಲ್ಲರೂ ಕೆಟ್ಟವರು ಅಂತ ಹೇಳುತ್ತಾ ಇಲ್ಲ. ಪ್ರಾಫಿಟಿಯರ್ಸ್ ಅಂತ ಹೇಳುತ್ತಾ ಇಲ್ಲ. ಅವರ ಪ್ರಭಾವ ಸಾರ್ವಜನಿಕ ಜೀವನದಲ್ಲಿ ಹೆಚ್ಚಾಗುತ್ತಾ ಇದೆ. ಕೆಲವು ವೇಳೆ ಬಿಸಿನೆಸ್ಸಿಗೂ ಪಾಲಿಟಿಕ್ಸಿಗೂ ಹೆಚ್ಚು ವ್ಯತ್ಯಾಸ ಮಾಡುವುದಕ್ಕಾಗುವುದಿಲ್ಲ, ಮಾಡುವುದೂ ಇಲ್ಲ. ರಾಜಕೀಯದಲ್ಲಿರುವವರು ಅಕ್ರಮ ನಡವಳಿಕೆ ಮಾಡಿದರೆ ರಾಜಕಾರಣವಾಗುತ್ತದೆ. ಬಿಸಿನೆಸ್ಸಿನಲ್ಲಿರುವವರು ಅಕ್ರಮ ನಡವಳಿಕೆ ಮಾಡಿದರೆ ಅದು ಬಿಸಿನೆಸ್ ಆಗುತ್ತದೆ. ಈ ಒಂದು ಭಾವನೆ ಬೆಳೆದು ಬಂದಿದೆ. ಎಲ್ಲಿಯವರೆಗೆ ಜನಸಾಮಾನ್ಯರ ಪ್ರಭಾವ ಸಾರ್ವಜನಿಕ ಜೀವನದಲ್ಲಿ ಹೆಚ್ಚಾಗುವುದಿಲ್ಲವೊ ಅಲ್ಲಿಯವರೆಗೆ ಇದನ್ನು ಅನುಭವಿಸಬೇಕಾಗುತ್ತದೆ. ಜನ ಸಾಮಾನ್ಯರು ಬುದ್ಧಿವಂತರಾಗಿ, ಸಾಕಾದಷ್ಟು ಜಾಗ್ರತಿ ಅವರಲ್ಲಿ ಇಲ್ಲದೆ ಇರುವುದರಿಂದ, ಲಂಚಕೋರತನ ಮತ್ತು ಪಕ್ಷಪಾತ ನಡೆ ವಳಿಕೆಗಳು, ಅಕ್ರಮ ನಡವಳಿಕೆಗಳು ನಡೆಯುತ್ತವೆ. ಜನಸಾಮಾನ್ಯರಲ್ಲಿ ಜಾಗ್ರತಿ ಉಂಟಾದ ಹೊತ್ತಿಗೆ ಕಡಮೆಯಾಗುತ್ತದೆ ಎಂದು ನನ್ನ ಭಾವನೆ.

ಒಟ್ಟಿನಲ್ಲಿ ಹೇಳುವುದಾದರೆ, ನಾನು ಈ ಸಭೆಯ ಅಮೂಲ್ಯ ಕಾಲವನ್ನು ತೆಗೆದುಕೊಳ್ಳುವುದಕ್ಕೆ ಇಷ್ಟ ಪಡುವುದಿಲ್ಲ. ಸುಧಾರಣೆ ನಮ್ಮಿಂದ ಪ್ರಾರಂಭವಾಗಬೇಕು, ರಾಜಕಾರಣಗಳಿಂದ ಪ್ರಾರಂಭವಾಗಬೇಕು; ರಾಜಕೀಯ ಪಕ್ಷಗಳಿಂದ ಪ್ರಾರಂಭವಾಗಬೇಕು, ದೊಡ್ಡ ದೊಡ್ಡ ಅಧಿಕಾರಿಗಳು ಸ್ವಲ್ಪ ಬಿಗಿಯಿಂದ ಮತ್ತು ದರ್ಪದಿಂದ ಅಧಿಕಾರ ನಡೆಸತಕ್ಕಂಥಾದ್ದನ್ನು ಕಲಿಯಬೇಕು ಅನ್ನಿಸುತ್ತದೆ. ಆಡಳಿತ ನಡೆಸತಕ್ಕಂಥವರಲ್ಲಿ ಬಿಗಿ ಮತ್ತು ದರ್ಪ ಬೇಕು. ಇವೆರಡೂ ಇಲ್ಲದಿದ್ದರೆ ಆಡಳಿತ ಸುಧಾರಿಸುವುದು ಬಹಳ ಕಷ್ಟ ಅಂತ ಅನ್ನಿಸುತ್ತದೆ. ವಿರೋಧ ಪಕ್ಷದ ಮಾನ್ಯ ಸದಸ್ಯರು ತಂದಿರತಕ್ಕ ನಿರ್ಣಯದಿಂದ ಏನೂ ಪ್ರತಿಫಲ ದೊರಕುವುದಿಲ್ಲ. ಈ ನಿರ್ಣಯದಿಂದ ಪ್ರಯೋಜನವಿಲ್ಲ ಅಂತ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಮಾನ್ಯ ಅಧ್ಯಕ್ಷರಿಗೆ ನನ್ನ ಹೃತ್ಪೂರ್ವಕವಾದ ವಂದನೆಯನ್ನು ಅರ್ಪಿಸುತ್ತೇನೆ.

11-00 A.M.

†ಶ್ರೀ ಬಿ. ಚನ್ನಬೈರೇಗೌಡ.—ಸ್ವಾಮಿ, ನನ್ನ ಮಾನ್ಯ ಮಿತ್ರರಾದ ಕಡಿದಾಳ್ ಮಂಜಪ್ಪನವರು ಇದುವರೆಗೆ ಮಾತನಾಡಿದರು. ಅವರ ಭಾಷಣದ ಅರ್ಥ ಎಲ್ಲ ರಾಜಕಾರಣಿಗಳೂ ಮತ್ತು ಅಧಿಕಾರದ ಪಕ್ಷಕ್ಕೆ ಅಂಟಿಕೊಂಡಿರತಕ್ಕ ಕಾಂಗ್ರೆಸ್ಸಿನವರು ಸಹ ನಿಧಾನವಾಗಿ ಸರಿಯಾಗಿ ಆಲೋಚನೆ ಮಾಡಿ ತಮ್ಮ ನಿಲುವನ್ನು, ಸ್ವಲ್ಪ ತಿದ್ದಿಕೊಳ್ಳಬೇಕಾದ್ದು ಅವಶ್ಯಕ ಎಂದು ಇಂಥ ಭಾಷಣ ಮಾಡಿದ್ದಕ್ಕಾಗಿ ಮಾನ್ಯ ಕಡಿದಾಳ್ ಮಂಜಪ್ಪನವರು ಮೊಟ್ಟಮೊದಲನೆಯದಾಗಿ ನಾನು ಅಭಿನಂದಿಸುತ್ತೇನೆ. ಈ ಭ್ರಷ್ಟಾಚಾರವನ್ನು ನಿರ್ಮೂಲ ಮಾಡುವುದಕ್ಕೆ ಕೇಂದ್ರ ಸರ್ಕಾರದವರು ಒಂದು ಸಮಿತಿಯನ್ನು ನೇಮಿಸಿದ್ದಾರೆ. ಆ ಸಮಿತಿಗೆ ವಿಶೇಷ ಅಧಿಕಾರವನ್ನು ಕೊಡುವವರಾಗಿದ್ದಾರೆ. ಅದೇ ತರಹ ನಮ್ಮ ರಾಜ್ಯದಲ್ಲೂ ಒಂದು ಸಮಿತಿಯನ್ನು ನೇಮಕ ಮಾಡಬೇಕು ಎನ್ನುವುದೇ ಈ ನಿರ್ಣಯದ ಮುಖ್ಯ ಉದ್ದೇಶ. ಇದರೊಳಗೆ ಬೇಕಾದರೆ ಕಾಂಗ್ರೆಸ್ಸಿನವರನ್ನೇ ಸೇರಿಸಿಕೊಳ್ಳಿ. ಆದರೆ ಕಾಂಗ್ರೆಸ್ಸಿನವರಲ್ಲ ಎಂಥವರಿರಬೇಕು ಎಂದರೆ ಗಾಂಧೀಜಿಯವರ ವಾದವನ್ನು ಒಪ್ಪುವವರು, ನಿರ್ಮಲತೆಯುಳ್ಳವರು, ಶೀಲವಂತರೂ, ನೀತಿವಂತರೂ ಇಂಥವರನ್ನು ಸೇರಿಸಿ ಒಂದು ಹೈ ಪವರ್ ಕಮಿಟಿ ಮಾಡಿ. ನಮ್ಮನ್ನು ನೇಮಕ ಮಾಡಿ ನಮಗೆ ಟಿ.ಎ., ಡಿ.ಎ. ಕೊಡಬೇಕಾಗಿಲ್ಲ. ಒಳ್ಳೆಯ ಜನರನ್ನು ಆರಿಸಿ ಒಂದು ಕಮಿಟಿಯನ್ನು ಮಾಡಿ. ಅವರು ದೇಶದಲ್ಲಿರತಕ್ಕ ಭ್ರಷ್ಟಾಚಾರದ ಸ್ವರೂಪವನ್ನು ಕಂಡುಹಿಡಿದು ಭ್ರಷ್ಟಾಚಾರವನ್ನು ಕಡಮೆ ಮಾಡುವುದಕ್ಕೆ ಪ್ರಯತ್ನಿಸುವುದರ ಮೂಲಕ ದೇಶಕ್ಕೆ ಒಳ್ಳೆಯದಾಗುತ್ತದೆ ಎನ್ನುವ ಸದುದ್ದೇಶದಿಂದ ಈ ನಿರ್ಣಯವನ್ನು ತರಲಾಗಿದೆ. ಯಾರ ಮೇಲೆಯೇ ಆಗಲೀ ಅಪವಾದವನ್ನು ಹೊರಿಸಬೇಕು, ಗೊಂದಲ ಮಾಡಬೇಕು ಎನ್ನುವ ಯಾವ ದೃಷ್ಟಿಯಿಂದಲೂ ಇದನ್ನು ತಂದಿಲ್ಲ.

ಇನ್ನು ಈ ಭ್ರಷ್ಟಾಚಾರದ ಸ್ವರೂಪ ಹೇಗಿದೆ ಎನ್ನುವುದಕ್ಕೆ ಒಂದೆರಡು ಉದಾಹರಣೆಗಳನ್ನು ಹೇಳುತ್ತೇನೆ. ಕಳೆದ ವರ್ಷ ಹೊಸದುರ್ಗ ತಾಲ್ಲೂಕಿನ ಜನರು ಶ್ರೀಮಾನ್ ನಿಜಲಿಂಗಪ್ಪನವರು ಬೇಡ ಎಂದು ಚುನಾವಣೆಯಲ್ಲಿ ತಿಳಿಸಿದರು. ಅದು ಸಾಲಲಿಲ್ಲ. ಅವರಿಗೆ ಮುಖ್ಯಮಂತ್ರಿಗಳ ಕುರ್ಚಿಯ ಮೇಲೆ ಬಹಳ ಆಸೆ ಇದ್ದುದರಿಂದ ಹಿಂದಿನ ಬಾಗಿಲಿನಿಂದ ಬರುವುದಕ್ಕೆ ಪ್ರಯತ್ನ ಮಾಡಿ ಬಾಗಲಕೋಟೆ ಕ್ಷೇತ್ರದಲ್ಲಿ ಒಬ್ಬರಿಂದ ರಾಜೀನಾಮೆ ಕೊಡಿಸಿದರು. ಅವರೂ ಧಾರಾಳವಾದ ಮನೋಭಾವದಿಂದ ಹಾಗೆ ರಾಜೀನಾಮೆ ಕೊಡಲಿಲ್ಲ. ಅವರನ್ನು ಮೇಲ್ಮನೆಗೆ ನಾಮಕರಣ ಮಾಡಿ ಅಲ್ಲಿಯೂ ಭ್ರಷ್ಟಾಚಾರ ಮಾಡಿದರು. ಹೀಗೆ ಹಿತ್ತಲ ಬಾಗಿಲಿನಿಂದ ಬಂದು ಮುಖ್ಯಮಂತ್ರಿಗಳಾಗಿ ಆ ಕುರ್ಚಿಗೆ ಅಂಟಿಕೊಂಡಿದ್ದಾರೆ. ಇವರನ್ನು ಕಳೆದ ಅಧಿವೇಶನದಲ್ಲಿ ಹೊಸದುರ್ಗದ ಚುನಾವಣೆಗಳಲ್ಲಿ ಎಷ್ಟು ಖರ್ಚಾಯಿತು ಎಂದು ಕೇಳಿದಾಗ ಅದಕ್ಕೆ ಅವರು ಬಹಳ ಸ್ವಲ್ಪ ಎಂದು ಹೇಳಿದರು. ಆದರೆ ನಿನ್ನೆ ಬಿಜಾಪುರದಲ್ಲಿ ಪ್ರಚಾರ ಭಾಷಣವನ್ನು ಮಾಡುತ್ತ ಹೊಸದುರ್ಗದಲ್ಲಿ ನನ್ನನ್ನು ಸೋಲಿಸಲು 3-4 ಲಕ್ಷ ರೂಪಾಯಿ ಖರ್ಚು ಮಾಡಿದರು ಎಂದು ಇದೇ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇದರಲ್ಲಿ ಯಾವುದು ನರಿ, ಯಾವುದು ತಪ್ಪು! ಬಿಜಾಪುರದಲ್ಲಿ ಪ್ರಚಾರ ಭಾಷಣ ಮಾಡುವಾಗ ತಾವು ಹೊಸದುರ್ಗದಲ್ಲಿ ಸೋತದ್ದಕ್ಕೆ ಕಾರಣವನ್ನು ವಿಚಾರ ಮಾಡಿದರು ಎನ್ನುವುದನ್ನು ಒಪ್ಪುವುದಾದರೆ ಇಂಥ ಒಂದು ಭ್ರಷ್ಟಾಚಾರ ಕಾಂಗ್ರೆಸ್ಸಿನವರಿಗೆ ಒಂದು ಜಾಡ್ಯವಾಗಿದೆ.

ತಮ್ಮ ಪಕ್ಷವನ್ನು ಬಲಗೊಳಿಸಲು ತಮ್ಮ ಪಕ್ಷಕ್ಕೆ ಸೇರಿದವರನ್ನು, ಚುನಾವಣೆಗಳಲ್ಲಿ ಸೋತವರನ್ನು ಅವರು ಹಣ ಮಾಡಿಕೊಳ್ಳಲು ಅವಕಾಶಮಾಡಿಕೊಡುವಂಥ ಸ್ಥಾನಗಳಿಗೆ ನೇಮಿಸಿದ್ದಾರೆ. ನಮ್ಮ ತಾಲ್ಲೂಕಿನ ಒಬ್ಬರನ್ನು ಆರ್.ಟಿ.ಎ. ಮೆಂಬರಾಗಿ ಮಾಡಿದ್ದಾರೆ. ಅವರು ಚುನಾವಣೆಗಳಲ್ಲಿ ಸೋತಿದ್ದವರು. ಅವರು ಒಂದೊಂದರ ವರ್ಷದಲ್ಲಿ ಲಕ್ಷಾಂತರ ರೂಪಾಯಿ ಸಂಪಾದನೆ ಮಾಡಿಕೊಂಡಿದ್ದಾರೆ. ಬಸ್ಸುಗಳವರು ಅವರಿಗೆ ಕಾರು ಕೂಡ ಕೊಡಿಸಿಕೊಟ್ಟಿದ್ದಾರೆ. ಅವರಿಗೆ ಎರಡು ಬಸ್ಸುಗಳಲ್ಲಿ ಭಾಗಾಂಶ ಕೂಡ ಇದೆ. ಚಿತ್ರದುರ್ಗ-ಬೆಂಗಳೂರು ಮಾರ್ಗ ಮತ್ತು ಬೆಂಗಳೂರು-ಕೊಳ್ಳೆಗಾಲ ಮಾರ್ಗ. ಬೆಂಗಳೂರು-ಚಿತ್ರದುರ್ಗ ಲೈನನ್ನು 1,25,000 ರೂಪಾಯಿಗಳಿಗೆ ಕೇಳುತ್ತಿದ್ದಾರೆ. ಬೆಂಗಳೂರಿನಿಂದ ಆಂಧ್ರದಲ್ಲಿ ಅನಂತಪುರಕ್ಕೆ ಹೋಗುವ ಒಂದು ಮಾರ್ಗವನ್ನು 70 ಸಾವಿರ ರೂಪಾಯಿಗಳಿಗೆ ಕೇಳುತ್ತಿದ್ದಾರೆ. ಈ ರೀತಿ ದುಡ್ಡನ್ನು ಮಾಡಿಕೊಳ್ಳುವುದಕ್ಕೆ ತಮ್ಮ ಪಕ್ಷದವರನ್ನು ಈ ಸರ್ಕಾರ ನಾಮಕರಣ ಮಾಡುತ್ತಿದೆ.

ಹೀಗೆಯೇ ಸೊಪ್ಪೆಟಿಗಳಿಗೂ ನಾಮಕರಣ ಮಾಡುವ ಪದ್ಧತಿ ಇದೆ. ಅಲ್ಲಿಯೂ ದುಡ್ಡನ್ನು ಸಂಪಾದನೆ ಮಾಡಿಕೊಳ್ಳಲು ಎನ್ನುವ ಉದ್ದೇಶವಿರುವಂತೆ ಕಾಣುತ್ತದೆ. ಒಂದು ಉದಾಹರಣೆ ಹೇಳಬೇಕಾದರೆ ಮುನೀರಾಬಾದಿನ ಹುಲ್ಲು ಸಹಕಾರ ಸಂಘದಲ್ಲಿ 16 ಲಕ್ಷ ರೂಪಾಯಿ ದುರುಪಯೋಗವಾಗಿದೆ ಎಂದು ಮಾನ್ಯ ಸಹಕಾರ ಇಲಾಖಾ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಇದನ್ನು ಯಾರು ತಿಂದುಹಾಕಿದ್ದಾರೆ? ಶಾಸನ ಸಭಾ ಸದಸ್ಯರೇ ಅಥವಾ ಅವರ ತಮ್ಮಂದಿರೇ? 1959ನೇ ಇಸವಿಯಿಂದ 1963ನೇ ಇಸವಿಯವರೆಗೂ ರೆಕ್ಕ ತನಿಖೆ ಮಾಡಿಲ್ಲ. ಇನ್ನೂ ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ.

ಇನ್ನೊಬ್ಬರು ಎಂ.ಪಿ.ಸಿ.ಸಿ. ಸದಸ್ಯರಾಗಿದ್ದರು. ಅವರು ರಿಸರ್ವ್ ಬ್ಯಾಂಕಿನಲ್ಲಿ 11 ಲಕ್ಷ ರೂಪಾಯಿ ತಿಂದುಹಾಕಿದರು. ಅವರ ಮೇಲೆ ಕೇಸು ನಡೆಯಿತು. ಆರು ತಿಂಗಳು ಕಠಿಣ ಶಿಕ್ಷೆ ಕೊಟ್ಟರು. ಆ ಕೇಸು ಈಗ ಅಪೀಲಿನಲ್ಲಿದೆ.

†ಶ್ರೀ ಬಿ. ಡಿ. ಜತ್ತಿ.—ಎಂ.ಪಿ.ಸಿ.ಸಿ. ಸದಸ್ಯರು ರಿಜರ್ವ್ ಬ್ಯಾಂಕಿನಲ್ಲಿ 11 ಲಕ್ಷ ರೂಪಾಯಿ ತಿಂದು ಹಾಕಿದ್ದಾರೆ ಎಂದರೆ ಏನು ಮಾಡುವುದು? ಸರಿಯಾದ ಕೇಸು ಹೇಳಿದರೆ ವಿಷಯ ನಮಗೆ ಅರ್ಥವಾಗುತ್ತದೆ. ಹೊಗುಂ ಆಗಿ ಹೇಳಿದರೆ ಅರ್ಥವಾಗುವುದಿಲ್ಲ. ಪ್ರತಿಯೊಂದು ಪಾಯಿಂಟಿಗೂ ಉತ್ತರ ಕೊಡಬೇಕೆಂಬ ಇಷ್ಟವಿದ್ದರೆ, ಸರಿಯಾಗಿ ವಿಚಾರಿಸಿ ಉತ್ತರ ಹೇಳಬೇಕು. ಅದ್ದರಿಂದ ವಿವರಗಳನ್ನು ತಿಳಿಸಿದರೆ ಒಳ್ಳೆಯದು.

ಶ್ರೀ ಬಿ. ಚನ್ನಬೈರೇಗೌಡ.—ಹೊಸಕೋಟೆ ತಾಲ್ಲೂಕು ಸುನ್ನ ಷಫರುದ್ದೀನ್ ಎಂಬುವವರು ತಾಲ್ಲೂಕ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾಗಿದ್ದರು, ಎಂ.ಪಿ.ಸಿ.ಸಿ. ಸದಸ್ಯರಾಗಿದ್ದರು. ಅವರು ರಿಸರ್ವ್ ಬ್ಯಾಂಕಿನಲ್ಲಿ ಆರ್.ಟಿ.ಓ. ಆಫೀಸಿಗೆ ಸೇರಬೇಕಾದ ಹಣವನ್ನು ಕಟ್ಟುವ ಸಂಬಂಧದಲ್ಲಿ ಸುಳ್ಳು ಚಲನಗಳನ್ನು ಕೊಟ್ಟು, ರಿಸರ್ವ್ ಬ್ಯಾಂಕಿನ ಸೀಲನ್ನು ಒತ್ತಿ ಸುಮಾರು 11 ಲಕ್ಷ ರೂಪಾಯಿಗಳನ್ನು ತಿಂದುಹಾಕಿದ್ದಾರೆ. ಇದು ನಡೆದು ಸುಮಾರು ಐದು ವರ್ಷವಾಯಿತು. ಅವರು ಮತ್ತು ಅವರ ಅಣ್ಣತಮ್ಮಂದಿರ ಮೇಲೆ ಎರಡು ಮೂರು ಕೇಸುಗಳಾಗಿ ಅದರಲ್ಲಿ ಆರು ತಿಂಗಳ ಸಜ್ಜಾ ಆಗಿದೆ. ಈಗ ಆ ಕೇಸು ಅಪೀಲು ಕೋರ್ಟಿನಲ್ಲಿದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಒಂದು ಪಾಯಿಂಟ್ ಆಫ್ ಆರ್ಡರ್ ಸ್ವಾಮಿ. ಸಭೆಯಲ್ಲಿ ಹೆಸರನ್ನು ಹೇಳಿದರೆ ಹೆಸರು ಹೇಳಬಾರದು ಎಂದು ಹೇಳುತ್ತಾರೆ. ಹೆಸರನ್ನು ಹೇಳದೆ ಇದ್ದಾಗ ಮಾನ್ಯ ಮಂತ್ರಿಗಳು ಹೆಸರನ್ನು ಹೇಳಿ ಎನ್ನುತ್ತಾರೆ.

†Sri B. D. JATTI.—These are matters which are pending before the Court. He makes an allegation against A,B, and C. If the Hon'ble House is interested in knowing the facts, he may say: otherwise, he need not.

ಶ್ರೀ ಬಿ. ಚನ್ನಬ್ಯೆರೇಗೌಡ.—ಇನ್ನು ವರ್ಗಾವರ್ಗಿಗಳ ವಿಷಯ ಸ್ವಾಮಿ. ಈ ದೇಶದಲ್ಲಿ ನಡೆಯತಕ್ಕ ರೆವೆನ್ಯೂ ಇನ್‌ಸ್ಪೆಕ್ಟರುಗಳಿಂದ ಹಿಡಿದು ಡೆಪ್ಯುಟಿ ಕಮಿಷನರ್, ಡಿವಿಜನಲ್ ಕಮಿಷನರ್‌ವರೆಗೆ ಕೆಲವು ಕಾಂಗ್ರೆಸ್ಸಿನವರ, ಸ್ವಪಕ್ಷದ ಜನರ ಒತ್ತಡಕೋಸ್ಕರ ವರ್ಗಾವರ್ಗಿಗಳು ನಡೆಯುತ್ತವೆ. ಕೆಲವು ದಿನಗಳ ಹಿಂದೆ ಡೆಪ್ಯುಟಿ ಕಮಿಷನರುಗಳ ವರ್ಗಾವರ್ಗಿ ಸಂಬಂಧದಲ್ಲಿ ಮಂತ್ರಿಮಂಡಲದಲ್ಲಿ ತೀರ್ಮಾನವಾಗಿ, ಆ ತೀರ್ಮಾನ ಹೊರಬಂದ ಕೂಡಲೇ ಕೆಲವು ಕಾಂಗ್ರೆಸ್ಸಿಗರು ಬಂದು ರೆವೆನ್ಯೂ ಮಂತ್ರಿಗಳಲ್ಲಿ ಹೇಳಿಕೊಂಡದ್ದರಿಂದ ಅವರು ಆ ವರ್ಗಾವರ್ಗಿಯನ್ನು ತಡೆ ಹಿಡಿದು, ಕ್ಯಾನ್ಸಲ್ ಮಾಡಿದ್ದಾರೆ. ಕೋಲಾರದಿಂದ ಬೆಂಗಳೂರು, ಬೆಂಗಳೂರಿನಿಂದ ಇನ್ನೊಂದು ಕಡೆ ಹೀಗೆ ವರ್ಗವಾಗಿದ್ದ ಡೆಪ್ಯುಟಿ ಕಮಿಷನರುಗಳಿಗೆ ಸಂಬಂಧಿಸಿದ ಆರ್ಡರನ್ನು ತಡೆ ಹಿಡಿದಿದ್ದಾರೆ. ಇದರ ಪರಿಣಾಮ ವೇನಾಗುತ್ತದೆ? ಆ ಡೆಪ್ಯುಟಿ ಕಮಿಷನರ ಹತ್ತಿರ ಸದಸ್ಯರುಗಳು ಕೆಲವರು ಪ್ರಭಾವ ಬೆಳಸಿಕೊಂಡು ಆ ಮೂಲಕ ಚಿಕ್ಕ ಅಧಿಕಾರಿಗಳ ಹತ್ತಿರ ಪ್ರಭಾವವನ್ನು ಬೆಳಸಿಕೊಂಡು ಜನಸಾಮಾನ್ಯರ ಮೇಲೆ ಪ್ರಭಾವವನ್ನು ಬೀರಿ ತಮ್ಮ influence ಬೆಳಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಇದನ್ನೆಲ್ಲ ಕಂಡುಹಿಡಿಯುವುದಕ್ಕೆ ಒಂದು ಕಮಿಟಿಯನ್ನು ನೇಮಕ ಮಾಡಬೇಕೆಂದು ನಾವು ಹೇಳುತ್ತಿದ್ದೇವೆ.

ಹೀಗೆಯೇ ಸರ್ಕಾರವು ಕಾಂಗ್ರೆಸ್ ಪಕ್ಷವನ್ನು ಇತರ ವಿಚಾರಗಳಲ್ಲಿಯೂ ಬಲಪಡಿಸುವುದಕ್ಕೆ ಪ್ರಯತ್ನ ಮಾಡುತ್ತಿದೆ. ಕಳೆದ ವರ್ಷ ಸ್ಕಾಲರ್‌ಷಿಪ್ ಕಮಿಟಿಗಳನ್ನು ಮಾಡಿದರು; ಅದರಲ್ಲಿ ಒಂದು ನೀತಿ ಇಲ್ಲ. ವಿಧಾನ ಸಭಾ ಸದಸ್ಯರು ಚೇರ್ಮನ್ ಆಗಿರಬೇಕು, ತಾಲ್ಲೂಕು ಬೊರ್ಡ್ ಪ್ರೆಸಿಡೆಂಟರು ಚೇರ್ಮನ್ನರಾಗಿರಬೇಕು ಎಂದು ಮಾಡಿದರು. ಕಾಂಗ್ರೆಸ್ ಪಕ್ಷದವರು ವಿಧಾನ ಸಭಾ ಸದಸ್ಯರಾಗಿ ಇಲ್ಲದೆ ಇರುವ ಕಡೆ ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರನ್ನು ಈ ಕಮಿಟಿಗಳಿಗೆ ಚೇರ್ಮನ್ನರಾಗಿ ಮಾಡಿದರು. ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಸರ್ಕಾರದವರು ಬೇರೆ ರೀತಿಯಾಗಿ ಮಾಡಿದರು. ಅಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರಿದ ವಿಧಾನ ಸಭಾ ಸದಸ್ಯರಾಗಲೀ ತಾಲ್ಲೂಕು ಬೋರ್ಡ್ ಅಧ್ಯಕ್ಷರಾಗಲೀ ಇಲ್ಲವಾದ್ದರಿಂದ ಬೇರೆ ತಾಲ್ಲೂಕಿನವನ್ನು ತಂದು ಸ್ಕಾಲರ್‌ಷಿಪ್ ಕಮಿಟಿಗೆ ಚೇರ್ಮನ್ನರಾಗಿ ಮಾಡಿದ್ದಾರೆ. ಈ ಸರ್ಕಾರ ನಡೆಸತಕ್ಕ ಇಂಥ ಪಕ್ಷಪಾತವನ್ನು ತಡೆಗಟ್ಟುವುದಕ್ಕೆ ವಿಶೇಷ ಅಧಿಕಾರವುಳ್ಳ ಒಂದು ಹೈ ಪವರ್ ಕಮಿಟಿಯನ್ನು ನೇಮಿಸಬೇಕು ಎನ್ನುವುದು ಈಗ ತಂದಿರುವ ನಿರ್ಣಯದ ಉದ್ದೇಶವಾಗಿದೆ.

ಖಾದಿ ಬೋರ್ಡ್ ಪ್ರಕರಣದ ಬಗ್ಗೆ ಈಗಾಗಲೇ ಸಭೆಯ ಮುಂದೆ ಅನೇಕ ವಿಚಾರಗಳನ್ನು ನನ್ನ ಮಾನ್ಯ ಸ್ನೇಹಿತರು ಪ್ರಸ್ತಾಪ ಮಾಡಿದ್ದಾರೆ. ಖಾದಿ ಬಹಳ ಪವಿತ್ರವಾದುದು ಎಂದು ಹೇಳುತ್ತಿದ್ದಾರೆ. ಈ ಖಾದಿಗೆ ಗೌರವ, ಮನ್ನಣೆ ಕೊಡುತ್ತಿದ್ದಾರೆ. ಅಂಥ ಪವಿತ್ರವಾದ ಖಾದಿಗೆ ಖಾದಿ ಬೋರ್ಡ್ ಮೂಲಸ್ಥಾನವಾಗಿದೆ. ಈ ಖಾದಿ ಬೋರ್ಡಿನಲ್ಲಿ ಐದು ಲಕ್ಷ ರೂಪಾಯಿ ದುರುಪಯೋಗವಾಗಿದೆ ಎಂದು ನಾವು ಕಳೆದ ಅಧಿವೇಶನದಲ್ಲಿ ಸಹ ಹೇಳಿದೆವು. ಈ ಸಾರಿಯೂ ಹೇಳಿದ್ದೇವೆ. ಅದರಲ್ಲಿ ನಡೆಯತಕ್ಕ ಅನ್ಯಾಯಗಳನ್ನು ಸಹ ಹೇಳಿದ್ದೇವೆ. ನಮ್ಮ ರಾಜ್ಯದಲ್ಲಿ ಖಾದಿ ಉಪಯೋಗಿಸತಕ್ಕ ಜನ ಸುಮಾರು ಎರಡು ಲಕ್ಷ ಇರಬಹುದು. ಅವರಿಗೋಸ್ಕರ ಖಾದಿಯನ್ನು ತರಿಸಿ ಆ ಬಟ್ಟೆಯ ಮೇಲೆ ರಿಬೇಟ್ ಸಹ ಕೊಡುತ್ತಿದ್ದೀರಿ. ದೇಶದ ಹಣವನ್ನು ಕೊಡತಕ್ಕ ಖಾದಿ ಬೋರ್ಡಿನಲ್ಲಿ ಇಂಥ ಅನ್ಯಾಯ ನಡೆದಿದೆ, ಲಂಚರುಷುವತ್ತುಗಳು ನಡೆದಿವೆ. ಇದನ್ನು ತಡೆಗಟ್ಟುವುದಕ್ಕೆ ಈ ಸರ್ಕಾರದಿಂದ ಆಗಿಲ್ಲ. ಆದುದರಿಂದ ಒಂದು ಕಮಿಟಿಯನ್ನು ನೇಮಕ ಮಾಡಬೇಕು ಎಂದು ನಾವು ಹೇಳುತ್ತಿದ್ದೇನೆ.

ಭಾರತದ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಡಿ. ಸಂಜೀವಯ್ಯನವರೇ ಅನ್ಯಾಯವಾಗಿ ದುಡ್ಡು ಸಂಪಾದನೆ ಮಾಡಿರುವುದು, ಅನ್ಯಾಯವಾಗಿ ಆಸ್ತಿ ಮಾಡಿರುವುದನ್ನು ಕಂಡುಹಿಡಿಯುವುದಕ್ಕೋಸ್ಕರ ಕಾಂಗ್ರೆಸ್ ಮಂತ್ರಿಗಳು ರೆಕ್ಕ ಕೊಡಬೇಕೆಂದು ಹೇಳಿದ್ದಾರೆ. ಇವತ್ತಿನ ದಿವಸ ನಾವೇನೂ ಹೊಸದಾಗಿ ಒಂದು ಕಮಿಟಿಯನ್ನು ಮಾಡಿ ಅದರಲ್ಲಿ ನಮ್ಮನ್ನು ಸೇರಿಸಿ ತಂದು ಕೇಳುತ್ತಾ ಇಲ್ಲ, ಎಲ್ಲಾ ದೇಶಗಳಲ್ಲೂ ಇಂತಹ ಕಮಿಟಿಯ ಅವಶ್ಯಕತೆ ಇದೆ ಎಂದು ಹೇಳುತ್ತಾ ಇದ್ದಾರೆ. ಅದಕ್ಕೆ ಹೆಚ್ಚು ಅಧಿಕಾರ ಕೊಡಬೇಕು ಮತ್ತು ಅವರ ತೀರ್ಮಾನಕ್ಕೆ ಸರ್ಕಾರದವರು ಮನ್ನಣೆ ಕೊಡಬೇಕು. ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಲಂಚಗುಳಿತನ ಮಾಡತಕ್ಕ

ಅಧಿಕಾರಗಳು ಮತ್ತು ರಾಜಕಾರಣಿಗಳನ್ನು ಶಿಕ್ಷೆ ಮಾಡುವುದಕ್ಕೆ ಹೆಚ್ಚು ಅನುಕೂಲಗಳಿಲ್ಲ ಎಂದು ಹೇಳುತ್ತಾ ಇದ್ದರು, ಅದಕ್ಕೆ ತಕ್ಕಂತಹ ಶಾಸನ ಇಲ್ಲ ಎಂದು ಅವರು ಅಭಿಪ್ರಾಯ ಪಟ್ಟರು. ರಷ್ಯಾ ದೇಶದಲ್ಲಿ ಮೂರು ತಿಂಗಳ ಹಿಂದೆ ಕೆಲವು ಜನ ಅಧಿಕಾರಿಗಳನ್ನು—6 ಜನರನ್ನು—ಇಂತಹ ಕೆಲಸ ಮಾಡಿದ್ದಕ್ಕಾಗಿ ಗುಂಡಿನಿಂದ ಹೊಡೆದು ಸಾಯಿಸಿದ್ದಾರೆ, ಹಿಂದೆ ಪಾಕಿಸ್ತಾನದಲ್ಲೂ ಕೂಡ ಒಬ್ಬ ಸೆಷನ್ಸ್ ಜಡ್ಜರನ್ನು ಅಕ್ರಮವಾಗಿ ಟಿ.ಎ. ತೆಗೆದುಕೊಂಡಿದ್ದರೆಂದು ಡಿಸ್ಮಿಸ್ ಮಾಡಿದರು. ಅಂತಹ ಪ್ರಸಂಗಗಳೂ ಕೂಡ ನಡೆದಿವೆ. ಈಗ ನಮ್ಮಲ್ಲಿರತಕ್ಕ ನಿಯಮಗಳ ಪ್ರಕಾರ ಸಿ.ಸಿ.ಎ. ರೂಲ್ಸ್ ಅನುಸರಿಸಿ ಯಾವುದಾದರೂ ಒಬ್ಬ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳಬೇಕಾದರೆ ನಾಲ್ಕೈದು ತಿಂಗಳು ಆಗುತ್ತದೆ ಅಷ್ಟರೊಳಗೆ ಆ ಅಧಿಕಾರಿ ಶಾಸನ ಸಭೆಯ ಪೆಂಬರುಗಳ ಪಾದಗಳನ್ನು ಹಿಡಿದುಕೊಂಡು ಮಂತ್ರಿಗಳ ಮೇಲೆ ಒತ್ತಾಯ ಹಾಕಿ ಅತನ ಮೇಲೆ ತೆಗೆದುಕೊಳ್ಳಬೇಕಾಗಿರತಕ್ಕ ಕ್ರಮ ತೆಗೆದುಕೊಳ್ಳದಂತೆ ಮಾಡಿರತಕ್ಕ ನೂರಾರು ನಿದರ್ಶನಗಳು ಇವೆ. ನಿತ್ಯ ಇಂತಹ ಅನಾಚಾರಗಳನ್ನು ಮಾಡುತ್ತಿರುವಂತಹ ಕಾಂಗ್ರೆಸ್ ಸರ್ಕಾರದಲ್ಲಿ ನಡೆಯತಕ್ಕ ಅನ್ಯಾಯಗಳನ್ನು ನಿರ್ಮೂಲ ಮಾಡುವುದಕ್ಕೆ ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ಕೇಳಿರತಕ್ಕ ಈ ನಿರ್ಣಯವನ್ನು ಒಪ್ಪಿಕೊಳ್ಳಿ, ಇದಕ್ಕೆ ಸರ್ವಾನುಮತದಿಂದ ಅಂಗೀಕಾರ ಮಾಡಿ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ. ಜೆ. ದೊಡ್ಡಮೇಟಿ (ರೋಣ್).—ಸ್ವಾಮಿ, ಈ ನಿರ್ಣಯ ಏನು ತಂದಿದ್ದಾರೆ ಇದರ ಮೇಲೆ ನನ್ನ ಕೆಲವು ಅಭಿಪ್ರಾಯಗಳನ್ನು ಹೇಳಲಿಕ್ಕೆ ಅಪೇಕ್ಷೆ ಮಾಡುತ್ತೇನೆ. ಈ ನಿರ್ಣಯವನ್ನು ಮೊದಲು, ಹಿಂದಿನ ಸಲ ನಾನೇ ತಂದದ್ದು ನಿಜ, ಅದನ್ನು ಸೂಚಿಸಲಿಲ್ಲ ಎಂಬ ಮಾತೂ ನಿಜ. ಅದೇ ನಿರ್ಣಯವನ್ನು ಇತರ 35 ಜನ ಕಳುಹಿಸಿರುವುದೂ ನಿಜ. ಆದರೆ ನಾನು ನಿರ್ಣಯ ತಂದುದರ ಹಿಂದಿನ ಉದ್ದೇಶ ಮತ್ತು ಈಗ ಈ ನಿರ್ಣಯವನ್ನು ಉಪಯೋಗಿಸಿಕೊಳ್ಳುವುದರೊಳಗೆ ಸಾಮ್ಯ ಇದೆಯೇ ಎಂಬುದನ್ನು ತಾವು ವಿಚಾರ ಮಾಡಬೇಕು. ಅದಕ್ಕೂ ಇದಕ್ಕೂ ಸಾಮ್ಯ ಇಲ್ಲ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ದೇಶದ ಯಾವುದೇ ಸಮಸ್ಯೆಯನ್ನು ರಾಜಕಾರಣಿಗಳು ಅಥವಾ ರಾಜಕೀಯ ಪಕ್ಷಗಳು ಬಳಸಿಕೊಳ್ಳುವುದು ಒಂದು ಭ್ರಷ್ಟಾಚಾರ ಎಂದು ನಾನು ಹೇಳುತ್ತೇನೆ. ಪಕ್ಷ ಅಗಲಿ, ರಾಜಕಾರಣಿಯಾಗಲೀ ಬಳಸಿಕೊಳ್ಳಬಾರದು. ಈ ನಿರ್ಣಯದೊಳಗೆ ಏನು ಹೇಳಿದೆ ಎಂದರೆ ಸರ್ಕಾರದ ಹಾಗೂ ಸರ್ಕಾರದ ಪೂರ್ಣ ಆಡಳಿತಕ್ಕೆ ಒಳಪಡದ ಅರ್ಧ ಆಡಳಿತಾತ್ಮಕ ಹಾಗೂ ಸಾಂಘಿಕ ಸಂಸ್ಥೆಗಳಲ್ಲಿರತಕ್ಕ ದುರಾಚಾರ, ಸ್ವಜನ ಪಕ್ಷ ಪಾತ ಮತ್ತು ಭ್ರಷ್ಟಾಚಾರ ಇವು ಮೂರೂ ಒಂದೇ ಮಾತಿಗೆ ಸೇರಿದ್ದು ಒಂದೇ ಮಾತಿನಲ್ಲಿ ಭ್ರಷ್ಟಾಚಾರ ಎಂದರೆ ಇದೆಲ್ಲಾ ಬರುತ್ತದೆ ಎಂದು ತಿಳಿದುಕೊಳ್ಳುತ್ತೇನೆ. ಆದರೆ ಕಾನೂನು ದೃಷ್ಟಿಯಿಂದ ಅವು ಬೇರೆ ಬೇರೆ ಇರುವ ಕಾರಣಕ್ಕಾಗಿ ಈ ಮೂರು ಶಬ್ದಗಳನ್ನೂ ಇಲ್ಲಿ ಉಪಯೋಗಿಸಲಾಗಿದೆ ಎಂದು ತಿಳಿದುಕೊಳ್ಳುತ್ತೇನೆ. ಆದ್ದರಿಂದ ಇಲ್ಲಿ ಭ್ರಷ್ಟಾಚಾರ ಎಂದು ಯಾವ ಯಾವ ಶಬ್ದ ಉಪಯೋಗ ಮಾಡುತ್ತೇನೆಯೋ ಆಗೆಲ್ಲಾ ಈ ಮೂರೂ ಮಾತುಗಳೂ ಸೇರುತ್ತವೆ ಎಂದು ತಿಳಿದುಕೊಳ್ಳಬೇಕೆಂದು ಹೇಳುತ್ತೇನೆ. ಭ್ರಷ್ಟಾಚಾರ ನಿರ್ಮೂಲನ ಮಾಡುವುದಕ್ಕೆ ಒಂದು ಕಮಿಟಿಯನ್ನು ನೇಮಕ ಮಾಡಬೇಕೆಂದು ಹೇಳಿದ್ದಾರೆ ಇದಕ್ಕೆ ಪೂರ್ವದಲ್ಲಿ ಭ್ರಷ್ಟಾಚಾರ ಇದೆಯೇ ಹೇಗೆ? ಇದ್ದರೆ ಎಲ್ಲೆಲ್ಲಿ ಇದೆ ಎಂಬುದನ್ನು ಪರಿಶೀಲನೆ ಮಾಡುವುದು ಅವಶ್ಯಕ. ಆ ದೃಷ್ಟಿಯಿಂದ ವಿಚಾರ ಮಾಡಿ ನೋಡಿದರೆ ಭ್ರಷ್ಟಾಚಾರ ಇದೆ, ಸಾಕಾದಷ್ಟು ಇದೆ, ಜನರು ರೋಸಿಹೋಗುವಷ್ಟು ಇದೆ ಎಂಬುದರಲ್ಲಿ ಬಹುಶಃ ಎರಡು ಅಭಿಪ್ರಾಯವಿಲ್ಲ. ಆದರೆ ಇದಕ್ಕೆ ಕಾರಣ ಕೇವಲ ಸರ್ಕಾರ ಅಥವಾ ಕಾಂಗ್ರೆಸ್ ಪಕ್ಷ ಎಂದು ಅನ್ನುವುದಕ್ಕಿಂತ—ಇದಕ್ಕೆ ಕಾರಣ ಸಾಮಾನ್ಯವಾಗಿ ಸರ್ಕಾರದ್ದೂ ಉಂಟು, ಶಾಸನ ಸಭಾ ಸದಸ್ಯರದೂ ಉಂಟು, ಇನ್ನುಳಿದ ಪ್ರತಿನಿಧಿಗಳು, ಮುಖಂಡರು, ಕಾರ್ಯಕರ್ತರು ಯಾರ್ಯಾರು ಇದ್ದಾರೆ ಅವರೆಲ್ಲರೂ ಇದಕ್ಕೆ ಕೆಲ ಕೆಲವು ಅಂಶಾತ್ಮವಾಗಿ ಜವಾಬ್ದಾರಿಯನ್ನು ಹೊರಬೇಕಾಗಿದೆ, ಕೇವಲ ಸರ್ಕಾರದ ಮೇಲೆ ಇದು ನಿಂತಿಲ್ಲ ಆದರೆ ಸರ್ಕಾರ ಈ ಜವಾಬ್ದಾರಿಯನ್ನು ಹೊರದೇ ಹೋದರೆ ಭ್ರಷ್ಟಾಚಾರ ನಿರ್ಮೂಲವಾಗುವುದಿಲ್ಲ. ಆಕಾರಣಕ್ಕಾಗಿ ಈ ಪ್ರಶ್ನೆಯನ್ನು ವಿಚಾರ ಮಾಡುತ್ತಾ ಹೋದರೆ ಶಾಸ್ತ್ರೀಯವಾಗಿ ಈ ಪ್ರಶ್ನೆಯನ್ನು ಹೇಗೆ ಬಿಡಿಸಬೇಕು ಎಂಬುದನ್ನು ವಿಚಾರ ಮಾಡಬೇಕೇ ಹೊರತು ಕೇವಲ ಪಕ್ಷದ ದೃಷ್ಟಿಯಿಂದ ಅಥವಾ ರಾಜಕೀಯ ದೃಷ್ಟಿಯಿಂದ ವಿಚಾರ ಮಾಡುವುದು ಸರಿಯಲ್ಲ. ಶಾಸ್ತ್ರೀಯವಾಗಿ ವಿಚಾರ ಮಾಡಿನೋಡಿದರೆ ಏನು ಕಾಣುತ್ತದೆ? ಈ ದೇಶದಲ್ಲಿ ಬರೀ ನಮ್ಮ ರಾಜ್ಯದಲ್ಲಿ ಅಷ್ಟೇ ಅಲ್ಲ ಹಿಂದೂಸ್ಥಾನದ ಬೇರೆ ಬೇರೆ ರಾಜ್ಯಗಳಲ್ಲಿ ಇವತ್ತು ಈ ಪ್ರಶ್ನೆ ಬಹಳ ದೊಡ್ಡದಾಗಿ ವ್ಯಾಪಕವಾಗಿದೆ. ಅದನ್ನು ನೋಡಿದರೆ ನಮ್ಮ ದೇಶದಲ್ಲಿ ಇದು ಕಡಿಮೆ ಇದೆ ಎಂದು ಹೇಳಬಹುದು. ಒಂದು ಉದಾಹರಣೆ ಹೇಳುವುದಾದರೆ ಉತ್ತರ ಕರ್ನಾಟಕದಲ್ಲಿ ಕಾರವಾರ ಜಿಲ್ಲೆಯನ್ನು ನೋಡಿ ಅಲ್ಲಿ ಲಂಚಗುಳಿತನ ಅಥವಾ ಭ್ರಷ್ಟಾಚಾರ ಬಹುಮಟ್ಟಿಗೆ ಕಡಮೆ ಇದೆ, ಇದಕ್ಕೆ ಕಾರಣವೇನು? 1921ರಿಂದ ಅಲ್ಲಿ ಅನೇಕ ಬಗೆಯ ಸತ್ಯಾಗ್ರಹಗಳಾಗಿ

(ಶ್ರೀ ಎ. ಜೆ. ದೊಡ್ಡಮೇಟಿ)

ಜನತೆಯಲ್ಲಿ ಅಂಥೋಳನಗಳ್ಳಾಗಿ ವಿಶೇಷಃ ರೈತರು ಬಹಳಷ್ಟು ಸೋತಿದ್ದಾರೆ, ಇಂತಹ ಭ್ರಷ್ಟಾಚಾರ ಮಾಡುವಂತಹ ತ್ರಾಣ ಅಲ್ಲಿನ ಅಧಿಕಾರಿಗಳಿಗೂ ಇಲ್ಲ, ರಾಜಕಾರಣಿಗಳಿಗೂ ಇಲ್ಲ ಅಂತಹ ಒಂದು ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ಆ ದೃಷ್ಟಿಯಿಂದ ವಿಚಾರ ಮಾಡಿನೋಡಿದರೆ ಇವತ್ತು ಭ್ರಷ್ಟಾಚಾರದೊಳಗೆ ಎರಡು ವಿಭಾಗಗಳನ್ನು ಮಾಡಬಹುದು, ಒಂದು ಆಡಳಿತಾತ್ಮಕ ಭ್ರಷ್ಟಾಚಾರ ಮತ್ತೊಂದು ರಾಜಕೀಯ ಭ್ರಷ್ಟಾಚಾರ ರಾಜಕೀಯ ಭ್ರಷ್ಟಾಚಾರ ಎನ್ನುವುದರಲ್ಲಿ ಸಂಸ್ಥೆಗಳು ಬರುತ್ತದೆ. ಸಹಕಾರ ಸಂಖ್ಯೆಗಳವರು ಬರುತ್ತಾರೆ, ಕಾರ್ಪೊರೇಟ್ ಬಾಡೀಸ್ ಅವರು ಬರುತ್ತಾರೆ, ರಾಜಕೀಯದ ವ್ಯವಹಾರದಲ್ಲಿ ಇದ್ದ ಪುಡಾರಿಗಳು ಬರುತ್ತಾರೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಕಾರವಾರ ಜಿಲ್ಲೆಯಲ್ಲಿ ಆ ತರಹ ಏನೂ ಇಲ್ಲ ಎಂದು ಹೇಳಿದಿರಿ, ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್‌ನವರು 50 ಸಾವಿರ ರೂಪಾಯಿಗಳನ್ನು ಫಂಡಿಗೆ ಕೊಡಬೇಕಾದರೆ ಯಾವ ರೀತಿ ಕೊಟ್ಟರು ?

ಶ್ರೀ ಎ. ಜೆ. ದೊಡ್ಡಮೇಟಿ.—ಆ ಪ್ರಶ್ನೆಯೇ ಬೇರೆ. ಇಲ್ಲಿ ಪ್ರಶ್ನೆ ಏನಿದೆ ಎಂದರೆ ಜನ ಸಾಮಾನ್ಯರೊಳಗೆ ಹೆಚ್ಚಿನ ಜಾಗೃತ ಎಲ್ಲೆಲ್ಲಿ ಇದೆ ಅಲ್ಲೆಲ್ಲಾ ಭ್ರಷ್ಟಾಚಾರ ಕಡಿಮೆ ಇದೆ ಎನ್ನುವುದು ಒಂದು ಅಂತ ಅದನ್ನು ಮಾತ್ರ ನಾನು ಇಲ್ಲಿ ಹೇಳಿದೆ ಅಷ್ಟೆ. ಇನ್ನು ಆಡಳಿತಾತ್ಮಕ ಭ್ರಷ್ಟಾಚಾರದಲ್ಲಿ ಹೇಳುವುದಾದರೆ, ರಾಜಕೀಯ ಭ್ರಷ್ಟಾಚಾರ ಮತ್ತು ಆಡಳಿತಾತ್ಮಕ ಭ್ರಷ್ಟಾಚಾರ ಇವೆರಡೂ ಒಂದಕ್ಕೊಂದಕ್ಕೆ ಸ್ನೇಹ ಇದೆ, ಎರಡೂ ಒಂದಕ್ಕೊಂದಕ್ಕೆ ತಳಕು ಆಗಿದೆ ಒಂದು ಬಿಟ್ಟು ಇನ್ನೊಂದು ಇರುವುದಿಲ್ಲ, ಒಂದು ರೂಪಾಯಿನ ಎರಡು ಮಗ್ಗಲು ಇವು. ಹೀಗೆ ಮೊದಲನೇ ಮುಖ ಪೊಲಿಟಿಕಲ್ ಭ್ರಷ್ಟಾಚಾರ, ಎರಡನೇ ಮುಖ ಆಡಳಿತ ಭ್ರಷ್ಟಾಚಾರ. ಆದುದರಿಂದ ಮೊದಲು ಈ ಪೊಲಿಟಿಕಲ್ ಭ್ರಷ್ಟಾಚಾರ ನಿಲ್ಲದೆ, ಈ ಆಡಳಿತ ಭ್ರಷ್ಟಾಚಾರ ನಿಲ್ಲುವುದಿಲ್ಲ. ಹಾಗೆ ಅದನ್ನು ನಿಲ್ಲಿಸುತ್ತೇವೆಂದು ಹೇಳತಕ್ಕದ್ದು ಶಾಸ್ತ್ರೀಯವಾದ್ದೂ ಅಲ್ಲ. ಅದೊಂದು ಕೇವಲ ಭ್ರಮೆ ಎಂತ ಹೇಳಬಹುದು: ಇಂದೊಂದು ಮೊಡ್ಡ ರಾಷ್ಟ್ರೀಯ ರೋಗ. ನಾವು ಈ ದಿವಸ ಈ ಮಲೇರಿಯಾ, ಕಾಲರ, ಕ್ಷಯ ಇತ್ಯಾದಿ ರೋಗಗಳನ್ನು ತಡೆಗಟ್ಟುವಂತೆ ಇದನ್ನು ತಡೆಗಟ್ಟಲು ಖಂಡಿತಾ ಸಾಧ್ಯವಿಲ್ಲ. ಏಕೆಂದರೆ ಇಂದೊಂದು ಅಂಥಾ ದೊಡ್ಡ ರಾಷ್ಟ್ರೀಯ ಸಾಂಕ್ರಾಮಿಕ ಜಾಡ್ಯ. ಇದು ನಿಲ್ಲಬೇಕಾಗಿದ್ದರೆ ರಾಷ್ಟ್ರೀಯ ಶೀಲ ಹೆಚ್ಚಬೇಕು; ಅದು ಹೊರತು ಇದು ಸಾಧ್ಯವೇ ಇಲ್ಲ. ಈ ದೇಶಕ್ಕೆ ಯಾವ ಆಡಳಿತವೇ ಬರಲೀ ಆ ಕಮ್ಯುನಿಜಮ್ಮೇ ಬರಲೀ ಅಥವಾ ಇನ್ನಾವ ಇಜಂಗಳೇ ಬರಲಿ ಇದನ್ನು ನಿಲ್ಲಿಸಲು ಸಾಧ್ಯವಿಲ್ಲ ಎಂದು ಹೇಳುತ್ತೇನೆ. ಈ ರೋಗ ಕ್ಯಾಪಿಟಲಿಜಂನಲ್ಲೂ ಇದೆ ಆ ಸೋಷಿಯಲಿಜಂನಲ್ಲೂ ಇದೆ. ಆದುದರಿಂದ ಈ ಪಕ್ಷ ಹೋಗಿ ಆ ಪಕ್ಷ ಬರಲಿ ಇದು ಹೋಗುತ್ತೆ, ಈ ಭ್ರಷ್ಟಾಚಾರ ನಿಲ್ಲುತ್ತೆ ಎಂತ ಯಾರಾದರೂ ಭಾವಿಸಿದ್ದರೆ ಕೇವಲ ಅದೊಂದು ಭ್ರಮೆಯೇ ಸರಿ. ಈ ಎಲ್ಲಾ ರಾಜಕೀಯ ಪಕ್ಷಗಳಲ್ಲೂ ಪುಡಾರಿಗಳಿದ್ದಾರೆ. ಎಲ್ಲಡೆಗಳಲ್ಲೂ ಈ ಭ್ರಷ್ಟಾಚಾರ ಇದ್ದೇ ಇದೆ. ಆದರೆ ಈ ದಿವಸ ಈ ಭ್ರಷ್ಟಾಚಾರದ ಬಗ್ಗೆ ಎಷ್ಟು ಜನ ಸದಸ್ಯರುಗಳು ಮಾತನಾಡಿದ್ದಾರೋ ಅಷ್ಟು ಜನಗಳಾದರೂ ಒಂದು ನಿಯೆತ್ತಿನಿಂದ ನಡೆಯಲು ನಿರ್ಧಾರ ಮಾಡಿದ್ದೇ ಆದರೆ ಅಲ್ಲಿಗೆ 100 ಕ್ಕೆ 15ರಷ್ಟು ಈ ಭ್ರಷ್ಟಾಚಾರ ಕಡಮೆಯಾಯಿತೆಂದು ಧಾರಾಳವಾಗಿ ಹೇಳಬಹುದು. ಈ ರಾಷ್ಟ್ರೀಯ ಶೀಲ ಬೆಳೆಯದ ಹೊರತು ಈ ಅನೀತಿಗಳು ನಿಲ್ಲಲು ಸಾಧ್ಯವೇ ಇಲ್ಲ. ಇನ್ನಾದರೂ ನಾವು ಈಗ ಎಚ್ಚೆತ್ತುಕೊಂಡು ಈ ರಾಷ್ಟ್ರೀಯ ಶೀಲವನ್ನು ಹೆಚ್ಚಿಸಿಕೊಳ್ಳದಿದ್ದರೆ ಮುಂದೆ ನಮಗಿನ್ನೂ ಬಹಳ ಕಷ್ಟಗಳು ಬರುತ್ತವೆ. ಅವರೆ ಈ ವಿಚಾರದಲ್ಲಿ ಪೊನ್ನೆತಾನೆ ಕೇಂದ್ರದಲ್ಲಿ ಶ್ರೀ ನಂದಾ ಅವರ ನೇತೃತ್ವದಲ್ಲಿ ಒಂದು ಕಮಿಟಿಯನ್ನು ಸ್ಥಾಪಿಸಲಾಯಿತೆಂದು ಕೇಳಿದೆ. ಈ ಹಿಂದೆ ಶ್ರೀ ಸಂತಾನಂ ಅವರು ಈ ವಿಚಾರದಲ್ಲಿ ಒಂದು ವರದಿಯನ್ನು ಕೊಟ್ಟಿದ್ದರು. ಆದರೆ ಈಗ ಈ ನಂದಾ ಅವರ ಕಮಿಟಿಯನ್ನು ಕೇವಲ ಒಂದು ಎಚ್ಚರಿಕೆಗಾಗಿ ಮಾಡಿದ್ದಾರೆಂದು ತಿಳಿಯುತ್ತೇನೆ. ಆದರೆ ಇದೂ ಕೂಡ ನಾನಾಗಲೇ ಹೇಳಿದಂತೆ ಶಾಸ್ತ್ರೀಯವಾದ ಮಾರ್ಗವಲ್ಲ: ಆದುದರಿಂದ ಇದೂ ಕೂಡ ಅರ್ಧ ಪರಿಣಾಮಕಾರಿಯೆ ಹೊರತು ಪೂರ್ಣ ಪರಿಣಾಮಕಾರಿಯಲ್ಲ. ಕಾರಣ, ಆಡಳಿತದಲ್ಲಿರತಕ್ಕ ಭ್ರಷ್ಟಾಚಾರವನ್ನು ನಿರ್ಮೂಲ ಮಾಡಬೇಕಾದರೆ ಮೊದಲು ರಾಜಕೀಯದಲ್ಲಿರತಕ್ಕ ಭ್ರಷ್ಟಾಚಾರವನ್ನು ನಿರ್ಮೂಲ ಮಾಡಬೇಕು. ಈ ಮಾತು ನೂರಕ್ಕೆನಷ್ಟು ಸತ್ಯವಾದದ್ದು, ಪ್ರಕಾಶವಾದದ್ದು. ಆದುದರಿಂದ ಮೊದಲು ರಾಜಕೀಯ ಭ್ರಷ್ಟಾಚಾರ ಹೋಗದೆ ಆಡಳಿತದಲ್ಲಿರತಕ್ಕ ಭ್ರಷ್ಟಾಚಾರ ಎಂದಿಗೂ ಕಡಮೆ ಆಗುವುದಿಲ್ಲ. ಆದುದರಿಂದ ನಂದಾ ಕಮಿಟಿಯವರು ತಾತ್ಕಾಲಿಕವಾಗಿ ಇದನ್ನು ವಿಚಾರ ಮಾಡುತ್ತಿರಬಹುದೆಂದು ನಾನು ಭಾವಿಸಿದ್ದೇನೆ. ಇದಕ್ಕೆ ಸಂಪೂರ್ಣವಾಗಿ ರಾಜಕೀಯ ಪುಡಾರಿಗಳ ಸಹಕಾರವಿದೆ. ಹೀಗೆ ಈ ಪುಡಾರಿಗಳ ಪ್ರಾಬಲ್ಯ ಎಲ್ಲ ಕಡೆಗಳಲ್ಲೂ ಇದೆ, ಎಲ್ಲ ಪಕ್ಷಗಳಲ್ಲೂ ಇದೆ. ಈ

ಹಿಂದೆ ಕಾಂಗ್ರೆಸ್ಸಿನಲ್ಲರತಕ್ಕ ನದಸ್ಯರುಗಳೆಲ್ಲ ಒಂದು ಸೂಚನೆ ಬಂತು. ಅದೇನೆಂದರೆ: ಪ್ರತಿಯೊಬ್ಬರೂ ತಮ್ಮ ತಮ್ಮ ಉತ್ಪನ್ನ ಮತ್ತು ಆಸ್ತಿಪಾಸ್ತಿಗಳು ಎಷ್ಟೆಷ್ಟಿದೆ ಎಂಬುದನ್ನು ತಿಳಿಸಬೇಕು ಎಂದು. ಆದರೆ ಆ ರೀತಿ ಒಂದು ಪಟ್ಟಿಕೊಟ್ಟಬಿಟ್ಟರೆ ಅವೆಲ್ಲರೂ ಪ್ರಾಮಾಣಿಕರಾಗಿಬಿಟ್ಟರು, ಅಥವಾ ಅಲ್ಲಿಗೆ ಈ ಸಂಸ್ಥೆ ಪೂರ್ಣವಾಗಿ ಶುದ್ಧಿಯಾದಂತಾಯಿತು ಎಂದು ನಾನು ಹೇಳುವುದಿಲ್ಲ. ನಾನೂ ಸಹಾ 2 ವರ್ಷಗಳ ಲೆಕ್ಕವನ್ನು ಕಳುಹಿಸಿಕೊಡ್ಬೆನು. ಅನಂತರ ನಾನು ಅದನ್ನು ಕಳುಹಿಸುವುದನ್ನು ನಿಲ್ಲಿಸಿಬಿಟ್ಟೆ. ಏಕೆಂದರೆ ಅದು ಪರಿಣಾಮಕಾರಿಯಾಗಲಿಲ್ಲ ವಿಫಲವಾಯಿತು. ಆ ಲೆಕ್ಕಾಚಾರ ಮಾಡಬೇಕಾಗಿದ್ದರೆ 1947 ನೇ ಆಗಸ್ಟಿನ ಹಿಂದೆ ಯಾವ ಯಾವ ವ್ಯಕ್ತಿಗೆ ಅಂದರೆ ಈ ಕಾಂಗ್ರೆಸ್ ಸಂಸ್ಥೆಯಲ್ಲಿರುವ ವ್ಯಕ್ತಿಗಳಿಗೆ ಎಷ್ಟೆಷ್ಟು ಆಸ್ತಿಇತ್ತು, ಈಗ ಎಷ್ಟು ಆಸ್ತಿಯಿದೆ ಎಂಬುದನ್ನು ತುಲನ ಮಾಡಿದರೆ ಅದರಲ್ಲಿ ಒಂದು ನ್ಯಾಯವಿದೆ. ಆದರೆ 1947 ರಿಂದ ಇತ್ತೀಚೆಗೆ ಯಾರೂ ಆಸ್ತಿಯನ್ನು ಸಂಪಾದನೆ ಮಾಡಿರಕೂಡದು ಎಂದು ನನ್ನ ವಾದವಲ್ಲ. ಆದರೆ ಆ ಸಂಪಾದನೆ ದಾರಿ ನ್ಯಾಯವಾದದ್ದಾಗಿರಬೇಕು ಎಂದು ಹೇಳುತ್ತೇನೆ. ಸಂಪಾದನೆ ಮಾಡಿದ್ದರೆ ಅವರು ಆ ಸಂಪಾದನೆಯನ್ನು ವ್ಯಾಪಾರದಲ್ಲಿ ಮಾಡಿದರೇ, ಅಥವಾ ಕೈಗಾರಿಕೆಯಲ್ಲಿ ಮಾಡಿದರೇ, ಅಥವಾ ಇನ್ನಾವ ದಾರಿಯಿಂದ ಉತ್ಪನ್ನ ಮಾಡಿದರೆಂಬುದನ್ನು ಅವರು ಸ್ಪಷ್ಟೀಕರಿಸಬೇಕು. ಇದಕ್ಕಾಗಿ ಒಂದು ಸ್ಪೆಷಲ್ ಕಾನೂನನ್ನೇ ಮಾಡಬೇಕೆಂದು ಹೇಳುತ್ತೇನೆ. 1947 ರಲ್ಲಿ ಅಗದೀ ಬಡವರಾಗಿದ್ದವರು ಈ ದಿವಸ ಶ್ರೀಮಂತರಾಗಿರಬಾರದೆಂದು ನಾನು ಹೇಳುತ್ತಿಲ್ಲ. ಆದರೆ ನಾನು ಕೇಳುವುದು ಆ ಹಣವನ್ನು ಯಾವ ರೀತಿ ಸಂಪಾದನೆ ಮಾಡಿದರು ಎಂಬುದು ಮುಖ್ಯ. ಆದರೆ ಈ ಹಿಂದೆ ಮಾತನಾಡಿದ ಶ್ರೀ ಮಂಜಪ್ಪನವರು ಹೇಳಿದ ಹಾಗೆ ಯಾವನೂ ಸಹಿತ ಹಾಗೆ ದುಡ್ಡುಕೊಡುವುದಿಲ್ಲ. ಆದರೆ ಈ ದಿವಸ ಚುನಾವಣೆಗೆ ದುಡ್ಡನ್ನು ವಸೂಲು ಮಾಡಲಾಗುತ್ತಿದೆ. ಅವನ್ನ 'ಒಂದು ಸಂಸ್ಥೆಯಿನಾ ವ್ಯಕ್ತಿ ವಸೂಲ್ಮಾಡಿದರೆ ಇದು ತಪ್ಪಾಗುತ್ತದೆ. ವ್ಯಕ್ತಿಗೆ ಕೊಟ್ಟರೆ ಹಣಕೊಟ್ಟ ಮನುಷ್ಯನಿಗೆ ತೆಗೆದುಕೊಂಡವನು ಭಿಡೇ ತೋರಿಸಬೇಕಾಗುತ್ತದೆ. ಅವನ ಮುಲಾಜಿಗೆ ಬೀಳಬೇಕಾಗುತ್ತದೆ. ಈ ಭ್ರಷ್ಟಾಚಾರ ಈ ದಿವಸ ಬಹಳ ದೂರ ಹೋಗಿದೆ. ಈ ದಿವಸ ಇದಕ್ಕೆ ಒಂದು ಉದಾಹರಣೆ ತೋರಿಸುವಷ್ಟು ಇದು ಉಳಿದಿಲ್ಲ. ಈ ಜಡ್ಡು ಶರೀರಾದ್ಯಂತವೂ ವ್ಯಾಪಿಸಿಕೊಂಡಿದೆ. ನಮ್ಮಗಳ ಶರೀರವೆಲ್ಲಾ ಅಷ್ಟು ವಿಷಮಯವಾಗಿದೆ. ಇದನ್ನು ತಿಳಿಸಲು ನನಗೆ ಬಹಳ ಸಂಕಟವಾಗುತ್ತದೆ. ಆದುದರಿಂದ ಇದಕ್ಕೆ ಒಂದು ಉದಾಹರಣೆ ಕೊಡತಕ್ಕ ಅಗತ್ಯವಾದರೂ ಎಲ್ಲಿದೆ ? ಈ ದಿವಸ ಆ ಪೊಲೀಸರ ಹಣೇಬರಹ ಏನಿದೆಯೋ ಅದೇ ಹಣೇಬರಹ ಧರ್ಮದರ್ಶಿಗಳದೂ ಇದೆ, ಸಂಸ್ಥೆಗಳ ಹಣೇಬರಹ ಅದೇ ಅದೆ. ಮಠಮಾನ್ಯಗಳ ಹಣೇಬರಹವೂ ಅದೇ ಅದೆ. ಇದನ್ನೆಲ್ಲಾ ನೋಡಿದರೆ ಕದಾಚಿತ್ ಇದು ಹೀಗೇ ಮುಂದುವರಿದಲ್ಲಿ ಇನ್ನು ಈ ವಿಚಾರದಲ್ಲಿ ಯಾರ ಉಸಾಬರಿಯೂ ಬೇಡ ಎಂದು ಹೇಳಿ ಸುಮ್ಮನೆ ಅಡಿಗೆ ಮನೆಯಲ್ಲಿ ಕೀಲಿಕೈ ಹಾಕಿಕೊಂಡು ಇರಬೇಕಾಗುತ್ತೆದೆ. ಇಲ್ಲವೇ ಯಾರಮೇಲಾದರೂ ಸಿಟ್ಟಿಗೇಳಲೇ ಬೇಕಾಗುತ್ತದೆ. ಈಗ್ಗೆ ಕೆಲವು ದಿನಗಳ ಹಿಂದೆ ಎಷ್ಟು ಜನ ಕಾಂಗ್ರೆಸ್ಸೇತರರು ಹೆಲ್ತ್ ಮಿನಿಸ್ಟ್ರಿ ಹತ್ತಿರ ಬಂದು ಸೀಟುಗಳಿಗೆ ಅವರನ್ನು ಕಾಡಿಲ್ಲಾ ? ಇದೊಂದು ರಾಜಕೀಯ ರೋಗ. ಗೋಧಿ ಹೊಲಕ್ಕೆ ರೋಗ ಬಡಿದರೆ ಆ ಸುತ್ತಮುತ್ತಿನ ಗೋಧಿ ಹೊಲಗಳಿಗೆಲ್ಲಾ ಆ ರೋಗ ವ್ಯಾಪಿಸುವಂತೆ ಇದೂ ಅದೇನಮೂನೆಯಲ್ಲಿ ಹೋಗುತ್ತಿದೆ. ಆದುದರಿಂದ ನಾವು ಇದನ್ನು ತಡಗಟ್ಟಬೇಕಾಗಿದ್ದರೆ ಶಾಸ್ತ್ರೀಯವಾಗಿ ಇದನ್ನು ವಿಚಾರಮಾಡಬೇಕು. ಸಾಲದುದಕ್ಕೆ ದೇಶದಲ್ಲಿ ದೊಡ್ಡ ಬಡತನ ಬೇರೆ. ಈ ದಿನ ಇಲ್ಲಿ ಸಾಹುಕಾರರು ಮಾಡುತ್ತಿರುವುದನ್ನು ನೋಡಿ ಬಡವನೂ ಅದೇ ದಾರಿಗೆ ಹೋಗುತ್ತಿದ್ದಾನೆ

11-30 A.M.

ಈ ದೃಷ್ಟಿಯಿಂದ ವಿಚಾರ ಮಾಡುವುದನ್ನು ತಿಳಿದೇ ಇವೊತ್ತು ನಮ್ಮ ಕೊನೆಯ ಉಪಾಯ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಸರಕಾರ ಬೇಕು ಎನ್ನುವುದು. ಈಗಿರುವ ಸ್ಥಿತಿ ಬದಲಾವಣೆಯಾಗಲೇ ಬೇಕು. ಆ ರೀತಿಯ ಸಮಾಜ ರಚನೆಯಾಗಬೇಕು. ಇವೊತ್ತು ನಾವೆಲ್ಲರೂ ನೋಡಿದಂತೆ ಲ್ಯಾಂಡು ರಿಫಾರಂಸನ್ನು ಇಲ್ಲ ಜಾರಿಗೆ ತರಬೇಕೆಂದು ಎಷ್ಟೋ ದಿವಸಗಳಾದರೂ ಅದು ಅನೇಕ ಕಾರಣಗಳಿಂದಾಗಿ ಅದನ್ನು ಇನ್ನೂ ಜಾರಿಗೆ ಕೊಡಲಾಗಲಿಲ್ಲ, ಇದಕ್ಕೆ ನಮ್ಮಲ್ಲಿ ಕೆಲವರು ಎಲ್ಲ ರೈತರ ಮನೆಗೂ ಹೋಗಿ ಅವರ ಜಮೀನನ್ನು ಕಸಿದುಕೊಳ್ಳುತ್ತಾರೆ. ಅದಕ್ಕಾಗಿ ಇಂತಹ ಕಾನೂನುಗಳನ್ನು ತರುತ್ತಾರೆನ್ನುವ ಕಾರಣ ಬೇರೆ ಕೊಡುತ್ತಿದ್ದಾರೆ ಹೀಗೆ ಇದನ್ನು ಇವೊತ್ತು ವಿಚಾರ ಮಾಡಿ ನೋಡಿದರೆ ನಮಗಾವಾದ ಸಮಾಜದ ವ್ಯವಹಾರ ಎನ್ನುವುದು ಎಲ್ಲಿಂದ ಬರಬೇಕು ? ಲಂಚ ನಿರ್ಮೂಲನ ಮತ್ತು ಭ್ರಷ್ಟಾಚಾರ ಹೋಗುವುದಕ್ಕೆ ಏತನ್ಮಧ್ಯೆ ಕೆಲವು ಪಿತಿಗಳನ್ನು ನಾವು ಮಾಡಬೇಕಾಗುತ್ತದೆ. ಮೊದಲು ಏನೇನು ಮಾಡಬೇಕು ಎಂಬುದನ್ನು ಜವಾಬುದಾರಿಯುಳ್ಳ ಜನರಾದವರು ತಾವೇ ಸ್ವಲ್ಪ ಇನಿಷಿಯೇಟೀವ್ ತೆಗೆದುಕೊಳ್ಳಬೇಕು. ಇನ್ನಾರಾದರೂ ಇನಿಷಿಯೇಟಿವ್ ತೆಗೆದು ಕೊಂಡರೂ ಅಡ್ಡಿ ಇಲ್ಲ. ಕನಿಷ್ಟ ನಮ್ಮೊಬ್ಬರಿಂದ ಇವೆಲ್ಲ ನಡೆಯುವ ಕೆಲಸವಲ್ಲ. ಪೂರ್ವದಲ್ಲಿ

(ಶ್ರೀ ಎ. ಜೆ. ದೊಡ್ಡಮೇಟಿ)

ಬಡತನದಲ್ಲಿದ್ದವನೂ ತನ್ನ ಪ್ರಭಾವಶಾಲಿಯಾದ ನಡತೆಗಳಿಂದ ಇಂದು ಶ್ರೀಮಂತರನ್ನಾಗಿ ಮಾಡಲು ಈ ದೇಶ ಹೊರಟಿಲ್ಲ, ಆ ರೀತಿಯಾಗುವಂತೆ ಮಾಡಬಾರದು ಆದರೆ ಇಲ್ಲಿ ಒಂದು ಮಾತು ಹೇಳಬಹುದು. ಮೊದರಾಸಿನಲ್ಲಿ ಹಿಂದೆ ಚೀಫ್‌ಮಿನಿಸ್ಟರಾಗಿದ್ದವರನ್ನು ನಾವೆಲ್ಲ ನೋಡಿದ್ದೇವೆ. ಆ ಮನುಷ್ಯನನ್ನು ನಾವು ನೋಡಿದರೆ, 1947 ನೇ ಇಸವಿಯಲ್ಲಿ ಏನು ಪಂಚೆ ಉಡುತ್ತಿದ್ದರೊ ಇಂದೂ ಅದೇ ಆತರದ ಪಂಚೆ ಉಡುತ್ತಿದ್ದಾರೆ. ಹಿಂದೆ ಯಾವತರದ ಬನೀನು ಹಾಕಿಕೊಂಡಿದ್ದರೋ ಇವೊತ್ತೂ ಕೂಡ ಅದೇ ತರದ ಬನೀನು ಹಾಕುತ್ತಿದ್ದಾರೆ. ಹಿಂದೆ ಯಾವ ಮನೆಯಲ್ಲಿ ವಾಸವಾಗಿರುತ್ತಿದ್ದರೋ ಇವೊತ್ತೂ ಅದೇರೀತಿಯ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ. ಎಂದರೆ ನಾನು ನಮ್ಮವರನ್ನು ತೆಗೆಯಬೇಕೆಂದು ಹೇಳುತ್ತಿಲ್ಲ , ಸಾದಾ ಜೀವನ ನಡೆಸುತ್ತಿರುವವರು ಎಂದು ಹೇಳಿದೆ. ಇದರೊಳಗೆ ನಾವು ಪ್ರತಿಯೊಬ್ಬರೂ ವಿಚಾರ ಮಾಡೋಣ. ಹಾಗೆ ವಿಚಾರ ಮಾಡುವಾಗ ಏನು ಅನಿಸುತ್ತದೆ ಎಂದರೆ, ಯಾವನೋ ಒಬ್ಬ ಶಕ್ತಿ ಇರುವವನು ಏರೋಪ್ಲೇನಿನಲ್ಲಿ ಹೋಗುತ್ತಾನೆ ಎಂದು ಅದೇ ರೀತಿ ಬಡವನಾಗಿರುವವನು ಹೋಗಲು ಸಾಧ್ಯವಿಲ್ಲ. ಹೀಗೇ ಒಬ್ಬರಿಗೊಬ್ಬರಲ್ಲಿ ಅಸೂಯೆಯಿಂದ ಇರುವಂತಹ ಜೀವನವನ್ನು ನಿರ್ಮಾಣ ಮಾಡಬಾರದು. ಆ ದೃಷ್ಟಿಯಿಂದ ನಮ್ಮ ಜಗತ್ತಿನೊಳಗೇ ತಿರುತ್ತ ಬೇಕು. ಹಾಗೆ ಹೇಳುವಾಗ ಯಾರೋ ಒಬ್ಬರು ಒಂದೆರಡು ಬಂಗಲೆಗಳನ್ನು ಮಾಡಿಕೊಂಡರೆ, ಅದು ತಪ್ಪೆನೂ ಆಗುವುದಿಲ್ಲ. ಹಿಂದೆ ಸ್ವಾಭಾವಿಕವಾಗಿ ಬಡವನಾಗಿದ್ದವನ ಪರಿಣಾಮವನ್ನು ವಿಚಾರ ಮಾಡೋಣ. ಎಲ್ಲ ಶಾಸನಸಭಾ ಸದಸ್ಯರೂ ವಿಚಾರ ಮಾಡೋಣ. ಹಾಗೆ ವಿಚಾರ ಮಾಡುವಾಗ ನಾವು ಅನೇಕ ವಿಚಾರಗಳನ್ನು ನೋಡುತ್ತೇವೆ. ಶಾಸನ ಸಭೆಯ ಎರಡು ಅಂಗಗಳು ಹಾಗೂ ಕೊನೆಯಲ್ಲಿ ಮಂತ್ರಿಗಳಾಗಿರುವವರು ಕೂಲಂಕುಷವಾಗಿ ಎಲ್ಲವನ್ನೂ ವಿಚಾರ ಮಾಡಬೇಕು. ಈ ರಾಜ್ಯದಲ್ಲಿ ಮಂತ್ರಿಗಳು ಎಷ್ಟು ಜವಾಬುದಾರರಾಗಿದ್ದಾರೋ ಅಷ್ಟೇ ಶಾಸನ ಸಭೆಯ ಸದಸ್ಯರುಗಳು ಅವರು ಯಾವುದೇ ಪಕ್ಷದವರಾಗಿರಲಿ, ಜವಾಬುದಾರಿಯುಳ್ಳವರಾಗಿದ್ದಾರೆ. ಇದರೊಳಗೆ ಈ ಪ್ರಶ್ನೆಯನ್ನೂ ವಿಚಾರಮಾಡಬೇಕಾಗಿದೆ. ಇದನ್ನು ತಾವೆಲ್ಲರೂ ಕೇವಲ ಒಂದು ರಾಜಕೀಯ ಕಾರಣದ ಕನ್ನಡಕವನ್ನು ಹಾಕಿಕೊಂಡು ನೋಡುಬಾರದು. ಇದಕ್ಕೆ ಪರಿಹಾರೋಪಾಯ ಕಾಣದೆ ಸುಮ್ಮನೆ ದೊಡ್ಡ ದೊಡ್ಡ ಅಧಿಕಾರಿಗಳನ್ನು ಶಿಕ್ಷೆ ಮಾಡುವುದು ಮಹತ್ವದ ಪ್ರಶ್ನೆಯಲ್ಲ. ರಾಷ್ಟ್ರಕ್ಕೆ ಹಾನಿಯನ್ನುಂಟುಮಾಡಿ ರಾಷ್ಟ್ರದ ಹಣ ಪೋಲಾಗದಂತಿರಲು ಏನು ಕಾರ್ಯಕ್ರಮ ತೆಗೆದುಕೊಳ್ಳಬಹುದೋ ಅದನ್ನು ತೆಗೆದುಕೊಳ್ಳಬೇಕು. ಈ ಪಕ್ಷದವರು ಒಂದು ಕಮಿಟಿ ಆ ಪಕ್ಷದವರು ಒಂದು ಕಮಿಟಿ ಮಾಡಿಕೊಳ್ಳೋಣ, ಇಲ್ಲಿ ನೀವು ನಿಮ್ಮ ಪಕ್ಷದ ಚುನಾವಣೆಯಲ್ಲಿ ಟಿಕೆಟ್ಟು ಕೊಡುವಾಗ ಹಿಂದೆ ಆತನ ಚರಿತ್ರೆ ಹೇಗಿತ್ತು ಅವನ ನಡತೆ ಹೇಗಿತ್ತು ಎನ್ನುವುದನ್ನೆಲ್ಲಾ ವಿಚಾರಿಸಿ ಅಂತಹವರಿಗೆ ಟಿಕೆಟ್ಟು ಕೊಡುವ ವ್ಯವಸ್ಥೆ ಮಾಡಬೇಕು. ಅಂತಹವನ ಪರ್ಸನರ್ ಲಯಾಬಿಲಿಟಿ ಮೇಲೆ ಅವನನ್ನು ಪಕ್ಷಕ್ಕೆ ಸೇರಿದಂತೆ ಹುರಿಯಾಳನ್ನಾಗಿ ನಿಲ್ಲಿಸಿ ಅಂತಹವರನ್ನು ಚುನಾಯಿಸಬೇಕು. ಅಂತಹವರು ಚುನಾಯಿತರಾಗಿ ಬಂದರೆ ಅವರು ಯಾವ ಒಂದು ತರದ ಸಂಶಯ ಟೀಕೆಗಳಿಗೆ ಸಿಕ್ಕಬಾರದು. ಪ್ರತಿಯೊಂದು ಪಕ್ಷಕ್ಕೂ ಸೇರಿರದಂತೆ ಬದ್ಧನಾಗಿರಬೇಕು ಎನ್ನುವುದು ಮೊದಲನೇ ಪ್ರಶ್ನೆ. ಅದನ್ನು ಮಾಡುತ್ತಿಲ್ಲ. ನಿಮ್ಮ ನಿಮ್ಮ circumstances ಅನ್ನು ಅನುಸರಿಸಿಕೊಂಡು ಅರಿಸಿ ಬರಬೇಕೆಂದು ಯಾರೇ ಆಗಲಿ ಆತನ ಹಿಂದಿನ ಚರಿತ್ರೆ ಮತ್ತು ನಡತೆಯನ್ನು ವಿಚಾರಮಾಡದೇ ನಿಮ್ಮ ನೀತಿಯನ್ನು ಅನುಸರಿಸಿ ಮಾಡುತ್ತಾರೆ. ಹೀಗೆ ಗುಂಪುಗಳಾಗಿ ಗುಂಪಿನ ಗೆಳೆಯರು ಬಹಳವಾಗುತ್ತಿದ್ದಾರೆ. ಈಗ ಬೆಳೆಯುತ್ತಿರುವ ಬ್ಯಾಂಕುಗಳನ್ನು ನೋಡುವುದಾದರೆ ಸೋಸಿಯಲಿಸ್ಟಿಕ್ ಪ್ಯಾಟರ್ನ್ ಎನ್ನುವುದು ಹೋಗಿ ಕ್ಯಾಪಿಟಲಿಸ್ಟಿಕ್ ರೀತಿಯಂತೆ ಆಗುತ್ತಿದೆ. ಇದನ್ನು ಸರಕಾರ ರೆಫ್ಯೂ ಮಾಡುತ್ತಿಲ್ಲ. ನಮ್ಮ ದೇಶದಲ್ಲಿ ಇವೊತ್ತು ಹಾಗೆ ರೆವೂ ಮಾಡಿ ನೋಡಿದರೆ ನಮಗೆ ಇದರ ಮಹತ್ವ ತಿಳಿಯುತ್ತದೆ. ಅನೇಕ ರೀತಿಯಲ್ಲಿ ದೊಡ್ಡ ದೊಡ್ಡ ಜಮೀನುದಾರರು, ವ್ಯಾಪಾರಸ್ಥರು ನಾನಾರೀತಿಯ ದೊಡ್ಡ ಹುದ್ದೆಗಳಲ್ಲಿರುವ ಉದ್ಯೋಗಸ್ಥರು ಆಗಿರುವವರನ್ನು ವಿಚಾರ ಮಾಡಿ ಅವರ ಮೇಲೆ ಒಂದು ವಜ್ರಮುಷ್ಟಿ ಇರಬೇಕು. ಈ ಸಂದರ್ಭದಲ್ಲಿ, ಈ ಸಭೆಯಲ್ಲಿ ನಮ್ಮೆದುರಿಗೆ ಕಾಣುತ್ತಿರುವ ಇಬ್ಬರು ಮಹಾ ನಾಯಕರುಗಳು ಏನು ಆದರ್ಶಗಳನ್ನು ತೋರಿದರೋ ಆ ರೀತಿ ಹೋಗುವುದಾದರೆ ಆಗ ಅಧಿಕಾರದಲ್ಲಿರುವ ಯಾರಾದರೂ ಆಗಲಿ ಇಂತಹ ನಿರ್ಣಯ ಮಾಡುವುದಕ್ಕೆ ಸಾಧ್ಯ. ಇದು ಪಕ್ಷದ ವಿಚಾರವಲ್ಲ ರಾಜ್ಯಾಂಗದ ವಿಚಾರವಲ್ಲ. ಆದರೆ ಕೇಂದ್ರ ಸರ್ಕಾರದವರು ಒಂದು ರೀತಿಯ ವಜ್ರಮುಷ್ಟಿಯಿಂದ ಅಧಿಕಾರ ಮಾಡಲಿಕ್ಕೇಬೇಕು. ಅವರು ಸತ್ಯಮಾರ್ಗದಲ್ಲಿ ನಡೆಯುತಕ್ಕ ವ್ಯಕ್ತಿ ಎಂದು ತಿಳಿದುಕೊಂಡು ಅವರಂತೆ ಸತ್ಯನಿಷ್ಠೆಯ ಮಾರ್ಗದಿಂದ ಹೋಗಲಿಕ್ಕೆ ಕಾರಣವಾಗುತ್ತದೆ. ಹಾಗೆ ಸತ್ಯನಿಷ್ಠೆಯಿಂದ ಹೋಗುವುದು ಬೇಡವೆಂದು ಅವರ ಮನಸ್ಸಿಗೆ ತಗಲರುವುದರಿಂದ, ನಮ್ಮ ಜಾತಿಯ

ವರಿಗೇ ಇಂತಹ ಕೆಲಸ ಕೊಡುತ್ತೇವೆ. ಅಧಿಕಾರವಿರುವುದರಿಂದ ಬೇಕಾದ್ದನ್ನು ಮಾಡುತ್ತೇವೆ ಎಂದು ಮಾಡುತ್ತಿರುವುದರಿಂದ ಭ್ರಷ್ಟಾಚಾರಗಳು ಹೆಚ್ಚುತ್ತಿವೆ. ಭ್ರಷ್ಟಾಚಾರಗಳಿಂದಾಗಿ ಅನೇಕರು ಪ್ರಸಿದ್ಧಿಗೇನೋ ಬರುತ್ತಿದ್ದಾರೆ. ಜನತೆಯಲ್ಲೂ ಇದು ಬರುತ್ತಿದೆಯೇ ಹೇಗೆ ಕಾರ್ಯನಿರ್ವಹಿಸುತ್ತಿದ್ದಾರೆ ಎನ್ನುವುದನ್ನು ಅವರೇ ವಿಚಾರಮಾಡಿಲ್ಲ. ಇದರ ಬಗ್ಗೆ ಸರಕಾರ ಏನು ಧೈರ್ಯ ತೋರಿಸುತ್ತದೆ ಎನ್ನುವುದರ ಬಗೆಗೂ ಏನೂ ವಿಚಾರ ಮಾಡಿಲ್ಲ, ಇದು ವ್ಯಕ್ತಿಗಳ ಪ್ರಶ್ನೆಯಲ್ಲ.

ಕಾಲರ ಬಂದಾಗ, ಅದು ಪ್ರತ್ಯಕ್ಷವಾಗಿ ವ್ಯಕ್ತಿಗೆ ಬಂದಿದೆ ಅಂತ ತಿಳಿದುಕೊಳ್ಳಬಾರದು. ಅದು ದೇಶಕ್ಕೆ ಬಂದದ್ದು ಅಂದುಕೊಳ್ಳಬೇಕು. ಗೃಹ ಮಂತ್ರಿ ನಂದಾರವರು ಭ್ರಷ್ಟಾಚಾರವನ್ನು ತೊಡೆದು ಹಾಕಲು ಈಗ ಕ್ರಮಗಳನ್ನು ಯೋಚಿಸುತ್ತಿದ್ದಾರೆ. ಇದನ್ನು 1947ನೇ ಇಸವಿಯಲ್ಲಿಯೇ ಆಲೋಚನೆ ಮಾಡಿದ್ದರೆ ಬಹಳ ಸುಲಭವಾಗಿ ತಡೆಯಬಹುದಾಗಿತ್ತು. ಈಗ ಏನಾಗಿದೆಯೆಂದರೆ ಊಗುರಿನಲ್ಲಿ ಹೋಗುವುದಕ್ಕೆ ಕೊಡಲಿ ತೆಗೆದುಕೊಂಡರು ಎಂಬ ಗಾದೆಯಂತೆ ಆಗಿದೆ. ಅದು ಆಷ್ಟು ಬೆಳೆದು ನಿಂತಿದೆ. ಯಾರಾದರೂ ಅದಕ್ಕೆ ಅಡ್ಡ ಬಂದರೆ ಅವರನ್ನೇ ತಿನ್ನುತ್ತೇನೆ ಅನ್ನುವಷ್ಟು ಪ್ರಭಾವಶಾಲಿಯಾಗಿದೆ ಈ ಭ್ರಷ್ಟಾಚಾರದ ಸ್ವರೂಪ, ಇಂಥ ಹೊತ್ತಿನೊಳಗೆ ಅಧಿಕಾರದಲ್ಲಿರುವವರು ಅಧಿಕಾರದಲ್ಲಿ ಉಳಿದಿರುವುದೇ ಮಹತ್ವದ ವಿಷಯವಲ್ಲ. ಕದಾಚಿತ್ ಯಾರೂ ಅಧಿಕಾರದಲ್ಲಿ ಉಳಿಯುವ ಸಂಭವವೇ ಇಲ್ಲ ಅನ್ನುವುದನ್ನು ಅವರು ಅರ್ಥಮಾಡಿಕೊಳ್ಳಬೇಕು. ಈ ದೃಷ್ಟಿಯಿಂದ ಮಂತ್ರಿಗಳು ಕನಿಷ್ಠ ಹೀಗೆ ಮಾಡಬೇಕು. ನೀವು ನನ್ನ ಕೂಡ ಸ್ನೇಹ ಪೂರ್ವಾಗಿ ನನ್ನ ನಡತೆ ವಿಚಾರ ಮಾಡಿ, ನಾನು ಎಂತಹವನು ಅನ್ನುವುದನ್ನು ತಿಳಿದುಕೊಳ್ಳಬೇಕು. ನಿಮ್ಮ ಜೊತೆ ಸ್ನೇಹ ಮಾಡುವವರು ಶಾಸನ ಕರ್ತರಾಗಿರಲಿ, ಹೊರಗಿನವರಾಗಿರಲಿ, ಯಾರೇ ಆಗಿರಲಿ, ಅವರ ವಿಶಿಷ್ಟ ಗುಣಗಳನ್ನು ತಿಳಿದುಕೊಂಡಿರುವುದು ಒಳ್ಳೆಯದು. ನಿಮಗೆ ಸಂಶಯ ಬಂದಲ್ಲಿ, ನಿಮ್ಮ ಕೈಯಿಂದ ಅವುಗಳನ್ನು ನಿರ್ಣಯ ಮಾಡುವುದೂ ಕಷ್ಟ, ಅವರು ಒಳ್ಳೆಯವರೆ, ಕೆಟ್ಟವರೆ, ಎಂದು ತಿಳಿದುಕೊಳ್ಳುವುದಕ್ಕೂ ಆಗುವುದಿಲ್ಲ, ಅದೂ ಗೊತ್ತಿದೆ. ಆದರೆ ಕೆಲವರು ಏನೇನೋ ಕಾರ್ಯಕ್ರಮಾಯಿಗಿ, ಉದ್ದೇಶ ಇಟ್ಟುಕೊಂಡು ನಿಮ್ಮನ್ನು ನೋಡುತ್ತಿರುತ್ತಾರೆ. ಅವರು ನಿಮ್ಮ ಒಳ ಕೂಡಿಯೊಳಗೆ ಬಂದು ನಿಮ್ಮ ಜೊತೆ ರೊಟ್ಟಿ ತಿಂದು ಬಂದು ಬಿಟ್ಟಿದನ್ನ ನೋಡಿಬಿಟ್ಟರೆ ಖಾನಗಿ ಜನಕ್ಕೆ ಅವರು ಪ್ರಭಾವಶಾಲಿಗಳು, ನಿಮ್ಮ ಮನಸ್ಸನ್ನು ಅವರು ಒಲಿಸಿಕೊಳ್ಳಬಲ್ಲರೆಂಬ ಭಾವನೆ ಬರುತ್ತದೆ. ಹೀಗೆ ನೀವು ನದರ ಕೊಡುವುದು ಸ್ವಾರ್ಥಾಭಿಲಾಷೆಗಳಿಗೆ ಒಳ್ಳೆಯ ಅವ್ಯಾನಿಷ್ಟ ನೀವು ಯಾವ ಪಕ್ಷವನ್ನೆ ಮಾಡಿಕೊಳ್ಳಿ, ಯಾವ ಗುಂಪನ್ನೇ ಮಾಡಿಕೊಳ್ಳಿ, ಅದರಲ್ಲಿ ನನಗೆ ಇಂಟರೆಸ್ಟ್ ಇಲ್ಲ. ನನಗೆ ಯಾವ ನಾಮಿನೇಷನ್ನು ಆಗಬೇಕಾಗಿಲ್ಲ. ನಾನು ನಿಮ್ಮ ಹತ್ತಿರ ಬರುವುದಿಲ್ಲ. ನಾಮಿನೇಶನ್ ಮಾಡುವ ಹೊತ್ತಿನಲ್ಲಿ, ಅದು ಸ್ಕೂಲು ಬೋರ್ಡಿಗೆ ಇರಲಿ, ಬ್ಯಾಂಕಿಗೇ ಇರಲಿ, ಮತ್ತೊಂದಕ್ಕೇ ಇರಲಿ ನಾಮಿನೇಶನ್ ಮಾಡುವ ಮನುಷ್ಯ ಎಂತಹ ನಡತೆಯವನ್ನು ಎಂದು ದೀರ್ಘವಾಗಿ ವಿಚಾರ ಮಾಡಿ ನೀವು ನಡತೆಯ ಬಗ್ಗೆ ತೃಪ್ತಿಹೊಂದಿದಮೇಲೆ ಒಬ್ಬ ಮನುಷ್ಯನನ್ನು ನಾಮಿನೇಟ್ ಮಾಡಿದರೆ ಕನಿಷ್ಠ ಪಕ್ಷ ನಿಮ್ಮಮೇಲೆ ಬರತಕ್ಕ ಆರೋಪಗಳು ಶೇಕಡಾವಾರು ಸಂಖ್ಯೆ ಕಡಿಮೆಯಾಗುತ್ತದೆ. ನೀವು ಒಬ್ಬ ಮನುಷ್ಯನನ್ನ ಹತ್ತಿರ ಸೇರಿಸುವಾಗ, ನೇಮಕ ಮಾಡುವಾಗ, ಅವನ್ನು ಭ್ರಷ್ಟಾಚಾರಿಯೇ ಅಲ್ಲವೇ ಎನ್ನುವುದನ್ನು ನಿಶ್ಚಿತ ಮಾಡಿಕೊಳ್ಳಬೇಕು. ಪ್ರಾಮಾಣಿಕನಾಗಿದ್ದರೆ, ಅವನ ಉಳಿದ ಕ್ವಾಲಿಫಿಕೇಶನ್ನುಗಳು ಹೆಚ್ಚು ಕಡಿಮೆ ಇದ್ದರೂ ಸಾಕು. ಮಂತ್ರಿಗಳು ನೀವು ಹೇಳುವುದು ಒಪ್ಪುತ್ತೇವೆ, ಏನು ಮಾಡುವುದು, ಪ್ರತಿಷ್ಠಿಕರು ಒಂದು ಹಠ ಮಾಡುತ್ತಾರೆ, ಕುತ್ತಿಗೆಗೆ ಚೂರಿ ಹಾಕುತ್ತಾರೆ, ಆವಾಗ ಈರ್ದ್ದೆ ಆಗಬೇಕಾಗುತ್ತದೆಂದು ಹೇಳುವುದು ನರಿಯಲ್ಲ–ಯಾವತ್ತೂ ಒತ್ತಾಯ ಬಂದು ಹೀಗೆ ಅದಕ್ಕೆ ಶರಣಾಗತರಾದರೆ ಕಾಂಗ್ರೆಸ್ಸೇ ಇರಲ, ನಾನ್-ಕಾಂಗ್ರೆಸ್ಸೇ ಇರಲ, ಅದರ ಪರಿಣಾಮವೇನಾಗುತ್ತದೆ? ಅದರ ಪರಿಣಾಮ ಪಡೀ ಸಮಾಜದಮೇಲೆ ಆಗುತ್ತದೆ. ಇವತ್ತು ನೀವು ಹೆದರಬೇಡಿ. ನಿಮ್ಮ ಜಾತಿಯವರೆ ಇರಲ, ಬೇರೆ ಜಾತಿಯವರೇ ಇರಲ ಒಳ್ಳೆಯವರಿದ್ದರೆ ಪುರಸ್ಕಾರ ಕೊಡಿರಿ, ಕೆಟ್ಟವರಿದ್ದರೆ ಅಲಕ್ಷ್ಯಮಾಡಿರಿ. ಪೊಲಿಟಿಕಲ್ ಕರಪಷನ್ ತಪ್ಪಿಸಿ ಮೊನ್ನೆ ಕಾಂರಾಜರ ಅಧ್ಯಕ್ಷತೆಯಲ್ಲಿ ಸತ್ಯನಿಷ್ಠಾ ಒಂದು ಕಮಿಟಿ ನೇಮಿಸಿದರು. ಇದು ಅಧಿಕಾರೇತರ ಕಮಿಟಿ, ನಾನೂ ಈ ಶಾಸನಕರ್ತರು ಮುಂತಾದವರ ಬಗ್ಗೆ ನಿಯಮಗಳು ಮತ್ತು ಅವರು ತೆಗೆದುಕೊಳ್ಳಬೇಕಾದ ಪ್ರತಿಜ್ಞೆಗಳ ಬಗ್ಗೆ ಬರೆದು ಇಟ್ಟಿದ್ದೇನೆ. ಇವರುಗಳಿಗೆ ತರಬೇತಿ ಕೊಟ್ಟು ಅವರು ಭ್ರಷ್ಟಾಚಾರದಲ್ಲಿ ತೊಡಗುವುದಿಲ್ಲ ಎನ್ನುವ ನಿರ್ಧಾರಕ್ಕೆ ಬರುವ ಜನರನ್ನಾಗಿ ಮಾಡಬೇಕು. ದೇಶದ ಪ್ರಥಮ ಶತ್ರು ಚೈನ ಎಂದು ಹೇಳುತ್ತಿದ್ದರೆ, ನಾವು ಅದನ್ನು ಎರಡನೇ ಶತ್ರು ಎಂದು ಈಗ ಹೇಳಬೇಕು. ದೇಶದ ಪ್ರಥಮ ಶತ್ರು ಭ್ರಷ್ಟಾಚಾರ, ಇವತ್ತು ನಮ್ಮಲ್ಲಿ ಅದಿಲ್ಲದಿದ್ದರೆ, ರಾಜ್ಯ ಸುರಕ್ಷಿತವಾಗಿರುತ್ತದೆ. ನಾವು ಅದನ್ನು ವಿಚಾರ ಮಾಡಬೇಕು ಮೊದಲನ ಮಾತು ಎಂದರೆ, ಸರ್ಕಾರಕ್ಕಾಗಲ, ನಮಗಾಲಿ, ನಿಮಗಾಗಲ, ಜವಾಬ್ದಾರಿ ಜನ ಯಾರು ಈ ಭ್ರಷ್ಟಾಚಾರಕ್ಕೆ ಒಳಪಟ್ಟಿದ್ದಾರೋ ಅಂಥ ಮುಂಬರುವರನ್ನು ಸ್ವಲ್ಪ ದೂರ ಇಡುವು

(ಶ್ರೀ ಎ. ಜೆ. ದೊಡ್ಡಮೇಟಿ)

ದಕ್ಕೆ ಪ್ರಯತ್ನ ಮಾಡೋಣ. ಇವತ್ತು ನಮ್ಮ ಆತ್ಮ ಏನು ನಿರೀಕ್ಷಣೆ ಮಾಡುತ್ತದೋ ಅದನ್ನು ಮಾಡ ಬೇಕು. ನನ್ನ ಜನ, ನನ್ನ ಮತ, ನನ್ನ ಆಸ್ತಿ ಬೆಳಸಬೇಕು ನಾನು ಪ್ರಯೋಜನ ಹೊಂದಬೇಕು ಎಂಬ ದೃಷ್ಟಿಬೇಡ. ಎರಡನೆಯವರಿಗೆ ಬುದ್ಧಿ ಹೇಳುವುದು ಹಗುರ, ಆದರೆ ತಾನು ಅದರಂತೆ ನಡೆತೆಪಟ್ಟುಕೊಳ್ಳುವುದು ಬಹಳ ಕಠಿಣ, ನಮ್ಮನ್ನು ನಾವೇ ಅಗ್ನಿ ಪರೀಕ್ಷೆ ಮಾಡಿ ಕೊಳ್ಳುವುದಕ್ಕೆ ಸಿದ್ಧರಾಗೋಣ. ಕಠಿಣವಾದರೂ ನಮ್ಮನ್ನು ನಾವೇ ಪರೀಕ್ಷೆ ಮಾಡಿ ಕೊಳ್ಳುವುದಕ್ಕೆ ಸಿದ್ಧರಾಗೋಣ ಸತ್ಯವಾಗಿದ್ದರೆ ನಿಶ್ಚಿತವಾಗಿ ಜಯಸಿಗುತ್ತದೆ, ಇದು ಎಂದಿಗೂ ಸುಳ್ಳಾಗುವುದಿಲ್ಲ, ಇದು ಶತಃಸಿದ್ಧಾಂತ. ಆದ್ದರಿಂದ ಈ ಭ್ರಷ್ಟಾಚಾರವನ್ನು ಶಾಸ್ತ್ರೀಯವಾಗಿ ವಿಚಾರಮಾಡಬೇಕು. ನೈಷ್ಟಿ ನಮ್ಮ ನಲುವಾಗಿ ಕಾಯುವುದಿಲ್ಲ, ನಮಗೆ ಬೇಕೋ ಬೇಡವೊ ಸತ್ಯದ ಕಡೆಗೇ ಎಳೆಯುತ್ತದೆ. ನಾವು ಪ್ರಮಾಣಿಕರಾಗಿದ್ದರೆ ನಮ್ಮನ್ನು ಕೆಲವು ಜನರು ಬಿಟ್ಟು ಹೋಗುತ್ತಾರೆ ಎಂಬ ದೃಷ್ಟಿಯಿಂದ ವಿಚಾರಮಾಡುವುದಲ್ಲ. ಈ ಕಾರಣಕ್ಕಾಗಿ, ಶ್ರೀಮಾನ್ ನಂದಾರವರ ಕಮಿಟಿಯಿಂದ ನಮ್ಮ ಉದ್ದೇಶ ಪೂರ್ತಿಯಾಗುವುದಿಲ್ಲ. ಸರಕಾರದವರು ಯಾವ ರೀತಿ ಒಂದು ಕಮಿಟಿ ಮಾಡಬೇಕು ಎಂದು ಬರೆದು ಕಳುಹಿಸುತ್ತೇವೆ. ನಾಲ್ಕು ಮಂದಿ ಸೇರಿ ವಿಚಾರ ಮಾಡಿ ನೋಡಬೇಕು; ನಾನು ಅದರ ಜವಾಬ್ದಾರಿ ಹೊರಲಕ್ಕೆ ಸಿದ್ಧನಿದ್ದೇನೆ. ಎಲ್ಲಿ ಭ್ರಷ್ಟಾಚಾರ ಹುಟ್ಟಲಕ್ಕೆ ಹತ್ತಿದೆಯೋ ಅಲ್ಲಿ ಏನು ಮಾಡಬೇಕೆಂಬ ಬಗ್ಗೆ ಕಾನೂನು ಮಾಡಿಕೊಳ್ಳಿ. ಇದರೊಳಗೆ 12 ಮಂದಿ ರಾಜಕೀಯ ಪುಡಾರಿಗಳನ್ನು ಹಿಡಿದು ಜೈಲಿನೊಳಗೆ ಹಾಕಿ. ಅದರಿಂದ ಎಷ್ಟು ಪರಿಣಾಮವಾಗುತ್ತದೆಂದು ನೋಡಿ ಆದರೆ ಅದಕ್ಕೆ ಕಾನೂನು ಆಧಾರಬೇಕು. ಅವರನ್ನು ಹಿಡಿಯು ವುದು ಇರಲಿ, ಅವರಿಗೆ ಸನ್ಮಾನ ಸಿಕ್ಕದಂತೆ ಇರಲಿ. ಮೊದಲನೆದಾಗಿ, ಯಾರನ್ನು ಸಂಘ ಸಂಸ್ಥೆ ಗಳಿಗೆ, ಸಮಿತಿಗಳಿಗೆ ನೇಮಿಸುತ್ತಿರೋ, ಅವನು ಒಳ್ಳೆಯವನೋ, ನತ್ಯವಂತನೋ, ಒಂದು ವಿಶಾಲ ಭಾವನೆ ಉಳ್ಳವನೋ, ಜಾತಿ ಮತ ಪಕ್ಷದ ಭಾವನೆ ಇಲ್ಲದೆ ಎಲ್ಲರನ್ನೂ ಸಹೋದರ ಭಾವನೆಯಿಂದ ನೋಡುತ್ತಾನೆಯೋ ಇಲ್ಲವೋ ಎಂದು ವಿಚಾರ ಮಾಡುವುದಿಲ್ಲ ತದ್ವಿರುದ್ಧ ದಿಕ್ಕಿನಲ್ಲಿ ವಿಚಾರ ಮಾಡಿ ನಮ್ಮ ನಮಾಜಕ್ಕೆ ತೊಂದರೆ ಮಾಡುತ್ತಾರೆ. ಜನರು ಸ್ವಲ್ಪ ಬುದ್ಧಿವಂತರಾಗಬೇಕಾಗುತ್ತದೆ. ಜನರು ಪೂರ್ತಿ ಬುದ್ಧಿವಂತರಾಗದ ಹೊರತು ಏನೂ ಪ್ರಯೋಜನವಾಗುವುದಿಲ್ಲ. ಈ ದೃಷ್ಟಿಯಿಂದ ವಿಚಾರ ಮಾಡುವ ಹೊತ್ತಿನೊಳಗೆ ರಾಜಕೀಯ ಭ್ರಷ್ಟಾಚಾರದ ಜನರಿಂದ ನಾವು ಸ್ವಲ್ಪ ಅಲಕ್ಷ್ಯರಾಗಿದ್ದರೆ ಮುಂದೆ ಬಳ್ಳಿಯಂತಾಗುತ್ತದೆ. ಸಾಧ್ಯ ವಾದಷ್ಟೂ ಅಧಿಕಾರಿಗಳ ವರ್ಗಾವರ್ಗಿಯಲ್ಲಾಗಲೀ ಅಥವಾ ಅವರ ನೇಮಕದಲ್ಲಾಗಲೀ ಸರ್ಕಾರ ವನ್ನು, ಮಂತ್ರಿಗಳನ್ನು ಭೇಟಮಾಡುವುದನ್ನು ಬಿಡಬೇಕು. ಯಾರಿಗಾದರೂ ಅನ್ಯಾಯವಾಗಿದ್ದರೆ ಬರೆದು ತಿಳಿಸೋಣ. ಅದನ್ನು ಸರಿಪಡಿಸದೆ ಇದ್ದರೆ ಈ ಸಭೆಯಲ್ಲಿ ಚರ್ಚೆ ಮಾಡೋಣ. ಆ ಮೇಲೆ ನೋಡಿರಿ ಏನಾಗುತ್ತದೆ ಎನ್ನುವುದನ್ನು.

ನಾನು 1936ರಿಂದ ಇವತ್ತಿನವರೆಗೂ ಶಾಸನ ಸಭಾ ಸದಸ್ಯನಾಗಿದ್ದೇನೆ. ನಾನು ಏನಾದರೂ ಇಂಥವರಿಗೆ ನೇಮಿಸಿರಿ, ಇಂಥವರಿಗೆ ವರ್ಗ ಮಾಡಿರಿ ಎಂದೇನಾದರೂ ಹೇಳಿದ್ದರೆ ರಾಜೀನಾಮೆ ಕೊಡುವುದಕ್ಕೆ ಸಿದ್ಧನಾಗಿದ್ದೇನೆ. ಈ ವಿಚಾರಗಳನ್ನೆಲ್ಲ ಒಳ್ಳೆಯ ದೃಷ್ಟಿಯಿಂದ ವಿಚಾರ ಮಾಡಿ ನೋಡಿದರೆ ಇವತ್ತು ಅನೇಕ ಕೃತ್ಯಗಳಿಗೆ ಶಾಸನ ಸಭೆ ಜವಾಬ್ದಾರಿಯಾಗಿದೆ. ನಾವು ಇಂಟರ್‌ಫೀರ್ ಮಾಡುವುದನ್ನು ಬಿಡಬೇಕು. ಅವತಪ್ಪಿಸಕ್ಕೆ ಅವರನ್ನು ಬಿಡೋಣ. ತಪ್ಪು ಮಾಡಿದರೆ ತಪ್ಪು ಮಾಡುತ್ತಿ ದ್ದೀರಿ ಎಂದು ಸ್ಪಷ್ಟವಾಗಿ ಹೇಳೋಣ. ಆದರೆ ಬೆಗ್ಗಿಂಗ್ ಪಾಲಿಸಿ ಬೇಡ. ನೀವು ಅಡಳಿತ ನಡೆಸು ವುದಕ್ಕೆ ಜವಾಬ್ದಾರರಿದ್ದೀರಿ, ಹೀಗೆ ನಡೆಸುವುದರಿಂದ ಅಡಳಿತ ಚೆನ್ನಾಗಿ ಆಗುವುದಿಲ್ಲ ಎಂದು ಹೇಳಿರಿ. ಅದನ್ನು ಹೇಳುವ ಹೊತ್ತಿನೊಳಗೆ ಕರಪ್ಟ್ ಅಧಿಕಾರಿಗಳನ್ನು ಯಾವತ್ತೂ ರಿಪೋರ್ಟ್ ಮಾಡಬೇಡಿರಿ.

ಒಂದು ಕೋರ್ಟಿಗೆ ಒಬ್ಬ ನ್ಯಾಯಾಧೀಶರನ್ನು ನೇಮಕ ಮಾಡುವಾಗ ಅನೇಕ ಅಂಶಗಳನ್ನು ಗಮನಿಸಬೇಕು. ಸಾಮಾನ್ಯವಾಗಿ ದೇಶದೊಳಗೆ ಇರುವ ಚೀಫ್ ಜಸ್ಟಿಸ್ ಖರೆ ಮನುಷ್ಯ ಇರಬೇಕು ಎನ್ನುವುದು ನನ್ನ ಅಭಿಪ್ರಾಯ. ಅಷ್ಟು ಪ್ರಾಮಾಣಿಕ ನಮಗೆ ಸಿಕ್ಕುವುದಿಲ್ಲ ಎಂದು ಕೇಳಬಹುದು. ಬಹಳ ದೂರದಿಂದ, ದೂರ ರಾಜ್ಯದಿಂದ ಅತ್ಯಂತ ನುರಿತಂಥ, ನಿಷ್ಪಕ್ಷಪಾತದಿಂದ ಕೂಡಿರುವ ಹೆಸರಾಂತ ಒಬ್ಬರು ಚೀಫ್ ಜಸ್ಟಿಸ್ ಆಗಿಇರುವುದು ಅತ್ಯವಶ್ಯ. ಹೀಗೆ ಹೇಳಿದರೆ ಕೆಲವರು ಟೀಕೆ ಮಾಡುತ್ತಾರೆ. ಇಲ್ಲಿಯವರು ಮತ್ತೊಂದು ಕಡೆ ಹೋಗಲಿ ಮನುಷ್ಯ ಸ್ವಭಾವಕ್ಕೆ ನಾವು ಒಳಪಟ್ಟವರು. ನಾವು ಒಂದೊಂದು ಆದರ್ಶವನ್ನು ಪಾಲಿಸಬೇಕು. ಅದರಲ್ಲಿ ತಪ್ಪೇನೂ ಇಲ್ಲ. ಇವತ್ತು ಅನೇಕ ರೀತಿಯಿಂದ ಎಲ್ಲ ಮಾತನ್ನೂ ಸಭೆಯಲ್ಲಿ ಹೇಳುವುದು ಬಹಳ ಕಷ್ಟ.

ನಾನು ಇವತ್ತು ಒಬ್ಬ ಶಾಸನ ಸಭಾ ಸದಸ್ಯನಾಗಿ, ಒಬ್ಬ ಮನುಷ್ಯನಾಗಿ, ಮಾನವೀಯತೆಯ ದೃಷ್ಟಿಯಿಂದ ಮಾತನಾಡುತ್ತಿದ್ದೇನೆ. ಈ ದೃಷ್ಟಿಯಿಂದ ನಾವು ವಿಚಾರ ಮಾಡಿ ಎಲ್ಲ ಪ್ರಶ್ನೆಗಳ ಕಡೆಗೆ ಗಮನಕೊಟ್ಟರೆ...

(Interruption.)

ಇವತ್ತು ನಾನು ಭಾಷಣ ಮಾಡಬೇಕೆಂದು ಬಂದಿದ್ದೇನೆ. ನನಗೆ ಏನೂ ಆಗುವುದಿಲ್ಲ. ಒಂದು ವೇಳೆ ಭಾಷಣ ಮಾಡುವಾಗ heart fail ಆಗುವುದಾದರೆ ಅದು ಭ್ರಷ್ಟಾಚಾರವನ್ನು ತೊಡೆಯುವುದಕ್ಕೆ ಒಂದು ಸಾಧನೆಯಾಗುತ್ತದೆಂದು ನಾನು ಭಾವಿಸುತ್ತೇನೆ. ಆದರೆ ಹಾಗೇನೂ ಆಗುವ ಸಂಭವವಿಲ್ಲ. ಗಾಂಧೀಜಿಯವರು ನತ್ತಿದ್ದರೂ ಕೂಡ ಅವರು ಹಾಕಿಕೊಟ್ಟ ಸತ್ಯ ಮತ್ತು ಅಹಿಂಸೆ ಇವು ಉಳಿದುಕೊಂಡಿವೆ.

ಆದುದರಿಂದ ಈಗ ನಾವು ಏನು ಮಾಡಬೇಕು ಎಂದು ವಿಚಾರ ಮಾಡಿದರೆ ಸರ್ಕಾರದವರು ಇದರ ಪರಿಹಾರಕ್ಕೆ ಒಂದು ಕಮಿಟಿಯನ್ನು ಮಾಡಬೇಕಾದ ಅವಶ್ಯಕತೆ ಕಾಣುವುದಿಲ್ಲ. ಸಂತಾನಂ ಕಮಿಟಿಯ ಸಿಫಾರಸುಗಳ ಮೇರೆಗೆ ಏನೊಂದು ಕಮಿಟಿಯನ್ನು ಮಾಡಿದ್ದಾರೆ ಅದು ಲಿಮಿಟೆಡ್ ಅಧಿಕಾರವುಳ್ಳದ್ದು. ಕೇಂದ್ರದವರೂ ಕೂಡ ಎಲ್ಲ ಆಲೋಚನೆ ಮಾಡಿದ್ದಾರೆ. ಆದರ ವ್ಯಾಪ್ತಿಯನ್ನು ಅವರು ಬೆಳೆಸಿಕೊಳ್ಳಲಿ. ಇದನ್ನು ಆಡಳಿತಾತ್ಮಕವಾಗಿ ತೆಗೆಯುವುದು ಸಾಧ್ಯವಿಲ್ಲ. ಅದರ ಜೇರು ತೆಗೆಯಬೇಕು. ನಮ್ಮ ಸಮಾಜ ಕಾರ್ಯಕರ್ತರು, ಮುಖಂಡರುಗಳು ಈ ಬಗ್ಗೆ ಸಾಕಷ್ಟು ಪ್ರಚಾರ ಮಾಡಬೇಕು. ಅವರೂ ಮನುಷ್ಯರೇ, ಅವರ ಹೃದಯ ಪರಿವರ್ತನೆಯಾಗುವುದಿಲ್ಲವೆಂದಲ್ಲ. ಇಂಥ ಪ್ರಚಾರ ಮಾಡಿದರೆ ಬಹಳ ದೊಡ್ಡ ದೊಡ್ಡ ಆಸ್ತಿಗಳಿಸಿರತಕ್ಕ ಪುಢಾರಿಗಳು, ಅಧಿಕಾರಿಗಳು ಅನ್ನಬಹುದು. ಆ ರೀತಿ ನಂಪಾದನೆ ಮಾಡಿರುವ ಆಸ್ತಿಯನ್ನು ರಾಜ್ಯಕ್ಕೆ ತೆಗೆದುಕೊಳ್ಳಿ ಎಂದು ? ಇಂಥ ಒಂದು ಪರಿಸ್ಥಿತಿಯನ್ನು ನಾವು ನಿರ್ಮಾಣ ಮಾಡಬೇಕು. ಆದುದರಿಂದ ಈ ನಿರ್ಣಯವನ್ನು ವಾಪಸು ತೆಗೆದುಕೊಳ್ಳಿ. ಈಗ ವಾಪಸು ತೆಗೆದುಕೊಂಡರೆ ಅದರಿಂದ ಹೆಚ್ಚಿನ ಪರಿಣಾಮವಾಗುತ್ತದೆ, ಒಳ್ಳೆಯ ಪರಿಣಾಮವಾಗುತ್ತದೆ. ನನಗೆ ಆಶಯವಿದೆ, ಕೇಂದ್ರ ಸರ್ಕಾರದವರು ನಡೆಸಿದರೆ ನಮ್ಮವರೂ ನಡೆಸುತ್ತಾರೆ. ಆ ಹೊತ್ತಿನೊಳಗೆ 'who is who' ಎಂದು ತಾವು ತಿಳಿದುಕೊಳ್ಳಬಹುದು. ಯಾರ ಯಾರ ಯೋಗ್ಯತೆ ಏನು ಎಂದು ತಿಳಿದುಕೊಳ್ಳಬಹುದು. ಈ ಕಾರಣಕ್ಕಾಗಿ ನಾವು ತಡದು ಆಲೋಚನೆ ಮಾಡೋಣ. ಇಲ್ಲದಿದ್ದರೆ ಏನಾಗುತ್ತದೆ ಎನ್ನುವುದನ್ನು ಆಗಲೇ ಹೇಳಿದ್ದೇನೆ.

ಸಮಾಜವಾದ ಬೇಕು, ಜಾತಿ ಹೋಗಬೇಕು, ಜಾತೀಯತೆ ಹೋಗಬೇಕು ಎಂದು ಬಾಯಲ್ಲಿ ಹೇಳುತ್ತೇವೆ. ಆದರೆ ಜಾತಿ ಇರುತ್ತದೆ. ಹಾವು ಇರಬೇಕು ಹಾವಿನ ವಿಷ ಹೋಗಬೇಕು ಎಂದರೆ ಹೇಗೆ ಆಗುತ್ತದೆ. ಸರ್ಕಾರದವರು ಇಂಥದ್ದಕ್ಕೆ ಕೆಲವು ಕ್ರಮ ತೆಗೆದುಕೊಳ್ಳಲಿ, ವಿಜಾತಿಯಿಲ್ಲ ಲಗ್ನ ವಾದರೆ ಸರ್ಕಾರಿ ನೌಕರಿ ಕೊಡುವುದಕ್ಕೆ, ಏನಾದರೂ ಸಲವತ್ತು ಕೊಡುವುದಕ್ಕೆ ಪ್ರಯತ್ನ ಮಾಡಿರಿ. ಆ ದೃಷ್ಟಿಯಿಂದ ನಾವು ವಿಚಾರ ಮಾಡೋಣ. ನಮಗೆ ಬೇಕೋ, ನಿಮಗೆ ಬೇಕೋ, ನಮಗೆ ಬೇಡವೋ ನಿಮಗೆ ಬೇಡವೋ ಇನ್ನು ಕೆಲವು ಕಾಲದೊಳಗೆ ಈ ಭ್ರಷ್ಟಾಚಾರ, ಈ ಜಾತಿ ಎರಡೂ ನಮಾಧಿಯಾಗಲೇ ಬೇಕು. ಏಕೆಂದರೆ ಇದು ಅಂಥ ರೋಗ. ಅಂದಮೇಲೆ ಇದಕ್ಕೆ ಮರಣ ಬರಲೇ ಬೇಕು. ಇದು ಏಕೆ, ಏನು ಎನ್ನುವುದೆಲ್ಲ ಸೃಷ್ಟಿ ನಿಯಮ.

12-00 NOON.

ಇನ್ನು ಕಾನೂನುಗಳನ್ನು ಮಾಡುವ ವೇಳೆಗೆ ಯಾವ ಯಾವ ಅಪಮಾರ್ಗದಿಂದ ದುಡ್ಡನ್ನು ಗಳಿಸುತ್ತಾರೆ, ಅಂತೆಹ ಮಾರ್ಗಗಳು ಯಾವ ಯಾವುವು ಇವೆ ಎಂಬುದನ್ನು ನೋಡೋಣ, ಆಗ ಪುನರಾಲೋಚನೆ ಮಾಡೋಣ, ಈಗ ಯಾವ ಯಾವ ಕಾನೂನುಗಳು ಇವೆ. ಅವುಗಳನ್ನು ದೇಶದ ಒಂದು ಸಾಮೂಹಿಕ ಪ್ರಶ್ನೆ ಬಂದಾಗ ಬದಲಾವಣೆ ಮಾಡುವುದು ಅವಶ್ಯಕ ಎಂದು ಕಂಡುಬಂದರೆ ಬದಲಾವಣೆ ಮಾಡೋಣ, ನಾವು ಸರಿಯಾಗಿ ನಡೆಯೋಣ ಮತ್ತು ಸರಿಯಾಗಿ ಕೆಲಸ ಮಾಡೋಣ ಆದ್ದರಿಂದ ದಯವಾಡಿ, ಎಲ್ಲರಿಗೂ ಹೇಳುತ್ತೇನೆ—ಇದರಲ್ಲಿ ರಾಜಕಾರಣಿಗಳನ್ನು ದೂರಬೇಡಿರಿ, ಚುನಾವಣೆಯ ಪ್ರಚಾರದ ದೃಷ್ಟಿಯಿಂದ ಪ್ರಚಾರ ಮಾಡಬೇಡಿರಿ—ಒಳ್ಳೆಯ ರಾಜ್ಯ ಕಟ್ಟೋಣ, ರಾಜ್ಯ ಸುಧಾರಿಸಲಲ್ಲ ಒಂದು ವ್ಯಾಳ್ಯಾಕ್ಕೆ ಎಂದರೆ ಕ್ರಾಂತಿ ಅನಿವಾರ್ಯವಾಗುತ್ತದೆ ಎಂದ ಕೊನೇ ಮಾತು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†Sri B. D. JATTI.—For the information of the House and particularly of Sri Doddameti, I must say that the whole question is being considered by the Government of India in the Home Ministry and I understand that they are going to take a final decision on the 28th of this month. The matter covers the question of corruption, nepotism and all that.

Sri ANNA RAO GANAMUKHI (Afzalpur).—It has appeared in the newspapers that the Central Home Minister has consulted various States and they have agreed to set-up Vigilance Committees. The papers do not mention Mysore. Has the Mysore Government been consulted and if so what is their reaction ?

†Sri B. D. JATTI.—The Mysore Government is part of the country. As the Centre has consulted other States, they have consulted the Mysore Government also. I am definite that yesterday, the Union Home Minister contacted our Chief Minister and he has been requested to be present on the 28th. If more information is needed, I will supply it.

† ಶ್ರೀ ಗಂಗಾಧರ ನಾಮೋಷಿ (ಗುಲ್ಬರ್ಗ).—ಶ್ರೀಮಾನ್ ಬಿ. ನಂಜಪ್ಪನವರು ಮಂಡಿಸಿರತಕ್ಕ ಈ ಠರಾವನ್ನು ಅನುಮೋದಿಸುತ್ತಾ ಕೆಲವು ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ. ಇದುವರೆಗೂ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಮತ್ತು ಶ್ರೀಮಾನ್ ದೊಡ್ಡ ಮೇಟಿಯವರು ಬಹಳ ಒಳ್ಳೆಯ ಮಾತುಗಳನ್ನು ಹೇಳಿದ್ದಾರೆ. ಸರ್ಕಾರದವರು ಸ್ವಲ್ಪವಾದರೂ ಅದರ ಕಡೆಗೆ ಗಮನಕೊಟ್ಟು ಅವನ್ನು ಅಮಲು ಮಾಡಿದರೆ ನಾವು ಒಂದು ಒಳ್ಳೆಯ ರಾಜ್ಯವನ್ನು ಕಟ್ಟಬಹುದು ಎಂದು ನನಗೆ ಅನಿಸುತ್ತದೆ. ಇದುವರೆಗೂ ಹೇಳಿರತಕ್ಕ ಮಾತುಗಳಲ್ಲಿ ಸರ್ಕಾರದವರ ಫೇವರಿಟಿಸಂ, ನೆಪಾಟಿಸಂ, ಕರಪ್‌ಷನ್ ಇವುಗಳಿಗೆಲ್ಲಾ ಕಾರಣ ಅವರಲ್ಲೇ ಇದು ಹೆಚ್ಚಾಗಿದೆ ಎಂದು ಹೇಳಬೇಕಾಗುತ್ತದೆ. ಮಾನ್ಯ ಸದಸ್ಯರಾದ ಶ್ರೀಮಾನ್ ದೊಡ್ಡ ಮೇಟಿಯವರು ಮತ್ತು ಮಂಜಪ್ಪನವರು ಇದು ಎರಡು ಭಾಗಕ್ಕೂ ಅನ್ವಯಿಸುತ್ತದೆ ಎಂದು ಹೇಳಿದರು. ನಾನು ಹೇಳುತ್ತೇನೆ ಇದು ಎಲ್ಲಕ್ಕಿಂತ ಹೆಚ್ಚಾಗಿ ಆಡಳಿತ ಪಕ್ಷದ ಭಾಗಕ್ಕೇ ಅನ್ವಯಿಸುತ್ತದೆ ಎಂದು, ಈ ಭಾಗದ ಸದಸ್ಯರು ಸರ್ಕಾರದವರಲ್ಲಿ ಬಂದು ಒಬ್ಬನಿಗೆ ನೌಕರಿ ಕೊಡಿರಿ ಎಂದು ಕೇಳಬಹುದು, ಒಬ್ಬನಿಗೆ ಪ್ರೊಮೋಷನ್ ಮಾಡಿರಿ ಎಂದು ಹೇಳಬಹುದು, ಇನ್ನೊಬ್ಬನಿಗೆ ವರ್ಗ ಮಾಡಿರಿ ಎಂದು ಹೇಳಿಬಹುದು, ಅದನ್ನು ಮಾಡುವುದು ಅಥವಾ ಮಾಡದೇ ಇರುವುದು ನಿಮ್ಮ ಕೈಯ್ಯಲ್ಲಿ ಬಿಟ್ಟದ್ದು, ನೀವು ಮಾಡುವುದಿಲ್ಲ ಎಂದರೆ ಈ ಕಡೆಯವರು ಏನೂ ಮಾಡುವುದಕ್ಕೆ ಬರುವುದಿಲ್ಲ ಸುಮ್ಮನೆ ತಿರುಗಿ ವಾಪಸು ಬರುತ್ತಾರೆ. ಅದೇ ಆ ಕಡೆಯವರಿಗೆ ಮಾಡುವುದಿಲ್ಲ ಎಂದರೆ ನಿಮ್ಮ ಕುರ್ಚಿಯೇ ಅಲ್ಲಿ ಇಲ್ಲದಂತೆ ಮಾಡುತ್ತಾರೆ. ಆ ರೀತಿ ಮಾಡುವುದನ್ನು ಬಿಡಬೇಕೆಂಬ ಈ ಸಂದರ್ಭದಲ್ಲಿ ಅವರಿಗೆ ಹೇಳಲಿಚ್ಛಿಸುತ್ತೇನೆ. ಇದಕ್ಕಿಂತ ಹೆಚ್ಚಾಗಿ ನಾನು ಹೋಂಮಿನಿಸ್ಟರ್ ಗುಲ್ಜಾರಿಲಾಲ್ ನಂದಾ ಅವರಿಗೆ ಒಂದು ಪತ್ರವನ್ನು ಬರೆಯಬೇಕೆಂದು ಮಾಡಿದ್ದೇನೆ, ಅದರ ಡ್ರಾಫ್ಟ್ ಮಾಡಿದ್ದೇನೆ.

ಶ್ರೀ ಬಿ. ಡಿ. ಜತ್ತಿ.—ಅದನ್ನು ಸ್ವಲ್ಪ ಓದಿ ನಮಗೂ ಎನ್‌ಲೈಟನ್ ಮಾಡಿ.

ಶ್ರೀ ಗಂಗಾಧರ ನಾಮೋಷಿ.—ಅದನ್ನು ನಾನು ಈ ದಿವಸ ಇಲ್ಲಿಗೆ ತಂದಿಲ್ಲ, ತಂದಿದ್ದರೆ ಓದಿ ತೋರಿಸುತ್ತಾ ಇದ್ದೆ ನಿಮಗೆ ಬೇಕಾದರೆ ಅದರ ಒಂದು ಕಾಪಿ ಕೊಡುತ್ತೇನೆ.

ಬೊಂಬಾಯಿನಲ್ಲಿ ಪೋಲೀಸ್‌ನವರು ಟೆಲಿಫೋನ್‌ಗೆ ಟೇಪ್‌ರೆಕಾರ್ಡ್ ಹಚ್ಚಿದ್ದಾರಂತೆ. ಹಾಗೆ ಇಲ್ಲೂಕೂಡ ಮಿನಿಸ್ಟರುಗಳ ಫೋನಿಗೂ ಪುತ್ತು ಕಾಂಗ್ರೆಸ್ ಮೆಂಬರುಗಳು ಇಳಿದುಕೊಂಡಿರುವ ರೆಜಿಸ್ಟ್ಲೇಟರ್ಸ್ ಹೋಮಿನಲ್ಲಿರುವ ಅವರುಗಳ ಫೋನಿಗೂ ಟೇಪ್‌ರೆಕಾರ್ಡ ಹಚ್ಚಿದ್ದೇ ಆದರೆ ಅವರು ಯಾವ ಯಾವ ವ್ಯವಹಾರಗಳನ್ನು ಮಾಡುತ್ತಾ ಇದ್ದಾರೆ ಅದು ತನ್ನಷ್ಟಕ್ಕೆ ತಾನೇ ನಿಲ್ಲುತ್ತದೆ. ಫೋನ್‌ನಲ್ಲಿ ಅವರು ಮಾತನಾಡುವುದನ್ನು ಸ್ವಲ್ಪ ಕೇಳಬೇಕು : ಏನಾಯಿತು ಸ್ವಾಮಿ ? ಅವರು ಎಲ್ಲಿಗೆ ಹೋದರು ? ಮಿನಿಸ್ಟರಿಗೆ ಹೇಳಿದ್ದೇನೆ, ಟ್ರಾನ್ಸ್‌ಫರ್ ಆಗುತ್ತದೆ, ಪ್ರೊಮೋಷನ್ ಆಗುತ್ತದೆ, ರೋಡ್ ಟ್ರಾನ್ಸ್‌ಪೋರ್ಟ್ ಲೈಸೆನ್ಸ್ ಸಿಕ್ಕುತ್ತದೆ, ಆದು ಆಯಿತು, ಇದು ಆಯಿತು ಅಂತ ಹೇಳಿ ಅವರು ಏನು ಮಾಡುತ್ತಾರೆ ಅವೆಲ್ಲವೂ ಕೂಡ ಟೇಪ್ ರೆಕಾರ್ಡ್ ಹಚ್ಚಿದ್ದೇ ಆದರೆ ಗೊತ್ತಾಗಿ ಹೋಗುತ್ತದೆ. ಆದ್ದರಿಂದ ಕರಪ್‌ಷನ್ ಬಹಳವಾಗಿ ನಿಂತು ಹೋಗುತ್ತದೆ ಎಂದು ಹೇಳುತ್ತೇನೆ. ಇವತ್ತಿನ ದಿವಸ ಹೇಳಬೇಕಾದರೆ ನಮ್ಮ ಮಿತ್ರರು ಎಷ್ಟೋ ಜನ ಇದ್ದಾರೆ ಅವರ ಹೆಸರನ್ನು ಹೇಳುವುದಿಲ್ಲ—ಹೇಳುವುದಕ್ಕೆ ಇಲ್ಲ ಪರವಾನಿಗಿ ಇಲ್ಲ--ಪ್ರೊಮೋಷನ್, ಟ್ರಾನ್ಸ್‌ಫರ್ ಇದಕ್ಕಾಗಿ ಅವರಲ್ಲಿಗೆ

ಬರುವ ಜನ ಎಷ್ಟಿರುತ್ತಾರೆ ಎಂದರೆ ರೆಜಿಸ್ಟ್ರೇಟರ್ಸ್ ಹೋಂನಲ್ಲಿ ಮೆಂಬರುಗಳಿಗೆ ಸರಿಯಾದ ವ್ಯಾಖ್ಯಾನಕ್ಕೆ ಊಟ ಸಿಕ್ಕುವುದಿಲ್ಲ—ಅವರ ಹಿಂದೆ 10-20 ಜನ ಇರುತ್ತಾರೆ, ಅವರಿಗೆ ಊಟ ಹಾಕುವ ಸಲುವಾಗಿ ನಾವು ಹೋದರೆ ಜಾಗ ಇಲ್ಲ ಎನ್ನುತ್ತಾರೆ. ಇಂತಹ ಪರಿಸ್ಥಿತಿ ಇವತ್ತಿನ ದಿವಸ ರೆಜಿಸ್ಟ್ರೇಟರ್ಸ್ ಹೋಂನಲ್ಲಿ ಬಂದಿದೆ.

ಇಷ್ಟೇ ಅಲ್ಲ ಈ ಸರ್ಕಾರ ಉಳಿದುಕೊಳ್ಳುವ ಸಲುವಾಗಿ ಏನು ಮಾಡಿದ್ದೀರಿ ನೋಡಿ. ಯಾವ ಕಾರಣದಿಂದ—ಅಂಧ್ರ ಚೀಫ್ ಮಿನಿಸ್ಟರನ್ನು ಒಲಿಸಿಕೊಳ್ಳುವ ಸಲುವಾಗಿಯೇ—ಗುಲ್ಬರ್ಗಾದಲ್ಲಿದ್ದ ಮೆಡಿಕಲ್ ಕಾಲೇಜು ಸೀಟಿನಲ್ಲಿ 12ರಲ್ಲಿ 8ನ್ನು ಆಂಧ್ರದವರಿಗೆ ಕೊಟ್ಟಿದ್ದೀರಿ? ನಾಗಪ್ಪ ಅಳ್ಳಿ ಮತ್ತು ನಿಜಲಿಂಗಪ್ಪನವರನ್ನು ಕೇಳಿದರೆ ಹೈದರಾಬಾದು ಕರ್ನಾಟಕ ಹಿಂದುಳಿದ ಭಾಗ ಎಂದು ಹೇಳುತ್ತಿದ್ದರೂ ಕೂಡ ಆ ರೀತಿ ಮಾಡಿರುವುದು ಫೇವರಿಟಿಸಿಸಂ, ನೆಪಾಟಿಸಂ ಅಲ್ಲವೇ? ಇದು ಸರ್ಕಾರದ ಮೇಲೆ ಬಂದಿದೆ, ಅಧಿಕಾರಿಗಳ ಮೇಲೆ ಬಂದಿದೆ, ಪ್ರೆಸ್‌ನವರ ಮೇಲೆ ಬಂದಿದೆ. ಲಂಚ ರುಷುವತ್ತು ತೆಗೆದುಕೊಳ್ಳತಕ್ಕ ಜನರು ಅಧಿಕಾರಿಗಳಾಗಿರಲಿ ಯಾರೇ ಆಗಿರಲಿ ಸರ್ಕಾರ ನಡೆಸತಕ್ಕ ಮಂತ್ರಿಗಳಲ್ಲಿ ಎಲ್ಲಿಯತನಕ ಪ್ರಾಮಾಣಿಕತನ ಬರುವುದಿಲ್ಲ ಅಲ್ಲಿಯವರೆಗೂ ಕೂಡ ಅವರ ಕೈಕೆಳಗೆ ಕೆಲಸಮಾಡತಕ್ಕವರಿಗೂ ಕೂಡ ಆ ಪ್ರಾಮಾಣಿಕತೆ ಬರುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಮಂತ್ರಿಗಳು ಅಪ್ರಾಮಾಣಿಕರಾಗಿದ್ದಾರೆ ಎಂದು ಅವರು ಹೇಳುತ್ತಾ ಇದ್ದಾರೆ.

ಶ್ರೀ ಬಿ. ಡಿ. ಜತ್ತಿ.—ಯಾರು ಯಾವ ದೃಷ್ಟಿಯಿಂದ ನೋಡುತ್ತಾರೆಯೋ ಹಾಗೆ ಕಾಣುತ್ತದೆ.

ಶ್ರೀ ಗಂಗಾಧರ ನಾಮೋಷಿ.—ಒಬ್ಬ ಮಿನಿಸ್ಟರು ಒಬ್ಬ ಸೆಕ್ರಟರಿಗೆ ಫೋನ್ ಮಾಡಿ ಹೇಳುತ್ತಾರೆ ಇಂತಹವರನ್ನು ಅಪಾಯಿಂಟ್ ಮಾಡಿ ಎಂದು ಅವರು ಅದು ಲೀಗಲ್ ಆಗಿ ಮಾಡುವುದಕ್ಕೆ ಬರುವುದಿಲ್ಲ ಎಂದರೆ ಅದೆರ್ಲಾ ಆಗುವುದಿಲ್ಲ ಮಾಡಿಯೇ ಮಾಡಬೇಕು ಎಂದು ಹೇಳುತ್ತಾರೆ, ಅವರು ಒಂದು ಮಾಡಿದರೆ ಅವರ ಕೈಕೆಳಗಿನ ಅಧಿಕಾರಿಗಳು ಅಂತಹ ಮತ್ತೊಂದೆರಡು ಮಾಡುತ್ತಾರೆ. ಇದಕ್ಕೆಲ್ಲಾ ಜವಾಬ್ದಾರರು ನೀವೇ, ಸರ್ಕಾರದವರು ಎಂದು ಹೇಳಬೇಕಾಗುತ್ತದೆ. ಈ ದಿವಸ ಇಲ್ಲಿ 3-4 ಜನ ಮಂತ್ರಿಗಳಿದ್ದೀರಿ. ತಾವು ನಾವು ಹೇಳಿದ್ದನ್ನೂ ಕೇಳಬೇಡಿ, ನಿಮ್ಮವರು ಎಂದು ಅವರು ಹೇಳಿದ್ದನ್ನೂ ಕೇಳಬೇಡಿ; ಇಂಥವರಿಗೆ ಒಂದು ಅನ್ಯಾಯವಾಗಿದೆ ಎಂಬ ದೂರು ನಿಮ್ಮ ಕಡೆಗೆ ಬಂದಾಗ ನೀವೇ ಅದನ್ನೆಲ್ಲಾ ಪರಿಶೀಲನೆ ಮಾಡಿ ತಪ್ಪಿದ್ದರೆ ಅವರಿಗೆ ನ್ಯಾಯ ದೊರೆಕಿಸಿ ಕೊಡಿ, ಇಲ್ಲವಾದರೆ ಅದು ಇರತಕ್ಕದ್ದೇ ಸರಿ, ಅದೇ ನ್ಯಾಯವಾದ್ದು ಎನ್ನುವುದಾದರೆ ಅವನ್ನು ತಾವು ಯಾವ ಎಂ. ಎಲ್. ಏ. ಆಗಲೀ ದಾಕ್ಷಿಣ್ಯವಿಲ್ಲದಂತೆ ತಿಳಿಸಿಬಿಡಿ. ಆದರೆ ನಮ್ಮ ಕಡೇ ಜನ ಬಂದು ಹೇಳಿದರೆ ತಾವು ಹೀಗೆ ಮಾಡಬಹುದೇ ಏನಾ ನಿಮ್ಮ ಕಡೆ ಜನಕ್ಕೆ ನೀವು ಹಾಗೆ ಮಾಡಲು ಸಾಧ್ಯವೇ ಇಲ್ಲ. ಏಕೆಂದರ ತಾವು ಹಾಗೆ ಮಾಡಿದರೆ ನಿಮ್ಮ ಸ್ಥಾನಗಳು ಭದ್ರವಾಗಿರಲಾರವು. ಹೀಗೆಲ್ಲಾ ಇರುವುದರಿಂದ ನಿಮ್ಮ ಕಡೆ ಜನ ಬಂದು ಏನು ಹೇಳಿದರೆ ಅದನ್ನು ಕೂತರೆ ಮಾಡಿಬಿಡುತ್ತೀರಿ. ಹೀಗಾಗಿ ಅನೇಕ ಅಧಿಕಾರಿಗಳಿಗೆ ವರ್ಗ ಆಗತಕ್ಕ ಕಡೆ ನಸ್ಪೆಂಡೂ, ನಸ್ಪೆಂಡಾಗತಕ್ಕ ಕಡೆ ವರ್ಗ ಹೀಗೆಲ್ಲಾ ಆಗುತ್ತಿವೆ. ಇದಕ್ಕೆ ಒಂದು ಉದಾಹರಣೆಯನ್ನು ಕೊಡುವುದಾದರೆ ನಮ್ಮ ಗುಲ್ಬರ್ಗ ಜಿಲ್ಲೆಯಲ್ಲಿ ಕೆಲಸಮಾಡತಕ್ಕ ಒಬ್ಬ ಅಧಿಕಾರಿಗೆ ಅಡಳಿತದಲ್ಲಿ ದಕ್ಷನಿದ್ದಾನೆಂದು ಅಲ್ ಇಂಡಿಯಾ ಮೆಡಲ್ ಬಂದಿದೆ. ಅಂಥ ಒಬ್ಬ ವ್ಯಕ್ತಿಯನ್ನು ಯಾರದೋ ಒಂದು ಕಂಪ್ಲೇಂಟಿನ ಮೇರೆ ಯಾವ ಒಂದು ವಿಚಾರಣೆಯನ್ನೂ ನಡೆಸದೆ ಇಮ್ಮೀಡಿಯಟ್ಟಾಗಿ ಅಲ್ಲಿಂದ ವರ್ಗಾಯಿಸಿದರು. ಆದರೆ ಏನು ವಿಚಾರ ಎಂಬುದನ್ನೇ ತಿಳಿಯದೆ ಅಲ್ಲಿನ ಅಧಿಕಾರಿಗಳು ಆತನು ಅಲ್ಲಿಂದ ವರ್ಗವಾಗಿದ್ದರೂ ಅದು ಗೊತ್ತಿಲ್ಲದೆ, ಆತನಿಗೆ ನಸ್ಪೆಂಡ್ ಆರ್ಡರನ್ನು ಕಳುಹಿಸಿದ್ದರು. ಆನಂತರ ಆತನಿಗೆ ಅಲ್ಲಿಂದ ವರ್ಗವಾಗಿದೆಯೆಂಬುದನ್ನು ತಿಳಿದು ಆ ನಸ್ಪೆಂಡ್ ಆರ್ಡರನ್ನು ವಜಾ ಮಾಡಿದರು. ಹೀಗಾಗಿ ಈ ದಿವಸ ಪ್ರಾಮಾಣಿಕತೆಯಿಂದ, ದಕ್ಷತೆಯಿಂದ ಕೆಲಸ ಮಾಡತಕ್ಕ ಆಫೀಸರುಗಳಿಗೆ ಒಂದು ಸುರಕ್ಷತೆ ಇಲ್ಲದಂತಾಗಿದೆ. ಹೀಗಾದಮೇಲೆ ಯಾವ ಅಧಿಕಾರಿ ತಾನೆ ಈ ಸರ್ಕಾರದಲ್ಲಿ ವಿಶ್ವಾಸವಿಟ್ಟು ಕೆಲಸ ಮಾಡಲು ಸಾಧ್ಯವಿದೆ? ನಮ್ಮ ಗುಲ್ಬರ್ಗ ಜಿಲ್ಲೆಯಲ್ಲಿ ಇಂಥ ಒಂದು ಗುಲೆದ್ದು ಒಬ್ಬರ ಹಿಂದೆ ಒಬ್ಬರಂತೆ 4 ಜನ ಡಿ. ಸಿ.ಗಳು ವರ್ಗವಾಗಿರುತ್ತಾರೆ. ಈಗ ಅಲ್ಲಿಗೆ ಯಾರನ್ನೇ ಪೋಸ್ಟ್ ಮಾಡಲಿ ಎಲ್ಲರೂ ಅಲ್ಲಿಗೆ ಬರಲು ಹೆದರುತ್ತಾರೆ. ಅಲ್ಲಿ ಎಷ್ಟೋ ಸಾರಿ ಅಲ್ಲಿನ ಡಿ. ಸಿ.ಗಳು ಈ ಕಾಂಗ್ರೆಸ್ ಎಂ ಎಲ್. ಏ ಗಳ ಹಿಂದೆ ಇಪರನ್ನು ಗಾಡಿ ಹತ್ತುವ ತನಕ ನಾಗುಹಾಕಿ ಅವರ ವರ್ಗವನ್ನು ಕ್ಯಾನ್‌ಸಲ್ ಮಾಡಿಸುವಂತೆ ಹೇಳಿರತಕ್ಕ ನಿದರ್ಶನಗಳನ್ನು ನಾನು ನೋಡಿದ್ದೇನೆ. ಆದರೆ ಶ್ರೀ ಕಡಿದಾಳ್ ಮಂಜಪ್ಪನವರೂ ಮತ್ತು ಶ್ರೀ ದೊಡ್ಡಮೇಟಿಯವರೂ ಈ ದೋಷಗಳು ಎಲ್ಲಾ ಪಾರ್ಟಿಗಳಲ್ಲೂ ಇವೆ ಎಂದು ಹೇಳುತ್ತಾರೆ. ಆದರೆ ಅವರು ಹೇಳತಕ್ಕ ಮಾತು ಇತ್ತ ನಮ್ಮ ಕಡೆ ಇರತಕ್ಕ ಪಾರ್ಟಿಗಳಿಗೆ ಅನ್ವಯಿಸುವುದಿಲ್ಲ. ಅದರೆ ಅವರು ಹೇಳತಕ್ಕ ಮಾತು ಅತ್ತಕಡೆಯಿರುವ ಪಾರ್ಟಿಗೆ ಅನ್ವಯಿಸುವ ಮಾತಾಗಿದೆ. ಆದಳತ

(ಶ್ರೀ ಗಂಗಾಧರ ನಾಮೋಷಿ)

ಪಕ್ಷ ನಮ್ಮ ಮಾತನ್ನು ಕೇಳದಿದ್ದರೆ ಅವರಿಗೇನೂ ಅಂಥಾ ಗಾಬರಿಯಾಗುವುದಿಲ್ಲ. ಆದರೆ ಅತ್ತ ಕಡೆ ಇರತಕ್ಕ ಪಾರ್ಟಿಯ ಮಾತನ್ನು ಕೇಳದಿದ್ದರೆ ಅವರ ಕುರ್ಚಿಗಳು ಭದ್ರವಾಗಿರುವುದಿಲ್ಲ. ಆದುದರಿಂದ ಈ ಕರಪ್ಷನ ಗೆಲ್ಲ ಅವರ ಪಾರ್ಟಿಯೇ ಕಾರಣ. ಶ್ರೀ ಗುಲ್ಜಾರಿಲಾಲ್ ನಂದಾ ಅವರು ದೇಶದಲ್ಲರ ತಕ್ಕ ಕರಪ್ಷನನು ಎರಡು ವರ್ಷಗಳೊಳಗೆ ತೆಗೆಯದಿದ್ದರೆ ನಾನು ಮನೆಗೆ ಹೋಗ ತ್ತೀನೆಂದು ಹೇಳಿದ್ದಾರೆ ಆದರೆ ಅವರು ಅಂಥಾ ದಕ್ಷರೇ ಇರಬಹುದು. ಆದಾಗ್ಯೂ ಒಬ್ಬರಿಂದ ಇದು ಎಂದಿಗೂ ಸಾಧ್ಯವಾಗತಕ್ಕ ಕಲಸವಲ್ಲ. ಇದನ್ನು ತಡೆಗಟ್ಟಲು ಇಡೀ ದೇಶದಲ್ಲರತಕ್ಕ ಪ್ರತಿಯೊಬ್ಬ ನಾಗರಿ ಕನೂ ಪ್ರಯತ್ನ ಮಾಡಿದರ ಮಾತ್ರ ಸಾಧ್ಯವಾದೀತೇ ವಿನಾ ಇಲ್ಲದಿದ್ದರೆ ಖಂಡಿತ ಸಾಧ್ಯವಿಲ್ಲ. ಇದನ್ನು ನಾನು ಒತ್ತಿ ಹೇಳುತ್ತೇನೆ. ಆದರೆ ನಮ್ಮ ಕಾಂಗ್ರೆಸ್ ಮಿತ್ರರು ಅಧಿಕಾರಿಗಳ ಮೇರೆ ದಬ್ಬಾಳಿಕೆ ನಡೆಸಬಾರದು ಎಂದು ಹೇಳುತ್ತೇನೆ.

ಇನ್ನು ಈ ನಾಮಿನೇಷನ್‌ಗಳ ವಿಚಾರಕ್ಕೆ ಬಂದರೆ ಈ ವಿಚಾರ ಇದು ಇಷ್ಟೇ ಎಂದು ಹೇಳಲು ಸಾಧ್ಯವಿಲ್ಲ. ಸಾರ್ವಜನಿಕ ಚುನಾವಣೆಗಳಲ್ಲಿ ಸೋತಂಥಾ ವ್ಯಕ್ತಿಗಳೊಬ್ಬರನ್ನು ಪಿ. ಎಸ್. ಸಿ.ಗೆ ಮೆಂಬರನ್ನಾಗಿ ಮಾಡಿದ್ದಾರೆ. ಆ ಸದಸ್ಯರು ಯಾರೆಂದರೆ ಶ್ರೀಮಾನ್ ಕೊಥಾವರೆ ಅವರು ಎಂದು ಜನ ಹೇಳುತ್ತಾರೆ.

Mr. DEPUTY SPEAKER.—Let him not bring in names.

Sri C. J. MUCKANNAPPA.—Yesterday, the Speaker allowed it Sir. ನೆನ್ನೆಯ ದಿವಸ ಅಧ್ಯಕ್ಷರು ಒಂದು ರೂಲಿಂಗನ್ನು ಕೊಟ್ಟಿದ್ದಾರೆ. ಇದರಲ್ಲಿ ಇನ್‌ಸಿನ್ಯುಯೇಷನ್ನು ಏನೂ ಇಲ್ಲ.

Mr. DEPUTY SPEAKER.—I am expressly asking him not to mention names. That is not right.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ.— ಅವರು ಸಾರ್ವಜನಿಕ ಚುನಾವಣೆಗೆ ನಿಂತು ಅದರಲ್ಲಿ ಸೋತಿದ್ದಾರೆ. ಅಂಥವರ ಹೆಸರನ್ನು ಹೇಳಿದರೇನು ತಪ್ಪು ? Yesterday the Speaker specifically said that names could be mentioned if they were to be mentioned not by way of insinuation.

ತಾವು ಸ್ವಲ್ಪ ಹಿಂದೆ ಮುಂದೆ ನೋಡಿಕೊಂಡು ರೂಲಿಂಗ್ ಕೊಟ್ಟರೆ ಅನುಕೂಲ.

I am prepared to obey and bow my head to the Chair. What is the insinuation ? The statement that was made was: A member who contested on the Congress ticket and was defeated in the general elections, was nominated by the Government as a Member of the Public Service Commission. What is the insinuation ? It is not my intention to show any scant courtesy to the Chair. But it has become very difficult for any Member to funtcion if it is repeatedly asserted that names should not be mentioned—names of firms should not be mentioned—questions should not be put, etc. I request you Sir, to kindly place yourself in the position of a Member. Taking all these things into consideration please permit us. If there is any insinuation I do realise ; it is not our business to tell anythig against any Member who is out of this House. Therefore, I request the Chair to be more considerate.

Mr. DEPUTY SPEAKER.—Names of people should not be brought in unnecessarily, unless it is is warranted by the circumstances. It depends upon circumstances. Unless it is relevant.....

Sri C. J. MUCKANNAPPA. My friend Sri Namoshi was mentioning the name because it was a relevant occasion. If the Chair says it is not relevent, even now I obey and bow my head to the Chair and even now I withdraw my remarks.

Mr. DEPUTY SPEAKER.—It is not relevant. He can only say that some member who has been defeated at the general elections has

been appointed as a Member of the Public Service Commission. That is enough.

ಶ್ರೀ ಗಂಗಾಧರನಾಪೋಷಿ.-ಶ್ರೀವಾನ್ ದೊಡ್ಡಮೇಟಿಯವರು ಮಾತನಾಡುತ್ತಿದ್ದಾಗ ಹೆಸರು ಹೇಳಬಹುದು ಎಂದು ಇಲ್ಲೇ ಮಾನ್ಯಮಂತ್ರಿಗಳು ಹೇಳಿದ್ದರು ಆಗ ಕರಪ್ಷನ್ ವಿಚಾರದಲ್ಲಿ ಅವರು ಹೇಳಿದರು. ಆದರೆ ಈಗ ಹೆಸರು ಹೇಳಬೇಡಿಎಂದರೆ ಇದರಲ್ಲಿ ನರಕಾರದ ಉದ್ದೇಶವೇನು ಎನ್ನುವುದು ಗೊತ್ತಾಗುತ್ತಿಲ್ಲ. ಕಾಂಗ್ರೆಸ್ ಕಮಿಟಿಗಳಲ್ಲಿ ಒಳಗುಂಪುಗಳು ಇರುತ್ತವೆ ಒಂದೊಂದು ಜಿಲ್ಲೆಯಲ್ಲೂ ಎರಡುಗುಂಪುಗಳಿವೆ. ಒಂದೊಂದು ಗುಂಪಿನವರು ಒಂದೊಂದು ಪಟ್ಟಿಮಾಡಿ ನರಕಾರಕ್ಕೆ ಕಳುಹಿಸಿ ಅಂತಹವರನ್ನು ನಾಮಿನೇಟು ಮಾಡಬೇಕೆನ್ನುತ್ತಾರೆ. ಆದರೆ ಪ್ರಭಾವ ಇರುವ ಗುಂಪಿನವರು ನರಕಾರಕ್ಕೆ ಟೆಲಿಫೋನ್ ಗಳ ಮೂಲಕ ಇಂತಹವರುಗಳನ್ನು ನಾಮಿನೇಟು ಮಾಡಬೇಡಿ ಎರೆಕ್ಷನ್ನು ಮೂಲಕ ಬರಲಿಕ್ಕೇಬೇಕು ಎಂದು ಒತ್ತಾಯಮಾಡುವಂತಹ ಕಾಂಗ್ರೆಸ್ಸಿನವರು ಕೂಡ ಇದ್ದಾರೆ. ಯೋಗ್ಯತೆ ಇರುವಂತಹವರನ್ನು ನಾಮಿನೇಟು ಮಾಡಿದ್ದರೆ ಆ ಆರ್ಡರನ್ನು ಕ್ಯಾನ್ಸಲು ಮಾಡುತ್ತಾರೆ. ನಮ್ಮ ಭಾಗದಲ್ಲಿ ಹೇಳಬೇಕಾದರೆ ಎಂ. ಎಸ್. ಆರ್. ಟಿ. ಡಿ. ಇರಾಖೆಯ ಕಮಿಟಿಯಲ್ಲಿ ಹೆಸರನ್ನು ಸೈನುಮಾಡುವದಕ್ಕೆ ಬಾರದೆ ಇರುವಂತಹ ಮನುಷ್ಯರನ್ನು ನಾಮಿನೇಟು ಮಾಡಿದ್ದಾರೆ. ಹಾಗೆಯೇ ಕೋಆಪರೇಷನ್ನು ಇರಾಖೆಯ ವಿಚಾರವಾಗಿಯೂ ನಾನೇನು ಹೇಳುವಂತೆಯೇ ಇಲ್ಲ. ಸ್ವಲ್ಪತಿಳಿವಳಿಕೆ ಇರುವಂತಹವರನ್ನು ಇಂತಹ ಕಮಿಟಿಗಳಲ್ಲಿ ನೇಮಕ ಮಾಡಿದರೆ ಕೆಲಸ ಚೆನ್ನಾಗಿ ಆಗುತ್ತದೆ. ಹೀಗೇ ನೂರಾರು ಕಮಿಟಿಗಳಾಗಿವೆ. ಮೈಸೂರಿನ ಎರೆಕ್ಟಿಸಿಟಿ ಬೋರ್ಡಿನಲ್ಲಿ ಮೆಂಬರಾಗಿರುವವರು ಯಾರೋ ಬಂಗಾರದಲ್ಲಿ ಎಷ್ಟೊ ವ್ಯವಹಾರ ಮಾಡುವವರೂ ಇದ್ದಾರೆ ಎಂದು ಎಷ್ಟೋನಲ ಇಲ್ಲೇ ತಿಳಿದು ಬಂದಿದೆ. ಅಷ್ಟೇ ಅಲ್ಲ. ಮೈಸೂರುದೇಶದ ನರಕಾರಿ ಬ್ಯಾಂಕಿನಲ್ಲಿ ಬಿಟ್ಟು ಖಾಸಗಿ ಬ್ಯಾಂಕಿನಲ್ಲಿ ವ್ಯವಹಾರನಡೆಸುತ್ತಿದ್ದಾರೆ. ಇಂತಹ ಅಕ್ರಮಗಳನ್ನೆಲ್ಲಾ ಪರಿಶೀಲಿಸಲು ಸರಿಯಾದ ಒಂದು ಕಮಿಟಿಯನ್ನು ಸ್ಥಾಪನೆ ಮಾಡಬೇಕೆಂದು ಬಂದಿರುವ ಈ ನಿರ್ಣಯವು ಸೂಕ್ತವಾಗಿದೆ. ಹೀಗೆ ಇಂತಹ ಅಕ್ರಮಗಳನ್ನು ಬೆಳೆಯುವಂತೆ ಮಾಡುವುದು ತಪ್ಪು. ಹಿಂದೆ ಮಿತವ್ಯಯ ಸಾಧನೆಗಾಗಿ ಶ್ರೀ ವಾನ್ ಎ. ಜಿ. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಮಾಡಿದರು. ಅವರು ಒಂದು ರಿಪೋರ್ಟನ್ನು ಕೂಡ ಕೊಟ್ಟಿದ್ದರು. ಅದರಲ್ಲಿ ಒಂದೊಂದು ಕೈಲು ಹೇಗೆ ಅರು ಆರುತಿಂಗಳಕಾಲ ವರ್ಷಗಟ್ಟಲೆ ಕೊಳೆಯುತ್ತಿತ್ತು ಎಂಬುದನ್ನು ಅದರ ಮೇಲೆ ಏನುಕ್ರಮ ತೆಗೆದುಕೊಳ್ಳಬೇಕು ಎನ್ನುವ ವಿವರಗಳನ್ನೂ, ಹಾಗೂ ಯಾವ ಯಾವ ಮಂತ್ರಿಗಳಲ್ಲಿ, ಇರಾಖೆಗಳಲ್ಲಿ ಕೆಲಸ ಹೇಗೆ ನಿಧಾನವಾಗುತ್ತಿತ್ತು ಎನ್ನುವುದನ್ನೂ ಹೇಳಿದೆ. ಅದರಂತೆ ಈಗಲೂ ಒಂದು ಕಮಿಟಿ ನೇಮಕಮಾಡಿ ಅವರಿಂದ ಬರತಕ್ಕ ರಿಪೋರ್ಟಿನ ಆಧಾರದಮೇಲೆ ಇರಾಖಾಧಿಕಾರಿಗಳು ಏಗಾಗ್ಗೆ ಇನ್ಸ್‌ಪೆಕ್ಷನ್ನು ಮಾಡಿ ನರಕಾರಕ್ಕೆ ವರದಿ ಕಳುಹಿಸುವಂತೆ ಮಾನ್ಯ ಗೃಹಮಂತ್ರಿಗಳು ಏರ್ಪಾಡುಮಾಡಿ ಆದನ್ನು ಕಾರ್ಯರೂಪಕ್ಕೆ ತರಬೇಕು. ಅದರ ನಲುವಾಗಿ ಇಂತಹ ಒಂದು ಕಮಿಟಿಯನ್ನು ನೇಮಕ ಮಾಡುವುದು ಅವಶ್ಯಕ ಎಂದು ಹೇಳಿ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶಕೊಟ್ಟಿದ್ದಕ್ಕಾಗಿ ಅವನ್ನು ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇವೆ.

†ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ. ಮಾನ್ಯ ಅಧ್ಯಕ್ಷರೇ, ಲಂಚ ಮತ್ತು ಸ್ವಜನಪಕ್ಷಪಾತದ ವಿಚಾರದಲ್ಲಿ ಈಗಾಗಲೇ ಸಾಕಷ್ಟು ವಿಚಾರಗಳನ್ನು ನಮ್ಮ ಪಕ್ಷದ ಹಾಗೂ ಅಧಿಕಾರ ಪಕ್ಷದ ಸದಸ್ಯರುಗಳು ಹೇಳಿದ್ದಾರೆ. ಲಂಚಕ್ಕೆ ಗೌರವ ಎನ್ನುವುದೇ ಇಲ್ಲ. ಇದರಿಂದ ಈ ದೇಶದ ಜನರಿಗೂ ಗೌರವವಿಲ್ಲ. ಕಾರಣವನ್ನು ಹೇಳುವಾಗ ಇಲ್ಲದ ಸಲ್ಲದ ವಿಚಾರಗಳನ್ನು ಪ್ರಸ್ತಾಪಿಸಿ ಇಲ್ಲಿ ಹೇಳುತ್ತಾರೆ. ಆ ರೀತಿ ಮಾಡುವುದಕ್ಕೆ ಅವಕಾಶವಿಲ್ಲ ಎಂದು ಈ ಸಭೆಗೆ ಆಗಲೇ ಹೇಳಿದರು. ಹಾಗೆ ಹೇಳುವುದನ್ನು ನೋಡಿದರೆ ಅವರಲ್ಲೇ ಏನೋ ಹುಳುಕು ಇದೆ ಎಂದು ತಿಳಿಯುತ್ತದೆ. ನಮ್ಮ ಮಂತ್ರಿಗಳ ಹತ್ತಿರ ಪಾನ ನಿರೋಧದ ವಿಷಯದಲ್ಲಿ ಲಂಚ ಇದೆ ಎಂದು ಹೇಳಿದರೆ ಅವರು ನಿಮಗಿಂತಲೂ ನನಗೇ ಹೆಚ್ಚಾಗಿ ಗೊತ್ತಿದೆ ಎನ್ನುತ್ತಾರೆ. ಹಾಗೆ ಈ ವಿಷಯವನ್ನೆಲ್ಲ ಹೇಳುವ ಸಂಭವ ಕಡು ಬಂದಿಲ್ಲ. ಹಾಗೆ ಗೊತ್ತಿದ್ದರೂ ಅದನ್ನೆಲ್ಲಾ ಕಾರ್ಯಗತ ಮಾಡುವುದಕ್ಕೆ ಏಕೆ ಆಗಲಿಲ್ಲ ಎನ್ನುವುದನ್ನು ಯಾರೂ ಯೋಚನೆ ಮಾಡಲಿಲ್ಲ. ಇದಕ್ಕೆಲ್ಲಾ ನೀವೇ ಕಾರಣರಲ್ಲವೇ ? ನಿಮ್ಮ ಜಾತಿಯೇ ಹೀಗೆ ಎಂದು ತೋರುತ್ತದೆ. ಜನ ನಿಮ್ಮಲ್ಲಿ ವಿಶ್ವಾಸವಿಟ್ಟು ಅಧಿಕಾರ ಕೊಟ್ಟಿದ್ದಕ್ಕೆ ಅವರಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಲು ಇಲ್ಲಿಯವರೆಗೂ ಅವಕಾಶವಾಗಲಿಲ್ಲ. ಸೀಗೆ ನಿವಿಗೆ ಅಧಿಕಾರ ಕೊಟ್ಟಂತಹ ಜನಕ್ಕೆ ಅನುಕೂಲ ಮಾಡಲು ತಕ್ಕಕ್ರಮ ಏಕೆ ತೆಗೆದುಕೊಳ್ಳಲಿಲ್ಲ ! ಇದರ ಬಗ್ಗೆ ಮಂತ್ರಿಗಳನ್ನು ಕೇಳಿದರೆ ನಿಮಗಿಂತ ನೂರರಷ್ಟು ನಮಗೇ ಜಾಸ್ತಿ ಗೊತ್ತಿದೆ ಎಂದು ಹೇಳುವುದಾದರೆ, ನೀವು ಈ ನರಕಾರದಲ್ಲಿ ಅಧಿಕಾರ ಮಾಡುವುದಕ್ಕೆ ಸಾಧ್ಯವಿಲ್ಲ. ಆ ಪಕ್ಷದಲ್ಲೇ ಮಂತ್ರಿಗಳಾಗಿರತಕ್ಕವರು ಈ ರೀತಿ ಹೇಳಿದರೆ ನಾನು ಕೇಳುವುದಕ್ಕೆ ತಯಾರಾಗಿಲ್ಲ. ಆಡಳಿತಪಕ್ಷದಲ್ಲಿರತಕ್ಕ ಕಾನೂನುಗಳನ್ನು

(ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ)

ಉತ್ತಮವಾಗಿ ಜಾರಿಮಾಡಲು ಒಂದು ವ್ಯವಸ್ಥಿತ ರೂಪದಲ್ಲಿ ಕ್ರಮಗಳನ್ನು ತೆಗೆದುಕೊಳ್ಳುವುದನ್ನು ಅಧಿಕಾರಿಗಳು ಅರಿತುಕೊಳ್ಳಬೇಕು. ಕರಪ್ಷನ್ ಹೇಗಿದೆ ಎನ್ನುವುದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ನಾನು ಇಲ್ಲಿ ನಾಲ್ಕು ಪ್ರಶ್ನೆಗಳನ್ನು ಕಳಿಸಿದಾಗ ಅವಕ್ಕೆ ಉತ್ತರ ಕೊಡಲು ನಮ್ಮ ಸರಕಾರದಲ್ಲಿ ಇಬ್ಬರು ಸೆಕ್ರೆಟರಿಗಳು, ಖಾತೆ ಇಲ್ಲದ ಮೂರು ನಾಲ್ಕು ಜನ ಡೆಪ್ಯುಟಿ ಮಂತ್ರಿಗಳು ಇದ್ದಾರೆ. ಹೀಗೆ ನಮ್ಮ ದೇಶದ ದುಡ್ಡನ್ನು ಇದಕ್ಕಾಗಿ ವ್ಯಯಮಾಡುತ್ತಾರೆ. ಒಂದು ಪೆಕ್ಷನ್ನಿನಲ್ಲಿ ಈ ಇಲಾಖೆಗೆ ಸಂಬಂಧಪಟ್ಟಂತೆ 3-4 ಪ್ರಶ್ನೆಗಳು ಬಂದರೆ, ಅದೇ ಹೆಚ್ಚು ಅಥವಾ ಪ್ರಶ್ನೆಗಳೇ. ಬಾರದೇ ಇದ್ದರೂ ಇರಬಹುದು ಇದಕ್ಕೆ ಒಂದು ಆಫೀಸು ಒಬ್ಬ ಸೆಕ್ರೆಟರಿ ಅವರ ಸಹಾಯಕ್ಕೆ ಇನ್ನಿಬ್ಬರು ಸಹಾಯಕ ಕಾರ್ಯದರ್ಶಿಗಳು ಎಂದು ಮಾಡಿದರೆ ಇದರಿಂದ ಕರಪ್ಷನ್ ಬೆಳೆದಂತಾಗುವುದಿಲ್ಲವೇ. ಹೀಗೆಲ್ಲ ದುರ್ವ್ಯವಹಾರಗಳು ನಡೆಯುತ್ತಿರುವಾಗ ಸರಕಾರ ಅವನ್ನೆಲ್ಲಾ ನೋಡಿಕೊಂಡು ಸುಮ್ಮನಿದೆಯಲ್ಲ ಎಂದು ಹೇಳಬೇಕಾಗಿದೆ. ಒಂದು ಜಿಲ್ಲೆಯ ಡೆಪ್ಯೂಟಿ ಕಮಿಷನರಿಗಿಂತ ಕಡಮೆ ದರ್ಜೆಯ ಅಧಿಕಾರಿಗಳು ಯಾವ ಲೈನನ್ನನ್ನೂ ಕೊಡಬಾರದು ಎಂದು ಮಾಡಬಹುದು.

Mr. DEPUTY SPEAKER.—The Hon'ble Member will continue next day the House will now rise and meet again at 1 p. m. on 16th December 1963.

The House adjourned at Thirty Minutes past Twelve of the Clock to meet again at One of the Clock on Monday, the 16th December 1963.

KSA LIBRARY, B'lore
B004803
328.32402 548 LAD,1963
JJ33